بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

ಅಲ್ಲಾಹನ ಉಪದೇಶ

ಮಕ್ಕಳ ತರಬೇತಿ: ಈಮಾನ್, ನಮಾರ್ಘ್ ಮತ್ತು ಆಖಿರತ್‌ನ ಸಂರಕ್ಷಣೆ

يَا أَيُّهَا الَّذِينَ آمَنُوا قُوا أَنْفُسَكُمْ وَأَهْلِيكُمْ نَارًا (ಅತ್ತಹ್ರೀಮ್ : 07)

ಅಂದರೆ: ಎಲೈ ವಿಶ್ವಾಸಿಗಳೇ, ನೀವು ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ನರಕಾಗ್ನಿಯಿಂದ ರಕ್ಷಿಸಿರಿ.

وَأْمُرْ أَهْلَكَ بِالصَّلَاةِ وَاصْطَبِرْ عَلَيْهَا (ತಾಹಾ : 133)

ಅಂದರೆ: ನಮಾರ್ಘ್ ಅನುಷ್ಠಿಸಲಿಕ್ಕೆ ನೀನು ನಿನ್ನ ಕುಟುಂಬಕ್ಕೆ ಆಜ್ಞಾಪಿಸು.

ಸಂಪುಟ: 07, ಸಂಚಿಕೆ: 45, 05 ನವೆಂಬರ್ 2026, 05 ನಬುವ್ವತ್ 1405 ಹಿಜರಿ ಶಮ್ಸಿ,
24 ಜಮಾದಿ ಅಲ್ ಅವ್ವಲ್ 1448 ಹಿಜರಿ ಖಮರಿ. (www.akhbarbadr.in)

ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

ಮಕ್ಕಳ ತರಬಿಯತ್: ತಂದೆ–ತಾಯಿಗಳ ಜವಾಬ್ದಾರಿ ಮತ್ತು ನಮಾರ್ಘ್‌ನ ಪ್ರಾಯೋಗಿಕ ತರಬಿಯತ್

عَنْ عَبْدِ اللّٰهِ بْنِ عُمَرَ رَضِيَ اللّٰهُ عَنْهُمَا قَالَ: قَالَ رَسُولُ اللّٰهِ ﷺ: أَلَا كُلُّكُمْ رَاعٍ وَكُلُّكُمْ مَسْئُولٌ عَنْ رَعِيَّتِهِ، وَالرَّجُلُ رَاعٍ عَلَى أَهْلِ بَيْتِهِ وَهُوَ مَسْئُولٌ عَنْهُمْ.


ಎಚ್ಚರಿಕೆ! ನಿಮ್ಮಲ್ಲಿ ಪ್ರತಿಯೊಬ್ಬರೂ ಹೊಣೆಗಾರರಾಗಿದ್ದೀರಿ ಮತ್ತು ಪ್ರತಿಯೊಬ್ಬರಿಗೂ ತನ್ನ ಅಧೀನದಲ್ಲಿರುವವರ ಕುರಿತು ಪ್ರಶ್ನಿಸಲಾಗುವುದು. ಪುರುಷನು ತನ್ನ ಕುಟುಂಬದ ಹೊಣೆಗಾರನಾಗಿದ್ದಾನೆ; ಆದ್ದರಿಂದ ಅವನ ಕುಟುಂಬದ ಕುರಿತು ಅವನನ್ನು ಪ್ರಶ್ನಿಸಲಾಗುವುದು.

(ಸಹೀಹ್ ಅಲ್–ಬುಖಾರಿ, ಕಿತಾಬುನ್ನಿಕಾಹ್, ಹದೀಸ್–5200; ಸಹೀಹ್ ಮುಸ್ಲಿಂ, ಕಿತಾಬುಲ್–ಇಮಾರಹ್, ಹದೀಸ್ 1829)

عَنْ عَبْدِ اللّٰهِ بْنِ عَمْرٍو رَضِيَ اللّٰهُ عَنْهُمَا قَالَ: قَالَ رَسُولُ اللّٰهِ ﷺ: مُرُوا أَوْلَادَكُمْ بِالصَّلَاةِ وَهُمْ أَبْنَاءُ سَبْعِ سِنِينَ، وَاضْرِبُوهُمْ عَلَيْهَا وَهُمْ أَبْنَاءُ عَشْرٍ، وَفَرِّقُوا بَيْنَهُمْ فِي الْمَضَاجِعِ.

ನಿಮ್ಮ ಮಕ್ಕಳಿಗೆ ಏಳು ವರ್ಷ ವಯಸ್ಸಾದಾಗ ನಮಾರ್ಘ್ ನಿರ್ವಹಿಸಲು ಆದೇಶಿಸಿ. ಅವರು ಹತ್ತು ವರ್ಷ ವಯಸ್ಸಾದಾಗ ನಮಾರ್ಘ್ ವಿಷಯದಲ್ಲಿ ಇನ್ನಷ್ಟು ಕಟ್ಟುನಿಟ್ಟಾಗಿ ತಿಳಿಸಿ, ಮತ್ತು ಅವರ ಮಲಗುವ ಹಾಸಿಗೆಗಳನ್ನು ಪ್ರತ್ಯೇಕಿಸಿ.

(ಸುನ್ನನ್ ಅಬೂ ದಾವೂದ್, ಕಿತಾಬುಸ್ಸಲಾತ್, ಹದೀಸ್ 495)



ಹರ್ಘ್‌ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

ಮಕ್ಕಳಿಗಾಗಿ ದುಆಗಳು

ಹರ್ಘ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಮಕ್ಕಳ ತರಬೇತಿಯ ವಿಷಯದಲ್ಲಿ ಅಲ್ಲಾಹನ ಕೃಪೆ ಮತ್ತು ಪ್ರಾರ್ಥನೆಗಳ ಮಹತ್ವವನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ:

"ಮಾರ್ಗದರ್ಶನ ಮತ್ತು ನಿಜವಾದ ತರಬೇತಿ ನೀಡುವುದು ದೇವನ ಕಾರ್ಯವಾಗಿದೆ. ಅತಿಯಾಗಿ ಬೆನ್ನಟ್ಟುವುದು ಮತ್ತು ಯಾವುದಾದರೂ ಒಂದು ವಿಷಯವನ್ನು ಒತ್ತಾಯಿಸುವುದನ್ನು ಮಿತಿಮೀರಿಸುವುದು, ಅಂದರೆ ಪ್ರತಿಯೊಂದು ವಿಷಯದಲ್ಲಿಯೂ ಮಕ್ಕಳನ್ನು ತಡೆಯುವುದು ಮತ್ತು ಗದರಿಸುವುದು, ನಾವು ತಾವೇ ಮಾರ್ಗದರ್ಶನದ ಮಾಲೀಕರು, ಮತ್ತು ನಮ್ಮ ಇಚ್ಛೆಯಂತೆ ಅವರನ್ನು ಒಂದು ದಾರಿಯಲ್ಲಿ ನಡೆಸಬಹುದು ಎಂಬುದನ್ನು ತೋರಿಸುತ್ತದೆ. ಇದು ಒಂದು ರೀತಿಯ ಗುಪ್ತ ಶಿರ್ಕ್ (ಅಲ್ಲಾಹನೊಂದಿಗೆ ಪಾಲುದಾರರನ್ನು ಸೇರಿಸುವುದು) ಆಗಿದೆ. ನಮ್ಮ ಜಮಾಅತ್ ಇದರಿಂದ ದೂರವಿರಬೇಕು..... ನಾವು ನಮ್ಮ ಮಕ್ಕಳಿಗಾಗಿ ಪ್ರಾರ್ಥನೆ ಮಾಡುತ್ತೇವೆ ಮತ್ತು ಸಾಮಾನ್ಯವಾಗಿ ಶಿಕ್ಷಣದ ನಿಯಮಗಳು ಹಾಗೂ ಶಿಷ್ಟಾಚಾರಗಳನ್ನು ಪಾಲಿಸುವಂತೆ ಅವರಿಗೆ ಕಲಿಸುತ್ತೇವೆ. ಅಷ್ಟೇ, ಅದಕ್ಕಿಂತ ಹೆಚ್ಚೇನೂ ಇಲ್ಲ. ನಂತರ ನಮ್ಮ ಸಂಪೂರ್ಣ ಭರವಸೆಯನ್ನು ಅಲ್ಲಾಹನ ಮೇಲೆಯೇ ಇಡುತ್ತೇವೆ. ಯಾರಲ್ಲಿ ಸೌಭಾಗ್ಯದ ಬೀಜವಿದೆಯೋ, ಅದು ತನ್ನ ಸಮಯ ಬಂದಾಗ ಹಸಿರಾಗಿ ಬೆಳೆದು ಫಲಿಸುತ್ತದೆ."

(ಮಲ್ಫೂಝಾತ್, ಸಂಪುಟ 1, ಪುಟ–309, 2003ರ ಆವೃತ್ತಿ, ರಬ್ವಾ)

ತಫ್ಸೀರ್ ಕಬೀರ್‌ನಿಂದ ಉಲ್ಲೇಖ

ಉನ್ನತ ಸಂತತಿಯ ನಿರ್ಮಾಣ: ಮಕ್ಕಳ ತರಬಿಯತ್ ಮತ್ತು ತಕ್ವಾದ ಜವಾಬ್ದಾರಿ

ಹರ್ಘ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಹೀಗೆ ಹೇಳುತ್ತಾರೆ:

"ತಂದೆ–ತಾಯಿಗಳು ತಮ್ಮ ಮಕ್ಕಳಿಗೆ ಉನ್ನತ ಮಟ್ಟದ ತರಬೇತಿ ನೀಡಿದರೆ ಮತ್ತು ತಮ್ಮ ಮಕ್ಕಳ ಸತ್ಕಾರ್ಯಗಳು ಕೇವಲ ಅವರ ಸ್ವಂತ ಜೀವನಕ್ಕೆ ಸೀಮಿತವಾಗದೆ, ಅವುಗಳ ಪ್ರಭಾವವು ತಲೆಮಾರಿನಿಂದ ತಲೆಮಾರಿಗೆ ಅವರ ಸಂತತಿಯಲ್ಲಿಯೂ ಮುಂದುವರಿಯುವಂತೆ ಪ್ರಯತ್ನಿಸಿದರೆ, ಅವರು ಇಸ್ಲಾಮ್ ಮತ್ತು ಪವಿತ್ರ ಪ್ರವಾದಿ ಹರ್ಘ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರಿಗೆ ಹೆಮ್ಮೆಯ ಕಾರಣವಾಗುವಂತಹ ಉನ್ನತ ಗುಣಮಟ್ಟದ ತಲೆಮಾರುಗಳನ್ನು ಬೆಳೆಸಬಲ್ಲರು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ದುಃಖದ ಸಂಗತಿಯೆಂದರೆ, ತಮ್ಮ ಮಕ್ಕಳ ಸರಿಯಾದ ತರಬೇತಿಯ ಕಡೆಗೆ ಗಮನ ಹರಿಸುವವರು ಬಹಳ ಕಡಿಮೆ. ಅವರಲ್ಲಿ ವೈಯಕ್ತಿಕವಾಗಿ ತಕ್ವಾ (ದೇವಭಯ) ಇರುತ್ತದೆ, ಆಧ್ಯಾತ್ಮಿಕತೆಯೂ ಇರುತ್ತದೆ, ಉನ್ನತ ನೈತಿಕ ಗುಣಗಳೂ ಇರುತ್ತವೆ, ದಯೆ ಮತ್ತು ಕರುಣೆಯ ಭಾವನೆಗಳೂ ಇರುತ್ತವೆ, ಸಹನೆಯೂ ಇರುತ್ತದೆ, ಜ್ಞಾನವನ್ನು ಪಡೆಯುವ ಹಂಬಲವೂ ಇರುತ್ತದೆ ಮತ್ತು ಸತ್ಕಾರ್ಯಗಳಲ್ಲಿ ಮುಂದುವರಿಯುವ ಸಾಮರ್ಥ್ಯವೂ ಇರುತ್ತದೆ. ಆದರೆ ಈ ಗುಣಗಳನ್ನು ತಮ್ಮ ಮಕ್ಕಳಲ್ಲಿಯೂ ಬೆಳೆಸಲು ಪ್ರಯತ್ನಿಸಬೇಕು ಎಂಬ ವಿಚಾರದ ಕಡೆಗೆ ಅವರು ಎಂದಿಗೂ ಗಮನ ಹರಿಸುವುದಿಲ್ಲ. ನಿಸ್ಸಂದೇಹವಾಗಿ, ವಂಶಪಾರಂಪರ್ಯದ ಮೂಲಕವೂ ತಂದೆ–ತಾಯಿಗಳ ಕೆಲವು ಗುಣಗಳು ಮಕ್ಕಳಿಗೆ ವರ್ಗಾವಣೆಯಾಗುತ್ತವೆ. ಆದರೆ ಉನ್ನತ ಗುಣಮಟ್ಟದ ಸಂತತಿಯ ನಿರ್ಮಾಣವು ಬಹುಮಟ್ಟಿಗೆ ಉತ್ತಮ ತರಬೇತಿಯೊಂದಿಗೆ ಸಂಬಂಧಿಸಿದೆ. ಆದ್ದರಿಂದ ಒಬ್ಬ ಮುಮಿನ್‌ನ ಕರ್ತವ್ಯವೆಂದರೆ ಈ ವಿಷಯದಲ್ಲಿ ಎಂದಿಗೂ ನಿರ್ಲಕ್ಷ್ಯ ತೋರಿಸಬಾರದು.

(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)

ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ.
ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

ಸಂಪಾದಕೀಯ

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸರು ಅಯ್ಯದಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಜಲ್ಸಾ ಸಾಲಾನಾ ಯು.ಕೆ. 2026ರ ಎರಡನೇ ದಿನದ ಮಧ್ಯಾಹ್ನದ ಅಧಿವೇಶನದ ಭಾಷಣದ ಸಾರಾಂಶ

ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹಾ ಪಠಣದ ನಂತರ ಹುಝೂರ್ ಅನ್ವರ್ ಅಯ್ಯದಲಾಹು ತಆಲಾ ಅವರು ಹೇಳಿದರು:

"ಈ ಸಮಯದಲ್ಲಿ ವರ್ಷಪೂರ್ತಿ ಅಲ್ಲಾಹ್ ತಆಲಾ ಅವರ ಫಝ್ಲ್‌ನಿಂದ ಜಮಾಅತೆ ಅಹ್ಮದೀಯ್ಯಾ ಮೇಲೆ ಸಂಭವಿಸಿದ ಅನುಗ್ರಹಗಳ ಸಂಕ್ಷಿಪ್ತ ಚಿತ್ರಣವನ್ನು ನಾನು ನಿಮ್ಮ ಮುಂದೆ ಇಡುತ್ತೇನೆ."

ಹೊಸ ಜಮಾಅತ್‌ಗಳ ಸ್ಥಾಪನೆ

ಈ ವರ್ಷ ಪಾಕಿಸ್ತಾನವನ್ನು ಹೊರತುಪಡಿಸಿ ವಿಶ್ವದಾದ್ಯಂತ 398 ಹೊಸ ಜಮಾಅತ್‌ಗಳು ಸ್ಥಾಪನೆಯಾಗಿವೆ. ಇವುಗಳ ಹೊರತಾಗಿ 811 ಹೊಸ ಸ್ಥಳಗಳಲ್ಲಿ ಮೊದಲ ಬಾರಿಗೆ ಅಹ್ಮದಿಯ್ಯತ್‌ನ ಸಸಿ ನೆಡಲಾಗಿದೆ.

ಈ ವರ್ಷ ಬೆನಿನ್‌ನಲ್ಲಿ 86 ಹೊಸ ಜಮಾಅತ್‌ಗಳು ಸ್ಥಾಪನೆಯಾಗಿವೆ. ಅದರ ನಂತರ ಕಾಂಗೋ ಬ್ರಾಝಾವಿಲ್, ಲೈಬೀರಿಯಾ ಹಾಗೂ ಇತರ ದೇಶಗಳು ಸ್ಥಾನ ಪಡೆದಿವೆ.

ಹೊಸ ಮಸೀದಿಗಳ ಸ್ಥಾಪನೆ

ಅದೇ ರೀತಿ ವರ್ಷಪೂರ್ತಿ ನಿರ್ಮಿಸಲ್ಪಟ್ಟ ಅಥವಾ ಜಮಾಅತ್‌ಗೆ ಲಭಿಸಿದ ಮಸೀದಿಗಳ ಒಟ್ಟು ಸಂಖ್ಯೆ 172 ಆಗಿದೆ. ಇವುಗಳಲ್ಲಿ 133 ಹೊಸ ಮಸೀದಿಗಳು ನಿರ್ಮಿಸಲ್ಪಟ್ಟಿವೆ ಮತ್ತು 39 ನಿರ್ಮಿತ ಮಸೀದಿಗಳು ಜಮಾಅತ್‌ಗೆ ಲಭಿಸಿವೆ.

ಮಿಷನ್ ಹೌಸ್‌ಗಳು ಮತ್ತು ತಬ್ಲೀಗ್ ಕೇಂದ್ರಗಳ ಹೆಚ್ಚಳ

ಅಲ್ಲಾಹನ ಅನುಗ್ರಹದಿಂದ ಈ ವರ್ಷ 41 ದೇಶಗಳಲ್ಲಿ 127 ಮಿಷನ್ ಹೌಸ್‌ಗಳು ಹೆಚ್ಚಾಗಿವೆ. ಇದರಲ್ಲಿ ಕೀನ್ಯಾ ಮೊದಲ ಸ್ಥಾನದಲ್ಲಿದೆ. ನಂತರ ಘಾನಾ ಮತ್ತು ಇಂಡೋನೇಷ್ಯಾ, ಮೂರನೇ ಸ್ಥಾನದಲ್ಲಿ ನೈಜರ್ ಇದೆ.

ವಖಾರೆ ಅಮಲ್ ಮೂಲಕ ಕೆಲಸ ಮಾಡುವುದರಿಂದ ಈ ವರ್ಷ ಜಮಾಅತ್‌ಗೆ ಮೂರು ಮಿಲಿಯನ್ ಅಮೆರಿಕನ್ ಡಾಲರ್‌ಗಳ ಆರ್ಥಿಕ ಉಳಿತಾಯವಾಗಿದೆ.

ವಕಾಲತೆ ಇಶಾಅತ್

ವಕಾಲತೆ ಇಶಾಅತ್‌ನ ವರದಿಯ ಪ್ರಕಾರ ಈ ವರ್ಷ 37 ಭಾಷೆಗಳಲ್ಲಿ 353 ವಿವಿಧ ಪುಸ್ತಕಗಳು, ಪಾಂಪ್ಲೆಟ್‌ಗಳು, ಫೋಲ್ಡರ್‌ಗಳು ಇತ್ಯಾದಿಗಳು ಮುದ್ರಿಸಲ್ಪಟ್ಟಿವೆ. ಅವುಗಳ ಒಟ್ಟು ಸಂಖ್ಯೆ 16 ಲಕ್ಷ 89 ಸಾವಿರಕ್ಕೂ ಅಧಿಕವಾಗಿದೆ.

ಖುರ್‌ಆನ್ ಕರೀಮ್‌ನ ತಫ್ಸೀರ್‌ಗಳ ಪೈಕಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ತಫ್ಸೀರ್, ಈ ಹಿಂದೆ ಉರ್ದೂ ಭಾಷೆಯಲ್ಲಿ ಎಂಟು ಸಂಪುಟಗಳಲ್ಲಿ ಪ್ರಕಟವಾಗಿತ್ತು. ಅದರ ಸಂಪೂರ್ಣ ಅರಬಿ ಅನುವಾದವು ಮೊದಲ ಬಾರಿಗೆ ಪ್ರಕಟವಾಗಿದೆ.

ಅದೇ ರೀತಿ ಇಂಗ್ಲಿಷ್ ತಫ್ಸೀರ್ Five Volume Commentary ಕೂಡ ಪ್ರಕಟವಾಗಿದೆ. ಅದರ ಮೊದಲ ಸಂಪುಟದ ಅರಬಿ ಅನುವಾದವನ್ನು ಪುನರ್ಮುದ್ರಿಸಲಾಗಿದೆ.

ಹದೀಸ್‌ಗಳ ವಿಷಯದಲ್ಲಿ ಹಝ್ರತ್ ಸಯ್ಯಿದ್ ಝೈನುಲ್ ಆಬಿದೀನ್ ವಲೀಯುಲ್ಲಾಹ್ ಶಾಹ್ ಸಾಹಿಬ್ ಅವರ ಶರಹ್ ಸಹೀಹ್ ಬುಖಾರಿಯ ಮೊದಲ ಸಂಪುಟದ ಇಂಗ್ಲಿಷ್ ಅನುವಾದವನ್ನು ಪುನಃ ಪ್ರಕಟಿಸಲಾಗಿದೆ. ಎರಡನೇ ಸಂಪುಟದ ಇಂಗ್ಲಿಷ್ ಅನುವಾದವು ಮೊದಲ ಬಾರಿಗೆ ಪ್ರಕಟವಾಗಿದೆ.

ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಅವರು ಹೇಳಿದರು: "ಇದು ಜ್ಞಾನದ ಬಹಳ ದೊಡ್ಡ ಖಜಾನೆಯಾಗಿದೆ. ಅಹ್ಮದೀ ಸ್ನೇಹಿತರು ಇದರಿಂದ ಪ್ರಯೋಜನ ಪಡೆಯಬೇಕು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ 45 ಪುಸ್ತಕಗಳ ಅನುವಾದಗಳು 18 ಭಾಷೆಗಳಲ್ಲಿ ಮಾಡಲಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಅವರ 11 ಪುಸ್ತಕಗಳು 6 ಭಾಷೆಗಳಲ್ಲಿ ಪ್ರಕಟವಾಗಿವೆ. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹಿಮಹುಲ್ಲಾಹ್ ಅವರ "ತಅಮೀರ್ ಬೈತುಲ್ಲಾಹ್ ಕೆ 23 ಅಝೀಮುಶ್ಶಾನ್ ಮಕಾಸಿದ್" ಎಂಬ ಪುಸ್ತಕದ ಅರಬಿ ಅನುವಾದವು ಮೊದಲ ಬಾರಿಗೆ ಪ್ರಕಟವಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿ ರಹಿಮಹುಲ್ಲಾಹ್ ಅವರ "Christianity — A Journey from Facts to Fiction" ಪುಸ್ತಕದ ಬಲ್ಗೇರಿಯನ್ ಅನುವಾದ ಮತ್ತು "An Elementary Study of Islam" ಪುಸ್ತಕದ ಡ್ಯಾನಿಷ್ ಅನುವಾದವು ಮೊದಲ ಬಾರಿಗೆ ಪ್ರಕಟವಾಗಿದೆ. ಅದೇ ರೀತಿ ವಿವಿಧ ಸಂದರ್ಭಗಳಲ್ಲಿ ನಾನು ನೀಡಿದ ಪ್ರಶ್ನೋತ್ತರಗಳನ್ನೂ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. ಅವುಗಳ ಇಂಗ್ಲಿಷ್ ಆವೃತ್ತಿಯೂ ಪ್ರಕಟವಾಗಿದೆ. ಕೆಲವು ಇತರ ಉಪನ್ಯಾಸಗಳನ್ನೂ ಫ್ರೆಂಚ್, ಅರಬಿ, ಜರ್ಮನ್, ಇಂಡೋನೇಷಿಯನ್ ಮುಂತಾದ ವಿವಿಧ ಭಾಷೆಗಳಲ್ಲಿ ಪ್ರಕಟಿಸಲಾಗಿದೆ.

ನಝ್ಹಾರತ್ ನಶ್ರ್ ವ ಇಶಾಅತ್, ಖಾದಿಯಾನ್

ನಝ್ಹಾರತ್ ನಶ್ರ್ ವ ಇಶಾಅತ್ ಖಾದಿಯಾನ್ ವತಿಯಿಂದ ಭಾರತದ 14 ಸ್ಥಳೀಯ ಭಾಷೆಗಳಲ್ಲಿ ಇದುವರೆಗೆ ಕುರ್‌ಆನ್ ಕರೀಮ್‌ನ ಅನುವಾದ ಪ್ರಕಟಿಸಲಾಗಿದೆ. ಅಲ್ಲಾಹನ ಅನುಗ್ರಹದಿಂದ ಈ ಬಾರಿ ಖಾದಿಯಾನ್‌ನಿಂದ "ತೌಹೀದ್ ನಸ್ತಅಲೀಕ್" ಎಂಬ ಖುರ್‌ಆನ್ ಕರೀಮ್‌ನ ಫಾಂಟ್ ಸಿದ್ಧಪಡಿಸಲಾಗಿದೆ. ಇದು ಜಮಾಅತೆ ಅಹ್ಮದೀಯ್ಯಾ ವತಿಯಿಂದ ಸಿದ್ಧಪಡಿಸಲಾದ ಮೊದಲ ನಸ್ತಅಲೀಕ್ ಫಾಂಟ್ ಆಗಿದೆ. ತಫ್ಸೀರ್ ಸಗೀರ್‌ನ ಅರಬಿ ಪಠ್ಯವನ್ನು ಖತ್-ಎ-ಮಂಝೂರ್ ಫಾಂಟ್‌ನಲ್ಲಿ ಮತ್ತು ಉರ್ದೂ ಪಠ್ಯವನ್ನು ಈ ಹೊಸ ಫಾಂಟ್‌ನಲ್ಲಿ ಸಿದ್ಧಪಡಿಸಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳ ಭಾರತದ ಪ್ರಾದೇಶಿಕ ಭಾಷೆಗಳಲ್ಲಿಯೂ ಅನುವಾದಗಳು ಮಾಡಲಾಗಿದೆ.

ವಕಾಲತೆ ತಸ್ನೀಫ್ ಯು.ಕೆ.

ವಕಾಲತೆ ತಸ್ನೀಫ್ ಯು.ಕೆ. ವತಿಯಿಂದ ಹೊಸ ಭಾಷೆಯಾದ ಲಿಥುವೇನಿಯನ್ ಭಾಷೆಯಲ್ಲಿ ಕುರ್‌ಆನ್ ಕರೀಮ್‌ನ ಅನುವಾದವನ್ನು ಮುದ್ರಿಸಲಾಗಿದೆ. ಈಗ ಜಮಾಅತೆ ಅಹ್ಮದೀಯ್ಯಾ ವತಿಯಿಂದ ವಿವಿಧ ಭಾಷೆಗಳಲ್ಲಿ ಮುದ್ರಿಸಲಾದ ಖುರ್‌ಆನ್ ಕರೀಮ್‌ನ ಅನುವಾದಗಳ ಸಂಖ್ಯೆ 79ಕ್ಕೆ ತಲುಪಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಜ್ಮುಲ್ ಹುದಾ, ಖುತ್ಬಾ ಇಲ್ಹಾಮಿಯ್ಯಾ, ಕರಾಮಾತುಸ್ಸಾದಿಕೀನ್ ಮತ್ತು ಮಲ್ಫೂಝಾತ್ ಐದನೇ ಸಂಪುಟದ ಇಂಗ್ಲಿಷ್ ಅನುವಾದಗಳು ಮುದ್ರಿಸಲ್ಪಟ್ಟಿವೆ. ಬರಾಹೀನೆ ಅಹ್ಮದೀಯ್ಯಾಯ ನಾಲ್ಕು ಭಾಗಗಳ ಇಂಗ್ಲಿಷ್ ಅನುವಾದವನ್ನು ಒಂದು ಸಂಪುಟದಲ್ಲಿ ಪ್ರಕಟಿಸಲಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಅವರ ಇಂಕ್ವಿಲಾಬೆ ಹಕೀಕೀ, ಮತಾಲಿಬಾತೆ ತಹ್ರೀಕೆ ಜದೀದ್, ಇಫ್ರಾನೆ ಇಲಾಹೀ ಮತ್ತು ವಾಕಿಆತೆ ಖಿಲಾಫತೆ ಅಲವೀ ಪುಸ್ತಕಗಳ ಇಂಗ್ಲಿಷ್ ಅನುವಾದಗಳು ಪ್ರಕಟವಾಗಿವೆ.

ಜಮಾಅತ್‌ಗಳಲ್ಲಿ ಪ್ರಾದೇಶಿಕ ಮತ್ತು ಕೇಂದ್ರ ಗ್ರಂಥಾಲಯಗಳ ಸ್ಥಾಪನೆ

ಇದುವರೆಗೆ ವಿಶ್ವದ 108 ದೇಶಗಳಲ್ಲಿ 732 ಗ್ರಂಥಾಲಯಗಳು ಸ್ಥಾಪನೆಯಾಗಿವೆ.

ವಕಾಲತೆ ಇಶಾಅತ್ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು

ವಿಶ್ವದಾದ್ಯಂತ 22 ಭಾಷೆಗಳಲ್ಲಿ 116 ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ವಾರ್ತಾಪತ್ರಿಕೆಗಳು ಪ್ರಕಟವಾಗುತ್ತಿವೆ.

ಪ್ರದರ್ಶನಗಳ ಆಯೋಜನೆ

ವಿಶ್ವದಾದ್ಯಂತ 3,688 ಪ್ರದರ್ಶನಗಳ ಮೂಲಕ 10 ಲಕ್ಷ 7 ಸಾವಿರಕ್ಕೂ ಅಧಿಕ ಜನರಿಗೆ ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಸಂದೇಶವನ್ನು ತಲುಪಿಸಲಾಗಿದೆ.

ರಖೀಮ್ ಪ್ರೆಸ್

ರಖೀಮ್ ಪ್ರೆಸ್ ಮೂಲಕ ಪ್ರಕಟಿಸಲಾದ ಪುಸ್ತಕಗಳ ಸಂಖ್ಯೆ 1,57,240 ಆಗಿದೆ. ಅಲ್ಲಾಹನ ಅನುಗ್ರಹದಿಂದ ರಖೀಮ್ ಪ್ರೆಸ್ ಇಲ್ಲಿ ಬಹಳ ಉತ್ತಮ ಸೇವೆ ಸಲ್ಲಿಸುತ್ತಿದೆ.

ಆಫ್ರಿಕಾದ ಏಳು ದೇಶಗಳಲ್ಲಿ ನಮ್ಮ ಪ್ರೆಸ್‌ಗಳಿವೆ. ಅಲ್ಲಿ 7,60,000 ಪುಸ್ತಕಗಳು ಹಾಗೂ 82 ಲಕ್ಷಕ್ಕೂ ಅಧಿಕ ವಾರ್ತಾಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ತಬ್ಲೀಗೀ ಹಾಗೂ ತರಬಿಯತೀ ಸಾಹಿತ್ಯ ಪ್ರಕಟಿಸಲಾಗಿದೆ.

ವಕಾಲತೆ ತಅಮೀಲ್ ವ ತನ್ಫೀಝ್ ಭಾರತ


ವಕಾಲತೆ ತಅಮೀಲ್ ವ ತನ್ಫೀಝ್ ಭಾರತದ ವರದಿಯ ಪ್ರಕಾರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್ಹು ಅವರ ಆವರಣದಲ್ಲಿ ಅಸ್ತಿತ್ವದಲ್ಲಿರುವ ದೇವರು ಎಂಬ ವಿಷಯದ ಮೇಲೆ "ಅಲ್-ಮುಜೀಬ್" ಎಂಬ ಪ್ರದರ್ಶನವನ್ನು ಸಿದ್ಧಪಡಿಸಲಾಗಿದೆ.

ಖಾದಿಯಾನ್‌ನಲ್ಲಿ ಕೇಂದ್ರ ರಿಸರ್ಚ್ ಸೆಲ್ ಬೋರ್ಡ್ ಅನ್ನು ಸ್ಥಾಪಿಸಲಾಗಿದೆ.

ಅರಬಿ ಡೆಸ್ಕ್ ಅಡಿಯಲ್ಲಿ ಇದುವರೆಗೆ ಪ್ರಕಟಿಸಲಾದ ಪುಸ್ತಕಗಳ ಸಂಖ್ಯೆ 200ಕ್ಕೆ ತಲುಪಿದೆ. ಇವುಗಳಲ್ಲಿ ರುಹಾನೀ ಖಝಾಇನ್‌ನ ಎಲ್ಲಾ ಉರ್ದೂ ಪುಸ್ತಕಗಳು, ಮಲ್ಫೂಝಾತ್‌ನ ಸಂಪೂರ್ಣ ಸೆಟ್, ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಅವರ ತಫ್ಸೀರ್ ಕಬೀರ್‌ನ ಹತ್ತು ಸಂಪುಟಗಳ ಸೆಟ್ ಮತ್ತು ಇತರ 34 ಪುಸ್ತಕಗಳ ಅನುವಾದಗಳು ಸೇರಿವೆ. ಈ ವರ್ಷ ಮಜ್ಮೂಅ ಇಶ್ತಿಹಾರತ್‌ನ ಮೂರು ಸಂಪುಟಗಳು, ದಅವತುಲ್ ಅಮೀರ್‌ನ ಅರಬಿ ಅನುವಾದ ಹಾಗೂ ಇತರ ಕೆಲವು ಅನುವಾದಗಳೂ ಪ್ರಕಟವಾಗಿವೆ.

ಬೆಂಗಾಲಿ ಡೆಸ್ಕ್ ವತಿಯಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ 6 ಪುಸ್ತಕಗಳ ಅನುವಾದಗಳು ಮುದ್ರಿಸಲ್ಪಟ್ಟಿವೆ. ನನ್ನ ಖುತ್ಬಾಗಳನ್ನೂ ಅವರು ಪ್ರಕಟಿಸಿದ್ದಾರೆ.

(ಪುಟ ಸಂಖ್ಯೆ 07 ರಲ್ಲಿ ಮುಂದುವರಿಸಲಾಗಿದೆ)



ಖುತ್‌ಬ ಜುಮುಅ

'ತವಕ್ಕಲ್ ಅಲಲ್ಲಾಹ್' (ಅಲ್ಲಾಹನ ಮೇಲಿನ ಭರವಸೆ) ಕುರಿತು ಹಝ್ರತ್ ಪೈಗ಼ಂಬರ್(ಸ)ರ ಪವಿತ್ರ ಜೀವನ ಚರಿತ್ರೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **11-09-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಪೈಗಂಬರ್(ಸ)ರ 'ತವಕ್ಕುಲ್ ಅಲಲ್ಲಾಹ್' (ಅಲ್ಲಾಹನ ಮೇಲಿನ ಭರವಸೆ) ಕುರಿತು ಕಳೆದ ಜುಮುಅದಲ್ಲಿ ವಿವರಿಸಲಾಗಿತ್ತು. ಇಂದು ಸಹ ಇದೇ ವಿಷಯ ಮುಂದುವರಿಯಲಿದೆ. ವಿಶ್ವಾಸಿಗಳಿಗೆ ತವಕ್ಕುಲ್ ಕುರಿತು ಉಪದೇಶ ನೀಡುತ್ತಾ ನಬಿ(ಸ) ತಿಳಿಸಿರುವ ವಿಷಯವನ್ನು ಹಝ್ರತ್ ಅಬು ದರ್ದಾ(ರ) ವರದಿ ಮಾಡಿದ್ದಾರೆ. ಯಾರು ಮುಂಜಾನೆ ಮತ್ತು ಸಂಜೆ ಏಳು ಬಾರಿ "ಹಸ್ಬಿಯಲ್ಲಾಹು ಲಾ ಇಲಾಹ ಇಲ್ಲಾ ಹುವ, ಅಲೈಹಿ ತವಕ್ಕಲ್ತು ವಹುವ ರಬ್ಬುಲ್ ಅರ್ಶಿಲ್ ಅಝೀಮ್" (ಅಂದರೆ, ಅಲ್ಲಾಹನೇ ನನಗೆ ಸಾಕು. ಅವನನ್ನು ಹೊರತುಪಡಿಸಿ ಆರಾಧನೆಗೆ ಅರ್ಹರು ಯಾರೂ ಇಲ್ಲ. ನಾನು ಅವನ ಮೇಲೆಯೇ ಭರವಸೆ ಇಟ್ಟಿದ್ದೇನೆ ಮತ್ತು ಅವನು ಶ್ರೇಷ್ಠ ಸಿಂಹಾಸನದ ಪ್ರಭುವಾಗಿದ್ದಾನೆ) ಎಂದು ಹೇಳುತ್ತಾನೋ, ಆ ವ್ಯಕ್ತಿಯನ್ನು ಚಿಂತೆಗೀಡುಮಾಡುವ ಪ್ರತಿಯೊಂದು ವಿಷಯಕ್ಕೂ ಅಲ್ಲಾಹನು ಸಾಕಾಗುತ್ತಾನೆ, ಆತನು ಅದರಲ್ಲಿ ಸತ್ಯವಂತನಾಗಿರಲಿ ಅಥವಾ ಸುಳ್ಳುಗಾರನಾಗಿರಲಿ. (ಸುನನ್ ಅಬುದಾವುದ್, ಕಿತಾಬುಲ್ ಅದಬ್, ಅಬ್ವಾಬುನ್ನೌಮ್, ಹದೀಸ್-5081)

ಹಝ್ರತ್ ಪೈಗಂಬರ್(ಸ) ತಮಗಾಗಿ ತವಕ್ಕುಲ್ ಕುರಿತು ಹೇಗೆ ಪ್ರಾರ್ಥಿಸುತ್ತಿದ್ದರು ಎಂಬುದರ ಕುರಿತು ಒಂದು ವರದಿಯಲ್ಲಿ ಹೀಗೆ ಉಲ್ಲೇಖಿಸಲಾಗಿದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ)ರಿಂದ ವರದಿಯಾಗಿದೆ, ಪ್ರವಾದಿ(ಸ) ರುಕೂಅ್‌ಗೆ ಹೋಗುವಾಗ ಹೀಗೆ ದುಆ ಮಾಡುತ್ತಿದ್ದರು: "ಅಲ್ಲಾಹುಮ್ಮ ಲಕ ರಕಅ್‌ತು ವಬಿಕ ಆಮಂತು ವಲಕ ಅಸ್ಲಮ್‌ತು ವ ಅಲೈಕ ತವಕ್ಕಲ್ತು, ಅಂತ ರಬ್ಬೀ ಫಖಶಅ ಸಮ್‌ಈ ವ ಬಸರೀ ವದಮೀ ವಲಹ್ಮೀ ವಅಝ್ಮೀ ವಅಸಬೀ ಲಿಲ್ಲಾಹಿ ರಬ್ಬಿಲ್ ಆಲಮೀನ್." ಇದರ ಅರ್ಥ: "ಹೇ ಅಲ್ಲಾಹ್, ನಾನು ನಿನಗಾಗಿಯೇ ರುಕೂಅ್ ಮಾಡಿದೆ, ನಿನ್ನ ಮೇಲೆ ವಿಶ್ವಾಸ ಇಟ್ಟೆನು, ನನ್ನನ್ನು ನಿನಗೇ ಒಪ್ಪಿಸಿದೆ ಮತ್ತು ನಿನ್ನ ಮೇಲೆಯೇ ಭರವಸೆ ಇಟ್ಟೆನು. ನೀನೇ ನನ್ನ ಪ್ರಭು. ನನ್ನ ಶ್ರವಣಶಕ್ತಿ, ನನ್ನ ದೃಷ್ಟಿ, ನನ್ನ ರಕ್ತ, ನನ್ನ ಮಾಂಸ, ನನ್ನ ಮೂಳೆಗಳು ಮತ್ತು ನನ್ನ ನರಗಳು ಸರ್ವಲೋಕಗಳ ಪರಿಪಾಲಕನಾಗಿರುವ ಅಲ್ಲಾಹನಿಗೆ ಶಿರಬಾಗಿವೆ." (ಸುನನ್ ಅನ್ನಿಸಾಯಿ, ಕಿತಾಬುತ್ತತ್‌ಬೀಖ್, ಬಾಬ್ ನೂ ಆಖಿರ್, ಹದೀಸ್-1051)

ಮತ್ತೊಂದು ವರದಿಯಲ್ಲಿ ಹಝ್ರತ್ ಅಬು ಹುರೈರಾ(ರ) ವಿವರಿಸುತ್ತಾರೆ, ನಬಿ(ಸ) ಹೀಗೆ ಹೇಳಿದರು: "ನನಗೆ ಎಂದಾದರೂ ಯಾವುದಾದರೂ ಚಿಂತೆ ಎದುರಾಗುವಾಗ, ಜಿಬ್ರೀಲ್ ನನ್ನ ಮುಂದೆ ಪ್ರತ್ಯಕ್ಷರಾಗಿ ಹೀಗೆ ಹೇಳುತ್ತಿದ್ದರು: 'ಹೇ ಮುಹಮ್ಮದ್(ಸ), ನೀವು ಹೀಗೆ ಹೇಳಿರಿ: ಯಾವತ್ತೂ ಮರಣಹೊಂದದ ಆ ಜೀವಂತ ಅಸ್ತಿತ್ವದ ಮೇಲೆ ನಾನು ಭರವಸೆ ಇಟ್ಟೆನು. ಎಲ್ಲ ಪ್ರಶಂಸೆಗಳು ಅಲ್ಲಾಹನಿಗೆ ಸೇರಿವೆ, ಅವನು ಎಂದಿಗೂ ಯಾರನ್ನೂ ಪುತ್ರನನ್ನಾಗಿ ಮಾಡಿಕೊಂಡಿಲ್ಲ, ಅವನ ಸಾಮ್ರಾಜ್ಯದಲ್ಲಿ ಎಂದಿಗೂ ಯಾರೂ ಪಾಲುದಾರನಾಗಿಲ್ಲ ಮತ್ತು ದೌರ್ಬಲ್ಯದ ಕಾರಣದಿಂದಾಗಿ ಅವನಿಗೆ ಬೆಂಬಲಿಗನಾಗಬಲ್ಲ ಯಾವುದೇ ಸಹಾಯಕನ ಅಗತ್ಯಬಂದಿಲ್ಲ. ಮತ್ತು ನೀವು ಅತ್ಯಂತ ಶಕ್ತವಾಗಿ ಅವನ ಹಿರಿಮೆಯನ್ನು ಸಾರಿರಿ'." (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಕಿತಾಬುದ್ದುಆ ವತ್ತಕ್‌ಬೀರ್ ವತ್ತಹ್‌ಲೀಲ್ ವತ್ತಸ್‌ಬೀಹ್ ವಝ್ಝಿಕ್ರ್, ಹದೀಸ್-1876, ಸಂಪುಟ-1, ಪುಟ-689, ದಾರುಲ್ ಕುತುಬ್ ಇಲ್ಮಿಯ ಬೈರುತ್)

ತಾವೂಸ್(ರ)ರಿಂದ ವರದಿಯಾಗಿದೆ, ಅವರು ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ಆಲಿಸಿದ್ದರು. ಅವರು ಹೇಳಿದರು, ನಬಿ(ಸ) ರಾತ್ರಿ ತಹಜ್ಜುದ್ ನಮಾಝ್ ನಿರ್ವಹಿಸಲು ಏಳುವಾಗ ಒಂದು ದೀರ್ಘ ಪ್ರಾರ್ಥನೆ ಮಾಡುತ್ತಿದ್ದರು, ಅದರ ಅನುವಾದ ಹೀಗಿದೆ: "ಹೇ ಅಲ್ಲಾಹ್, ಎಲ್ಲ ಸ್ತುತಿಗಳು ನಿನಗೇ ಸಲ್ಲುತ್ತವೆ, ನೀನು ಆಕಾಶ ಮತ್ತು ಭೂಮಿ ಹಾಗೂ ಅವುಗಳಲ್ಲಿರುವ ಎಲ್ಲವನ್ನೂ ಪಾಲಿಸುವವನು. ಎಲ್ಲ ಪ್ರಶಂಸೆಗಳು ನಿನಗೇ; ಆಕಾಶಗಳು, ಭೂಮಿ ಮತ್ತು ಅವುಗಳಲ್ಲಿರುವ ಎಲ್ಲದರ ಸಾರ್ವಭೌಮತ್ವ ನಿನ್ನದೇ. ಎಲ್ಲ ಸ್ತುತಿಗಳು ನಿನಗೇ; ನೀನು ಆಕಾಶ ಮತ್ತು ಭೂಮಿ ಹಾಗೂ ಅವುಗಳಲ್ಲಿರುವ ಎಲ್ಲದರ ನೂರ್ (ಬೆಳಕು). ಎಲ್ಲ ಸ್ತುತಿಗಳು ನಿನಗೇ; ನೀನು ಆಕಾಶ ಮತ್ತು ಭೂಮಿ ಹಾಗೂ ಅವುಗಳಲ್ಲಿರುವ ಎಲ್ಲದರ ಅರಸ. ಎಲ್ಲ ಸ್ತುತಿಗಳು ನಿನಗೇ; ನೀನೇ ಸತ್ಯ, ನಿನ್ನ ವಾಗ್ದಾನ ಸತ್ಯ, ನಿನ್ನ ಭೇಟಿಯು ಖಂಡಿತ, ನಿನ್ನ ಮಾತುಗಳು ಸತ್ಯ, ಸ್ವರ್ಗವು ಸತ್ಯ, ನರಕವು ಸತ್ಯ, ಎಲ್ಲ ಪ್ರವಾದಿಗಳು ಸತ್ಯ, ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಸತ್ಯ ಮತ್ತು ಖಿಯಾಮತ್ ಘಳಿಗೆಯು ಸತ್ಯ. ಹೇ ಅಲ್ಲಾಹ್, ನಾನು ನಿನಗೆ ಶರಣಾಗಿದ್ದೇನೆ, ನಿನ್ನ ಮೇಲೆ ವಿಶ್ವಾಸ ಇಟ್ಟಿದ್ದೇನೆ, ನಿನ್ನ ಮೇಲೆಯೇ ಭರವಸೆ ಇಟ್ಟಿದ್ದೇನೆ, ನಿನ್ನ ಕಡೆಗೇ ವಾಲಿದ್ದೇನೆ, ನಿನ್ನ ಆಧಾರದಲ್ಲೇ ನಾನು ವಿವಾದ ಮಾಡಿದ್ದೇನೆ, ನಿನ್ನ ಸಹಾಯದಿಂದಲೇ ನಾನು ವಿರೋಧಿಗಳನ್ನು ಎದುರಿಸಿದ್ದೇನೆ ಮತ್ತು ನಿನ್ನ ಬಳಿಯೇ ತೀರ್ಪು ಬೇಡಿದ್ದೇನೆ. ನಾನು ಹಿಂದೆ ಮಾಡಿದ ಮತ್ತು ಮುಂದೆ ಮಾಡುವ, ನಾನು ಬಚ್ಚಿಟ್ಟ ಮತ್ತು ನಾನು ಬಹಿರಂಗಪಡಿಸಿದ ಎಲ್ಲ ತಪ್ಪುಗಳನ್ನು ಕ್ಷಮಿಸು. ನೀನೇ ಮುಂದಿಡುವವನು ಮತ್ತು ನೀನೇ ಹಿಂದಿಡುವವನು. ನಿನ್ನನ್ನು ಹೊರತುಪಡಿಸಿ ಬೇರೆ ಆರಾಧ್ಯರಿಲ್ಲ." ಇದು ಬುಖಾರಿಯ ವರದಿಯಾಗಿದೆ.

(ಸಹೀಹ್ ಅಲ್‌ಬುಖಾರಿ, ಕಿತಾಬುತ್ತಹ್‌ಜುದ್, ಬಾಬ್ ಅತ್ತಹ್‌ಜುದ್ ಬಿಲ್ಲೈಲ್, ಹದೀಸ್-1120)

ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೀಗೆ ಹೇಳುತ್ತಿದ್ದರು: "ಹೇ ಅಲ್ಲಾಹ್, ನಾನು ನಿನ್ನ ವಿಧೇಯನಾಗಿದ್ದೇನೆ, ವಿಧೇಯತೆಯನ್ನು ಸ್ವೀಕರಿಸುತ್ತೇನೆ, ನಿನ್ನ ಮೇಲೆ ಈಮಾನ್ ಇರಿಸುತ್ತೇನೆ, ನಿನ್ನ ಮೇಲೆ ಭರವಸೆ ಇಡುತ್ತೇನೆ ಮತ್ತು ನಿನ್ನ ಕಡೆಗೆ ವಾಲುತ್ತೇನೆ. ನಿನ್ನ ಸಹಾಯದಿಂದಲೇ ನಾನು ಎದುರಿಸುತ್ತೇನೆ. ಹೇ ಅಲ್ಲಾಹ್, ನೀನು ನನ್ನನ್ನು ದಾರಿತಪ್ಪಿಸದಿರಲು ನಿನ್ನ ಗೌರವದ ಆಶ್ರಯವನ್ನು ಕೋರುತ್ತೇನೆ. ನಿನ್ನನ್ನು ಹೊರತುಪಡಿಸಿ ಆರಾಧನೆಗೆ ಅರ್ಹರು ಬೇರಾರೂ ಇಲ್ಲ. ನೀನು ಜೀವಂತನಾಗಿದ್ದೀಯ, ನಿನಗೆ ಎಂದಿಗೂ ಸಾವು ಬರುವುದಿಲ್ಲ; ಆದರೆ ಜಿನ್‌ಗಳು ಮತ್ತು ಮನುಷ್ಯರು ಮರಣಹೊಂದುತ್ತಾರೆ."

(ಸಹೀಹ್ ಮುಸ್ಲಿಮ್ ಕಿತಾಬುಝ್ಝಿಕ್ರ್ ವದ್ದುಆ ವತ್ತೌಬ ವಲ್‌ಇಸ್ತಿಗ್‌ಫಾರ್, ಸಂಪುಟ-14, ಪುಟ-91, ಹದೀಸ್-4880, ನೂರ್ ಫೌಂಡೇಷನ್)

ನಬಿ(ಸ)ರ ದೃಷ್ಟಿ ಸದಾ ಅಲ್ಲಾಹನ ಮೇಲೆಯೇ ಇರುತ್ತಿತ್ತು. ನಬಿ(ಸ)ರ ಈ ಗುಣದ ಅತ್ಯುನ್ನತ ಮಟ್ಟವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಕಡೆ ಬರೆದಿದ್ದಾರೆ: "ರಸೂಲ್ ಕರೀಮ್(ಸ)ರಿಗೆ ದೇವನ ಮೇಲೆ ಎಂತಹ ಭರವಸೆಯಿತ್ತೆಂದರೆ, ಪ್ರತಿಯೊಂದು ವಿಪತ್ತು ಮತ್ತು ಕಷ್ಟದ ಸಮಯದಲ್ಲಿ ಅವರು ಅವನ ಮೇಲೆಯೇ ದೃಷ್ಟಿಯಿಡುತ್ತಿದ್ದರು ಮತ್ತು ಅವನನ್ನು ಹೊರತುಪಡಿಸಿ ಇತರ ಯಾವುದರ ಕಡೆಗೂ ಗಮನ ಹರಿಸುತ್ತಿರಲಿಲ್ಲ. ಇಂದಿನ ಕೆಲವು ಸೂಫಿಗಳು ವಸ್ತುಗಳ ಅಗತ್ಯವಿಲ್ಲ ಕೇವಲ ತವಕ್ಕುಲ್ ಸಾಕು ಎನ್ನುವಂತೆ ನಬಿ(ಸ) ಭೌತಿಕ ಸಾಧನಗಳನ್ನು ತ್ಯಜಿಸುವವರಾಗಿರಲಿಲ್ಲ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅವರು ಸಾಧನಗಳನ್ನು ಬಳಸುತ್ತಿದ್ದರು. ಏಕೆಂದರೆ ಸಾಧನಗಳನ್ನು ತ್ಯಜಿಸುವುದು ಎಂದರೆ ದೇವನ ಸೃಷ್ಟಿಯನ್ನು ಅವಮಾನಿಸುವುದು ಮತ್ತು ಅವನ ಸೃಷ್ಟಿಯನ್ನು ವ್ಯರ್ಥವೆಂದು ಪರಿಗಣಿಸಿದಂತಾಗಿದೆ. ಆದರೆ ಸಾಧನಗಳನ್ನು ಒದಗಿಸಿದ ನಂತರ ನಬಿ(ಸ) ಸಂಪೂರ್ಣವಾಗಿ ದೇವನ ಮೇಲೆ ಭರವಸೆ ಇಡುತ್ತಿದ್ದರು. ಸಾಧನಗಳನ್ನು ಬಳಸಿದರೂ, ಎಂದಿಗೂ ಅವುಗಳ ಮೇಲೆ ನಂಬಿಕೆ ಇಡುತ್ತಿರಲಿಲ್ಲ, ಕೇವಲ ದೇವನ ಕೃಪೆಯ ನಿರೀಕ್ಷೆಯಲ್ಲಿರುತ್ತಿದ್ದರು."

ಹಝ್ರತ್ ಇಬ್ನು ಅಬ್ಬಾಸ್(ರ) ವಿವರಿಸುತ್ತಾರೆ, ನಬಿ(ಸ) ಪ್ರತಿಯೊಂದು ಗಾಬರಿಯ ಸಮಯದಲ್ಲಿ ಹೀಗೆ ಹೇಳುತ್ತಿದ್ದರು: "ಲಾ

ಇಲಾಹ ಇಲ್ಲಲ್ಲಾಹು ರಬ್ಬುಲ್ ಅರ್ಶಿಲ್ ಅಝೀಮ್, ಲಾ ಇಲಾಹ ಇಲ್ಲಲ್ಲಾಹು ರಬ್ಬುಸ್ಸಮಾವಾತಿ ವ ರಬ್ಬುಲ್ ಅರ್ಝಿ ವ ರಬ್ಬುಲ್ ಅರ್ಶಿಲ್ ಕರೀಮ್." (ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ, ಅವನು ಅತ್ಯುನ್ನತ ಸಿಂಹಾಸನದ ಒಡೆಯನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ, ಅವನು ಆಕಾಶಗಳ ಪ್ರಭು ಆಗಿದ್ದಾನೆ, ಅವನು ಭೂಮಿಯ ಪ್ರಭು ಆಗಿದ್ದಾನೆ, ಅವನು ಶ್ರೇಷ್ಠ ಸಿಂಹಾಸನದ ಪ್ರಭು ಆಗಿದ್ದಾನೆ). (ಸೀರತುನ್ನಬೀ(ಸ), ಅನ್ವಾರುಲ್ ಉಲೂಮ್, ಸಂಪುಟ–1, ಪುಟ–496–497)

ಅಂದರೆ ನನ್ನ ನಂಬಿಕೆ ಮತ್ತು ಭರವಸೆ ಕೇವಲ ಅಲ್ಲಾಹನ ಮೇಲೆಯೇ ಇದೆ.

ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ವರದಿಯಾಗಿದೆ: "ಹಸ್ಬುನಾಲ್ಲಾಹು ವನಿಅ್ಮಲ್ ವಕೀಲ್" (ಅಲ್ಲಾಹನೇ ನಮಗೆ ಸಾಕು ಮತ್ತು ಅವನು ಅತ್ಯುತ್ತಮ ಕಾರ್ಯಸಾಧಕನು). ಹಝ್ರತ್ ಇಬ್ರಾಹೀಮ್(ಅ)ರನ್ನು ಬೆಂಕಿಗೆ ಹಾಕಲ್ಪಟ್ಟಾಗ ಅವರು ಇದೇ ಮಾತನ್ನು ಹೇಳಿದ್ದರು ಮತ್ತು ಮುಹಮ್ಮದ್(ಸ) ಸಹ ಇದೇ ಮಾತನ್ನು ಹೇಳಿದ್ದರು. ಕಾಫಿರರು ನಿಮಗಾಗಿ ದೊಡ್ಡ ಸಿದ್ಧತೆ ಮಾಡಿದ್ದಾರೆ, ಆದ್ದರಿಂದ ಅವರಿಗೆ ಹೆದರಿರಿ ಎಂದು ಜನರು ಹೇಳಿದಾಗ, ನಬಿ(ಸ) ಇದನ್ನು ಹೇಳಿದ್ದರು. ಹದೀಸ್ ವಿವರಣೆಗಾರರ ಪ್ರಕಾರ, ಇದನ್ನು ಉಹುದ್ ಯುದ್ಧ, ಹಮ್ರಾಉಲ್ ಅಸದ್ ಅಥವಾ ಖಂದಕ್ ಯುದ್ಧದ ಸಂದರ್ಭದಲ್ಲಿ ಹೇಳಲಾಗಿತ್ತು. ಈ ಮಾತು ಅವರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿತು ಮತ್ತು ಅವರು "ಹಸ್ಬುನಾಲ್ಲಾಹು ವನಿಅ್ಮಲ್ ವಕೀಲ್" ಎಂದು ಹೇಳಿದರು. ಇದು ಬುಖಾರಿಯಲ್ಲಿ ವರದಿಯಾಗಿದೆ. (ಸಹೀಹ್ ಬುಖಾರಿ ಕಿತಾಬುತ್ತಫ್ಸೀರ್, ಬಾಬ್ ಖೌಲಲ್ಲಝೀನ ಖಾಲಲಹುಮುನ್ನಾಸ್....., ಹದೀಸ್–4563) (ಫತಹ್ ಅಲ್‌ಬಾರಿ, ಸಂಪುಟ–8, ಪುಟ–290, ಖದೀಮಿ ಕುತುಬ್ ಖಾನ, ಆರಾಮ್ ಬಾಗ್ ಕರಾಚಿ) (ತಫ್ಸೀರುಲ್ ಖುರ್‌ಆನ್ ಅಲ್‌ಅಝೀಮ್ ಲಿಇಬ್ನೆ ಕಸೀರ್, ಸೂರಃ ಆಲಿ ಇಮ್ರಾನ್ ಆಯತ್–174, ಸಂಪುಟ–2, ಪುಟ–149–150, ದಾರುಲ್ ಕುತುಬ್ ಇಲ್ಮಿಯಾ ಬೈರುತ್) (ಅತ್ತಫ್ಸೀರ್ ಅಲ್‌ಮರ್ಯೂಹರಿ, ಸೂರಃ ಅಲ್‌ಅಹ್ಝಾಬ್ ಆಯತ್ 10, ಸಂಪುಟ–5, ಪುಟ–487, ದಾರುಲ್ ಕುತುಬ್ ಇಲ್ಮಿಯಾ) (ತಫ್ಸೀರ್ ಅಲ್‌ಬಗ್‌ವಿ, ಸಂಪುಟ–1, ಪುಟ–374, ಸೂರಃ ಆಲಿ ಇಮ್ರಾನ್ ಆಯತ್ 174, ಇದಾರ ತಅ್‌ಲೀಫಾತ್ ಅಶ್ರಫ್ಫಿಯಾ, ಮುಲ್ತಾನ್)

ವಿವಿಧ ಸಂದರ್ಭಗಳಲ್ಲಿ ಮಕ್ಕಾದ ಮುಶ್ರಿಕರು ಹಝ್ರತ್ ಪೈಗಂಬರ್(ಸ)ರಿಗೆ ವಿವಿಧ ರೀತಿಯ ಆಮಿಷಗಳನ್ನು ಒಡ್ಡುವುದು ಮತ್ತು ನಬಿ(ಸ) ಅಲ್ಲಾಹನ ಮೇಲೆ ಅಪ್ರತಿಮ ಭರವಸೆ ಇಡುತ್ತಾ ಉತ್ತರಿಸುವುದನ್ನು ಕಾಣಬಹುದು. ಇಬ್ನು ಇಸ್‌ಹಾಖ್ ಇಂತಹ ಒಂದು ಘಟನೆಯನ್ನು ಉಲ್ಲೇಖಿಸಿದ್ದಾರೆ: ಒಂದು ದಿನ ಖುರೈಶ್ ನಾಯಕ ಉತ್ಬಾ ಬಿನ್ ರಬೀಅ ಖುರೈಷರ ಸಭೆಯಲ್ಲಿ ಕುಳಿತಿದ್ದನು, ಆ ಸಮಯದಲ್ಲಿ ರಸೂಲುಲ್ಲಾಹ್(ಸ) ಒಬ್ಬಂಟಿಯಾಗಿ ಮಸ್ಜಿದುಲ್ ಹರಾಮ್‌ನಲ್ಲಿ ಕುಳಿತಿದ್ದರು. ಉತ್ಬಾವು ಖುರೈಶಿಯರೊಡನೆ ಹೀಗೆ ಹೇಳಿದನು: "ನಾನು ಮುಹಮ್ಮದ್(ಸ)ರ ಬಳಿ ಹೋಗಿ ಮಾತನಾಡಲೇ? ಅವರ ಮುಂದೆ ಕೆಲವು ಪ್ರಸ್ತಾಪಗಳನ್ನು ಇಡುತ್ತೇನೆ, ಬಹುಶಃ ಅವರು ಅವುಗಳಲ್ಲಿ ಯಾವುದನ್ನಾದರೂ ಒಪ್ಪಿಕೊಳ್ಳಬಹುದು, ಆಗ ನಾವು ಅವರ ಬೇಡಿಕೆಯನ್ನು ಪೂರೈಸುತ್ತೇವೆ ಮತ್ತು ಅವರು ನಮ್ಮ ವಿರುದ್ಧ ತಮ್ಮ ಪ್ರಚಾರವನ್ನು ನಿಲ್ಲಿಸಬಹುದು". ಹಝ್ರತ್ ಹಂಝಾ(ರ) ಇಸ್ಲಾಂ ಸ್ವೀಕರಿಸಿದ್ದ ಮತ್ತು ನಬಿ(ಸ)ರ ಬೆಂಬಲಿಗರು ದಿನೇ ದಿನೇ ಹೆಚ್ಚಾಗುತ್ತಿದ್ದ ಕಾಲವದು. ಖುರೈಶಿಯರು ಹೇಳಿದರು: "ಖಂಡಿತವಾಗಿಯೂ, ಹೇ ಅಬುಲ್ ವಲೀದ್ (ಉತ್ಬಾ), ನೀವೇ ಅವರೊಂದಿಗೆ ಮಾತನಾಡಿರಿ"

ಅದರಂತೆ ಉತ್ಬಾ ರಸೂಲುಲ್ಲಾಹ್(ಸ)ರ ಬಳಿ ಬಂದು ಕುಳಿತು ಹೀಗೆ ಹೇಳಿದನು: "ಹೇ ಸೋದರಳಿಯ, ನಿಮ್ಮ ವಂಶದಲ್ಲಿ ನಿಮ್ಮ ಸ್ಥಾನವಾನ ಎಷ್ಟೊಂದು ಉನ್ನತವಾಗಿದೆ ಮತ್ತು ವಂಶಾವಳಿಯ ದೃಷ್ಟಿಯಿಂದಲೂ ನೀವು ಎಷ್ಟೊಂದು ಗೌರವಾನ್ವಿತನಾಗಿದ್ದೀರಿ ಎಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ಆದರೆ ನೀವು ನಿಮ್ಮ ಕೋಮಿನ ಮುಂದೆ ಒಂದು ದೊಡ್ಡ ವಿಷಯವನ್ನು ತಂದಿದ್ದೀಯ, ಅದು ಅವರ ಐಕ್ಯತೆಯನ್ನು ಒಡೆದುಹಾಕಿದೆ, ಅವರ ಬುದ್ಧಿಯನ್ನು ಕೀಳಾಗಿ ಕಂಡಿದೆ, ಅವರ ಆರಾಧ್ಯರನ್ನು ಮತ್ತು ಧರ್ಮವನ್ನು ನಿಂದಿಸಿದೆ ಮತ್ತು ಅವರ ಪೂರ್ವಜರನ್ನು ಕಾಫಿರರೆಂದು ಕರೆದಿದೆ. ಈಗ ನನ್ನ ಕೆಲವು ಮಾತುಗಳನ್ನು ಗಮನವಿಟ್ಟು ಕೇಳು. ನಾನು ನಿನ್ನ ಮುಂದೆ ಕೆಲವು ಪ್ರಸ್ತಾಪಗಳನ್ನು ಇಡುತ್ತೇನೆ. ಬಹುಶಃ ನೀನು ಅವುಗಳಲ್ಲಿ ಒಂದನ್ನು ಒಪ್ಪಿಕೊಳ್ಳಬಹುದು."

ರಸೂಲುಲ್ಲಾಹ್(ಸ) ಹೇಳಿದರು: "ಹೇಳಿರಿ ಅಬುಲ್ ವಲೀದ್, ನಾನು ಕೇಳುತ್ತಿದ್ದೇನೆ"

ಉತ್ಬಾ ಹೇಳಿದನು: "ಸೋದರಳಿಯ, ನಿಮ್ಮ ಈ ಪ್ರಚಾರದ ಉದ್ದೇಶ ಸಂಪತ್ತು ಗಳಿಸುವುದಾಗಿದ್ದರೆ, ನಾವು ನಮ್ಮ ಸಂಪತ್ತನ್ನು ಒಟ್ಟುಗೂಡಿಸಿ, ನೀವು ನಮ್ಮಲ್ಲೇ ಅತ್ಯಂತ ಶ್ರೀಮಂತನಾಗುವಷ್ಟು ಸಂಪತ್ತನ್ನು ನಿಮಗೆ ನೀಡುತ್ತೇವೆ. ನೀವು ಗೌರವ ಮತ್ತು ನಾಯಕತ್ವವನ್ನು ಬಯಸುವುದಾದರೆ, ನಾವು ನಿಮ್ಮನ್ನು ನಮ್ಮ ನಾಯಕನನ್ನಾಗಿ ಮಾಡುತ್ತೇವೆ ಮತ್ತು ನಿಮ್ಮ ಒಪ್ಪಿಗೆಯಿಲ್ಲದೆ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ನೀವು ಅಧಿಕಾರವನ್ನು ಬಯಸುವುದಾದರೆ, ನಿಮ್ಮನ್ನು ನಮ್ಮ ರಾಜನೆಂದು ಸ್ವೀಕರಿಸುತ್ತೇವೆ. ಒಂದು ವೇಳೆ ನಿಮ್ಮ ಮೇಲೆ ಯಾವುದಾದರೂ ಆತ್ಮ ಅಥವಾ ಜಿನ್ ಪ್ರಭಾವ ಬೀರಿದ್ದರೆ ಮತ್ತು ಅದನ್ನು ತೊಡೆದುಹಾಕಲು ನಿಮಗೆ ಸಾಧ್ಯವಾಗದಿದ್ದರೆ, ನಾವು ಅತ್ಯುತ್ತಮ ವೈದ್ಯರಿಂದ ನಿಮಗೆ ಚಿಕಿತ್ಸೆ ಕೊಡಿಸುತ್ತೇವೆ. ನೀವು ಸಂಪೂರ್ಣ ಗುಣಮುಖನಾಗುವವರೆಗೆ ನಮ್ಮ ಸಂಪತ್ತನ್ನು ಖರ್ಚು ಮಾಡುತ್ತೇವೆ." (ಆ ಕಾಲದಲ್ಲಿ ಜನರಲ್ಲಿ ಮೂಢನಂಬಿಕೆಗಳಿದ್ದವು, ಜಿನ್ ಆವರಿಸಿದೆ ಎಂದು ಭಾವಿಸುತ್ತಿದ್ದರು).

ಉತ್ಬಾ ತನ್ನ ಮಾತನ್ನು ಮುಗಿಸಿದನು ಮತ್ತು ರಸೂಲುಲ್ಲಾಹ್(ಸ) ಆಲಿಸುತ್ತಲೇ ಇದ್ದರು. ನಂತರ ನಬಿ(ಸ) "ಹೇ ಅಬುಲ್ ವಲೀದ್, ನಿಮ್ಮ ಮಾತು ಮುಗಿಯಿತೇ?" ಎಂದು ಕೇಳಿದರು. ಆತನು "ಹೌದು" ಎಂದನು. ಆಗ ನಬಿ(ಸ) "ಈಗ ನನ್ನ ಮಾತು ಕೇಳಿ" ಎಂದರು. ಆತನು, "ಖಂಡಿತ ಕೇಳುತ್ತಿದ್ದೇನೆ" ಎಂದನು. ಆಗ ರಸೂಲುಲ್ಲಾಹ್(ಸ) ಸೂರಃ ಹಾ ಮೀಮ್ ಸಜ್ದಾದ ಈ ಆಯತ್‌ಗಳನ್ನು ಪಠಿಸಿದರು:

"ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್. ಹಾ ಮೀಮ್. ತನ್ಝೀಲುಮ್ಮಿನರ್ರಹ್ಮಾನಿರ್ರಹೀಮ್. ಕಿತಾಬುನ್ ಫುಸ್ಸಿಲತ್ ಆಯಾತುಹೂ ಖುರ್‌ಆನನ್ ಅರಬಿಯ್ಯನ್ ಲಿಕೌಮಿಂ ಯಅ್‌ಲಮೂನ್. ಬಶೀರನ್ ವ ನದೀರನ್ ಫ ಅಅ್‌ರರ್ಯ ಅಕ್ಸರುಹುಮ್ ಫಹುಮ್ ಲಾ ಯಸ್ಮಊನ್. ವ ಖಾಲೂ ಖುಲೂಬುನಾ ಫೀ ಅಕಿನ್ನತಿಮ್ ಮಿಮ್ಮಾ ತದ್‌ಊನಾ ಇಲೈಹಿ."

ಇದರ ಅರ್ಥ: ಅಲ್ಲಾಹನ ಹೆಸರಿನಿಂದ, ಅವನು ಅಪಾರ ಕರುಣಾಮಯಿ ಮತ್ತು ನಿರಂತರ ದಯಾಪಾಲಕನು. (ಹಾ ಮೀಮ್, ಹಮೀದ್ ಮತ್ತು ಮಜೀದ್ ಎಂಬ ದೇವನ ಗುಣಲಕ್ಷಣಗಳನ್ನು ಇಲ್ಲಿ ವಿವರಿಸಲಾಗಿದೆ). ಈ ಖುರ್‌ಆನ್ ದಯಾವಂತನೂ ಮತ್ತು ಕಾರುಣ್ಯನಿಧಿಯೂ ಆದ ದೇವನ ಕಡೆಯಿಂದ ಅವತೀರ್ಣಗೊಂಡಿದೆ. ಇದೊಂದು ಗ್ರಂಥ, ಇದರ ವಚನಗಳನ್ನು ಸ್ಪಷ್ಟವಾಗಿ ವಿವರಿಸಲಾಗಿದೆ ಮತ್ತು ಓದಲ್ಪಡುವ ಗ್ರಂಥವಾಗಿದೆ. ಇದು ಅರಬಿ ಭಾಷೆಯಲ್ಲಿದ್ದು ತನ್ನ ಅರ್ಥವನ್ನು ಸ್ಪಷ್ಟವಾಗಿ ವಿವರಿಸುತ್ತದೆ, ಆದರೆ ಈ ಗ್ರಂಥವು ಆಧ್ಯಾತ್ಮಿಕ ಜ್ಞಾನವುಳ್ಳ ಜನರಿಗೆ ಮಾತ್ರ ಲಾಭದಾಯಕವಾಗಿದೆ. ಇದು ಸುವಾರ್ತೆ ನೀಡುವಂತಹುದು ಮತ್ತು ಎಚ್ಚರಿಕೆ ನೀಡುವಂತಹುದು. ಆದರೂ ಅವರಲ್ಲಿ ಹೆಚ್ಚಿನವರು ವಿಮುಖರಾದರು ಮತ್ತು ಅವರು ಆಲಿಸಲು ಸಿದ್ಧರಿಲ್ಲ. ಅವರು ಹೇಳುತ್ತಾರೆ, "ನೀವು ನಮ್ಮನ್ನು ಯಾವುದರೆಡೆಗೆ ಕರೆಯುತ್ತಿದ್ದೀರೋ, ಅದರಿಂದ ನಮ್ಮ ಹೃದಯಗಳು ಮುಚ್ಚಿಹೋಗಿವೆ." ಅಂದರೆ ಅದು ನಮ್ಮ ಹೃದಯಗಳ ಮೇಲೆ ಪ್ರಭಾವ ಬೀರಲಾರದು.

ರಸೂಲುಲ್ಲಾಹ್(ಸ) ಈ ವಚನಗಳನ್ನು ಪಠಿಸುತ್ತಲೇ ಇದ್ದರು ಮತ್ತು ಉತ್ಬಾ ಮೌನವಾಗಿ ಅತ್ಯಂತ ಗಮನವಿಟ್ಟು ಕೇಳುತ್ತಿದ್ದನು. ಆತನು ತನ್ನ ಎರಡೂ ಕೈಗಳನ್ನು ಹಿಂದಕ್ಕೆ ಊರಿ ಕುಳಿತು ತಲ್ಲೀನತೆಯಿಂದ ಖುರ್‌ಆನ್ ಆಲಿಸುತ್ತಿದ್ದನು. ರಸೂಲುಲ್ಲಾಹ್(ಸ) ಸಜ್ದಾದ ಆಯತ್ ತಲುಪಿದಾಗ ಸಜ್ದಾ ಮಾಡಿದರು. ನಂತರ ಉತ್ಬಾನೊಡನೆ ಹೀಗೆ ಹೇಳಿದರು: "ಹೇ ಅಬುಲ್ ವಲೀದ್, ನೀವು ಕೇಳಬೇಕಾದ್ದೆಲ್ಲವನ್ನೂ ಕೇಳಿದ್ದೀರಿ. ಈಗ ನಿರ್ಧಾರ ನಿಮ್ಮ ಕೈಯಲ್ಲಿದೆ. ನಾನು ನಿಮ್ಮ ಮಾತು ಕೇಳಿದೆ, ನೀವು ನನ್ನ ಮಾತು ಕೇಳಿದ್ದೀರಿ, ಈಗ ನಾನೇನು ನಿರ್ಧರಿಸಬೇಕು ಎಂಬುದನ್ನು ನೀವೇ ನಿರ್ಧರಿಸಿ"

ನಬಿ(ಸ)ರಿಗೆ ದೇವನ ಮೇಲಿದ್ದ ಪರಿಪೂರ್ಣ ನಂಬಿಕೆ ಮತ್ತು ತವಕ್ಕುಲ್ ಪ್ರತಿದಿನ ಹೊಸ ರೀತಿಯಲ್ಲಿ ಪ್ರಕಟವಾಗುತ್ತಿತ್ತು. ಉತ್ಬಾನಿಗೆ ಉತ್ತರಿಸಿದ ಬಳಿಕ, ನಬಿ(ಸ) ತಮ್ಮ ನಿಲುವಿನಲ್ಲಿ ದೃಢವಾಗಿದ್ದರು. 'ನಾನು ಬದಲಾಗುತ್ತೇನೆ' ಎಂದು ಅವರು ಹೇಳಲಿಲ್ಲ, ಬದಲಾಗಿ 'ನೀವೇ ಬದಲಾಗಿರಿ ಮತ್ತು ನೀವೇ ನಿರ್ಧರಿಸಿ' ಎಂದು ಹೇಳಿದರು ಮತ್ತು ದೇವನ ಧರ್ಮದ ಪ್ರಚಾರವನ್ನು ಮುಂದುವರಿಸಿದರು.

ನಂತರ ಆ ಕಾಫಿರರ ಗುಂಪು ಒಟ್ಟಾಗಿ ಅಬುತಾಲಿಬ್ ಬಳಿ ಬಂದು ಹೀಗೆ ಹೇಳಿದರು: "ನಿಮ್ಮ ಸೋದರಳಿಯನನ್ನು ತಡೆಯುವಂತೆ ನಾವು ನಿಮ್ಮಲ್ಲಿ ವಿನಂತಿಸಿದ್ದೆವು, ಆದರೆ ನೀವು ಅವರನ್ನು ತಡೆಯಲಿಲ್ಲ. ಒಂದು ವೇಳೆ ಅವರು ನಮ್ಮ ಬಗ್ಗೆ ಇಂತಹ ಮಾತುಗಳನ್ನಾಡುವುದನ್ನು ನಿಲ್ಲಿಸದಿದ್ದರೆ, ನಾವು ಅವರ ಮತ್ತು ನಿಮ್ಮ ವಿರುದ್ಧ ಹೋರಾಡುತ್ತೇವೆ, ಅಂತಿಮವಾಗಿ ಎರಡರಲ್ಲಿ ಒಂದು ಗುಂಪು ನಾಶವಾಗುವವರೆಗೆ." ಖುರೈಷರು

ಅಬು ತಾಲಿಬ್‌ಗೆ ಈ ಮಾತು ಹೇಳಿದಾಗ, ಅವರು ರಸೂಲುಲ್ಲಾಹ್(ಸ)ರನ್ನು ಕರೆಸಿ ಹೀಗೆ ಹೇಳಿದರು: "ಹೇ ನನ್ನ ಸಹೋದರನ ಮಗನೇ, ನನ್ನ ಮೇಲೆ ನಾನು ಹೊರಲಾಗದಂತಹ ಹೊರೆಯನ್ನು ಹಾಕಬೇಡ". ರಸೂಲುಲ್ಲಾಹ್(ಸ) ತಮ್ಮ ಚಿಕ್ಕಪ್ಪ ತಮ್ಮ ಸಹಾಯವನ್ನು ಕೈಬಿಡುತ್ತಾರೆ ಮತ್ತು ತಮ್ಮನ್ನು ಖುರೈಷರಿಗೆ ಒಪ್ಪಿಸುತ್ತಾರೆ ಎಂದು ಭಾವಿಸಿದರು. ಆಗ ನಬಿ(ಸ) ಹೇಳಿದರು: "ಚಿಕ್ಕಪ್ಪಾ, ದೇವನಾಣೆ, ಈ ಜನರು ಸೂರ್ಯನನ್ನು ನನ್ನ ಬಲಗೈಯಲ್ಲಿ ಮತ್ತು ಚಂದ್ರನನ್ನು ನನ್ನ ಎಡಗೈಯಲ್ಲಿ ತಂದಿಟ್ಟರೂ, ನಾನು ನನ್ನ ಕರ್ತವ್ಯದಿಂದ ಹಿಂದೆ ಸರಿಯಲಾರೆ. ದೇವನು ಈ ಕಾರ್ಯವನ್ನು ಪೂರ್ಣಗೊಳಿಸುವವರೆಗೆ ಅಥವಾ ನಾನು ಈ ಪ್ರಯತ್ನದಲ್ಲಿ ಮರಣಹೊಂದುವವರೆಗೆ ನನ್ನ ಕೆಲಸವನ್ನು ಮಾಡುತ್ತಲೇ ಇರುತ್ತೇನೆ." ಈ ಮಾತುಗಳನ್ನು ಹೇಳಿ ಅವರು ಎದ್ದು ಹೋಗತೊಡಗಿದಾಗ, ಅಬು ತಾಲಿಬ್ ಅವರನ್ನು ಕರೆದು ಹೀಗೆ ಹೇಳಿದರು: "ಹೇ ನನ್ನ ಸೋದರಳಿಯನೇ, ನಿನಗೆ ಬೇಕಾದ್ದನ್ನು ಹೇಳು. ದೇವನಾಣೆ! ಯಾವುದೇ ಬೆಲೆ ತೆತ್ತರೂ ನಾನು ನಿನ್ನನ್ನು ಎಂದಿಗೂ ಅವರಿಗೆ ಒಪ್ಪಿಸುವುದಿಲ್ಲ."
(ಅಸ್ಸೀರತುನ್ನಬವಿಯ ಲಿಇಬ್ನೆ ಹಿಶಾಮ್, ಪುಟ–200–201 ಮತ್ತು 220, ದಾರುಲ್ ಕುತುಬ್ ಇಲ್ಮಿಯ 2001)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಐತಿಹಾಸಿಕ ಮತ್ತು ನೈಜ ಘಟನೆಗಳ ಚಿತ್ರಣವನ್ನು ನೀಡುತ್ತಾ ಹೀಗೆ ವಿವರಿಸಿದ್ದಾರೆ: "ರಸೂಲ್ ಕರೀಮ್(ಸ) ಅಲ್ಲಾಹನ ತೌಹೀದ್ ಬಗ್ಗೆ ಜನರಿಗೆ ಬೋಧಿಸಲು ಮತ್ತು ಶಿರ್ಕ್ ಅನ್ನು ಖಂಡಿಸಲು ಪ್ರಾರಂಭಿಸಿದಾಗ, ಮಕ್ಕಾದವರಿಗೆ ಇದು ಬಹಳ ಅಸಹನೀಯವೆನಿಸಿತು. ಕೊನೆಗೆ ಒಂದು ದಿನ ಅವರು ಒಪ್ಪಂದ ಮಾಡಿಕೊಂಡು ಒಂದು ನಿಯೋಗದ ರೂಪದಲ್ಲಿ ನಬಿ(ಸ)ರ ಚಿಕ್ಕಪ್ಪ ಅಬೂತಾಲಿಬ್‌ರ ಬಳಿಗೆ ಬಂದು ಹೀಗೆ ಹೇಳಿದರು: 'ನೀವು ನಮ್ಮ ಗೋತ್ರದ ನಾಯಕರಾಗಿದ್ದೀರಿ, ನಾವು ನಿಮ್ಮನ್ನು ಬಹಳ ಗೌರವಿಸುತ್ತೇವೆ ಮತ್ತು ನಿಮ್ಮ ಮೇಲಿನ ಗೌರವದಿಂದಾಗಿ ನಾವು ನಿಮ್ಮ ಸೋದರಳಿಯನಿಗೆ ಏನೂ ಹೇಳುವುದಿಲ್ಲ. ಆದರೆ ಈಗ ಪರಿಸ್ಥಿತಿ ಮಿತಿಮೀರಿದೆ. ನಾವು ನಿಮ್ಮ ಬಳಿ ಬಂದಿರುವುದರ ಕಾರಣವೇನೆಂದರೆ, ಈ ವಿಷಯದಲ್ಲಿ ನೀವು ಅವರೊಂದಿಗೆ ನಮ್ಮ ಕಡೆಯಿಂದ ಅಂತಿಮವಾಗಿ ಮಾತನಾಡಿ.' ನಂತರ ಉತ್ಪಾ ಆಡಿದ್ದ ಮಾತುಗಳನ್ನೇ ಅವರು ಪುನರಾವರ್ತಿಸಿದರು. ಅಂದರೆ ಉನ್ನತ ಮನೆತನದ, ಅತಿ ಸುಂದರಿ ಮಹಿಳೆಯ, ಹಣದ, ಸಂಪತ್ತಿನ ಮತ್ತು ಅಧಿಕಾರದ ಆಮಿಷ. ಇವುಗಳ ಆಮಿಷ ನೀಡಿ ಆ ಜನರು ಹೀಗೆ ಹೇಳಿದರು: 'ಆದರೆ ಅವರಿಗೆ ಹೇಳಿ, ಅವರು ಕನಿಷ್ಠ ನಮ್ಮ ವಿಗ್ರಹಗಳನ್ನು ನಿಂದಿಸಬಾರದು ಎಂಬ ಪರಿಗಣನೆಯನ್ನಾದರೂ ಇಟ್ಟುಕೊಳ್ಳಲಿ. ಅವರು ನಮ್ಮ ವಿಗ್ರಹಗಳ ಮೇಲೆ ನಂಬಿಕೆ ಇಡಬೇಕೆಂದು ನಾವು ಹೇಳುತ್ತಿಲ್ಲ, ನಮ್ಮ ವಿಗ್ರಹಗಳನ್ನು ತೆಗಳಬಾರದು ಎಂದು ಮಾತ್ರ ಹೇಳುತ್ತಿದ್ದೇವೆ. ಒಂದು ವೇಳೆ ಅವರು ಇವುಗಳಲ್ಲಿ ನಮ್ಮ ಒಂದು ಮಾತನ್ನೂ ಒಪ್ಪದಿದ್ದರೆ, ನೀವು ಅವರ ಕೈ ಬಿಡಿ, ನಾವು ಅವರನ್ನು ಸ್ವತಃ ನಿಭಾಯಿಸುವೆವು.'

ಅಬೂತಾಲಿಬ್ ಬಹಳ ಒಳ್ಳೆಯ ಮನುಷ್ಯರಾಗಿದ್ದರು ಮತ್ತು ನಬಿ(ಸ)ರ ಮೇಲೆ ಅಪಾರ ಪ್ರೀತಿಯನ್ನಿಟ್ಟುಕೊಂಡಿದ್ದರು, ಆದರೆ ಅವರಿಗೆ ತಮ್ಮ ನಾಯಕತ್ವದ ಬಗ್ಗೆಯೂ ಪ್ರೀತಿಯಿತ್ತು. ಅವರು ನಬಿ(ಸ)ರನ್ನು ಕರೆಸಿದರು ಮತ್ತು ಈ ಪ್ರಸ್ತಾಪಗಳನ್ನು ಮುಂದಿಡುತ್ತಾ, 'ಇಂದು ನಿನ್ನ ಜನ ನನ್ನ ಬಳಿ ಬಂದಿದ್ದರು. ನಿನ್ನ ಮೇಲಿನ ಗೌರವದಿಂದಾಗಿ ನಾವು ಇದುವರೆಗೆ ಏನೂ ಹೇಳಿಲ್ಲ, ಆದರೆ ಈಗ ಮಿತಿಮೀರಿದೆ. ಅವರು ನಮ್ಮ ವಿಗ್ರಹಗಳನ್ನು ಮಾತ್ರ ನಿಂದಿಸಬಾರದು, ಬದಲಿಗೆ ನಾವು ಅವರನ್ನು ರಾಜನನ್ನಾಗಿ ಮಾಡಲು, ಸಂಪತ್ತು ನೀಡಲು ಸಿದ್ಧರಿದ್ದೇವೆ. ಯಾವುದೇ ಬೇಡಿಕೆಯಿಟ್ಟರೂ ಅದನ್ನು ಪೂರೈಸಲು ಅವರು ಸಿದ್ಧರಿದ್ದಾರೆ' ಎಂದರು. ತಮ್ಮ ಚಿಕ್ಕಪ್ಪನ ಈ ಸ್ಥಿತಿಯನ್ನು ನೋಡಿದಾಗ, ಬಾಲ್ಯದಿಂದಲೂ ಅವರು ಮಾಡಿದ ಉಪಕಾರಗಳನ್ನು ನೆನೆದು ನಬಿ(ಸ)ರಿಗೆ ಕಣ್ಣೀರು ಉಕ್ಕಿಬಂತು. ಆದರೆ ನಬಿ(ಸ) ಹೀಗೆ ಹೇಳಿದರು: 'ಚಿಕ್ಕಪ್ಪಾ, ನೀವು ನನಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತಿಲ್ಲ, ನೀವು ಖಂಡಿತವಾಗಿಯೂ ನಿಮ್ಮ ಕೋಮಿನ ಜೊತೆಗಿರಿ ಮತ್ತು ನನ್ನನ್ನು ಬಿಟ್ಟುಬಿಡಿ. ದೇವನಾಣೆ, ಈ ಜನರು ಸೂರ್ಯನನ್ನು ನನ್ನ ಬಲಗೈಯಲ್ಲಿ ಮತ್ತು ಚಂದ್ರನನ್ನು ನನ್ನ ಎಡಗೈಯಲ್ಲಿ ತಂದು ನಿಲ್ಲಿಸಿದರೆ ಕೂಡ, ನಾನು ಏಕದೇವನ ಸ್ಮರಣೆಯಿಂದ ಹಿಂದೆ ಸರಿಯಲಾರೆ.'

ನೋಡಿ, ದೇವನ ಅಸ್ತಿತ್ವದ ಮೇಲೆ ಎಷ್ಟೊಂದು ವಿಶ್ವಾಸ ಮತ್ತು ಭರವಸೆಯಿದೆ! ಸೂರ್ಯನು ತನ್ನ ಸ್ಥಾನದಿಂದ ಕದಲುವುದು ಎಂತಹ ದೊಡ್ಡ ಪವಾಡವೆಂದರೆ, ಮನುಷ್ಯ ದಂಗಾಗಿ ಹೋಗುತ್ತಾನೆ. ಆದರೆ ನಬಿ(ಸ) ಹೇಳುತ್ತಾರೆ, 'ಅವರು ಸೂರ್ಯನನ್ನು ಅಥವಾ ಚಂದ್ರನನ್ನು ನನ್ನ ಬಳಿ ತಂದಿಟ್ಟರೂ, ದೇವನ ಮೇಲಿರುವ ನನ್ನ ನಂಬಿಕೆ ಎಷ್ಟಿದೆಯೆಂದರೆ, ಇವೆಲ್ಲವನ್ನೂ ಕೇವಲ ಕಣ್ಕಟ್ಟು ಎಂದು ಪರಿಗಣಿಸಿ, ಅವರ ವಿಗ್ರಹಾರಾಧನೆಯನ್ನು ನಾನು ಸದಾ ಖಂಡಿಸುತ್ತಲೇ ಇರುತ್ತೇನೆ ಮತ್ತು ನನ್ನ ಕರ್ತವ್ಯದಿಂದ ಎಂದಿಗೂ ಹಿಂದೆ ಸರಿಯಲಾರೆ.' (ಉಸ್ವ ಎ ಹಸನ, ಅನ್ವಾರುಲ್ ಉಲೂಮ್, ಸಂಪುಟ–17, ಪುಟ–105–106)

ಇದು ಅಲ್ಲಾಹನ ಅಸ್ತಿತ್ವದ ಮೇಲಿನ ಈಮಾನ್ ಮತ್ತು ಪರಿಪೂರ್ಣ ತವಕ್ಕುಲಿನ ಉನ್ನತ ಸ್ಥಾನವಾಗಿದೆ, ಇದು ಬೇರೆಲ್ಲೂ ಕಾಣಸಿಗುವುದಿಲ್ಲ.

ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

"'ಮುಶ್ರಿಕರು ಅಪವಿತ್ರರು, ಅತ್ಯಂತ ಕೆಟ್ಟ ಸೃಷ್ಟಿಗಳು, ಮೂರ್ಖರು ಮತ್ತು ಶೈತಾನನ ಸಂತತಿಯಾಗಿದ್ದಾರೆ ಹಾಗೂ ಅವರ ಆರಾಧ್ಯರು ಬೆಂಕಿಯ ಉರುವಲು ಮತ್ತು ನರಕದ ಇಂಧನ ಆಗಿದ್ದಾರೆ' ಎಂಬ ವಚನಗಳು ಅವತೀರ್ಣವಾದಾಗ, ಅಬೂತಾಲಿಬ್ ಹಝ್ರತ್ ಪೈಗಂಬರ್(ಸ)ರನ್ನು ಕರೆದು ಹೀಗೆ ಹೇಳಿದರು: 'ಹೇ ನನ್ನ ಸೋದರಳಿಯನೇ, ಈಗ ನಿನ್ನ ನಿಂದನೆಯಿಂದಾಗಿ ಸಮುದಾಯ ತೀವ್ರವಾಗಿ ಕೆರಳಿದೆ ಮತ್ತು ಅವರು ನಿನ್ನನ್ನು ಹಾಗೂ ನಿನ್ನ ಜೊತೆ ನನ್ನನ್ನೂ ಕೊಲ್ಲುವ ಸಾಧ್ಯತೆ ಹೆಚ್ಚಾಗಿದೆ. ನೀನು ಅವರ ಬುದ್ಧಿವಂತರನ್ನು ಮೂರ್ಖರೆಂದು ಕರೆದೆ, ಅವರ ಹಿರಿಯರನ್ನು ಅತ್ಯಂತ ಕೆಟ್ಟ ಸೃಷ್ಟಿಗಳು ಎಂದೆ, ಅವರ ಗೌರವಾನ್ವಿತ ಆರಾಧ್ಯರನ್ನು ನರಕದ ಇಂಧನ ಎಂದೆ ಮತ್ತು ಸಾಮಾನ್ಯವಾಗಿ ಅವರೆಲ್ಲರನ್ನೂ ಅಪವಿತ್ರ ಹಾಗೂ ಶೈತಾನನ ಸಂತತಿಯೆಂದು ಕರೆದೆ. ನಾನು ನಿನ್ನ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ, ನಿನ್ನ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೋ ಮತ್ತು ನಿಂದಿಸುವುದರಿಂದ ಹಿಂದೆ ಸರಿ. ಇಲ್ಲದಿದ್ದರೆ ಕೋಮನ್ನು ಎದುರಿಸುವ ಶಕ್ತಿ ನನಗಿಲ್ಲ.'

ಹಝ್ರತ್ ಪೈಗಂಬರ್(ಸ) ಇದಕ್ಕೆ ಪ್ರತಿಯಾಗಿ ಹೀಗೆ ಹೇಳಿದರು: 'ಹೇ ನನ್ನ ಚಿಕ್ಕಪ್ಪಾ, ಇದು ನಿಂದನೆಯಲ್ಲ, ಬದಲಾಗಿ ವಾಸ್ತವದ ಅಭಿವ್ಯಕ್ತಿ ಮತ್ತು ನೈಜ ಸ್ಥಿತಿಯ ನಿಖರವಾದ ವಿವರಣೆಯಾಗಿದೆ. ಇದೇ ಕಾರ್ಯಕ್ಕಾಗಿ ನನ್ನನ್ನು ಕಳುಹಿಸಲಾಗಿದೆ. ಇದರಿಂದಾಗಿ ನನಗೆ ಮರಣ ಬಂದರೂ ನಾನು ಸಂತೋಷದಿಂದ ನನಗಾಗಿ ಆ ಮರಣವನ್ನು ಸ್ವೀಕರಿಸುವೆನು. ನನ್ನ ಜೀವನವು ಇದೇ ಮಾರ್ಗದಲ್ಲಿ ಮುಡಿಪಾಗಿದೆ. ಸಾವಿನ ಭಯದಿಂದ ನಾನು ಸತ್ಯವನ್ನು ಸಾರುವುದರಿಂದ ಹಿಂದೆ ಸರಿಯಲಾರೆ. ಹೇ ಚಿಕ್ಕಪ್ಪಾ, ನಿಮಗೆ ನಿಮ್ಮ ದೌರ್ಬಲ್ಯ ಮತ್ತು ಕಷ್ಟದ ಚಿಂತೆಯಿದ್ದರೆ, ನೀವು ನನಗೆ ಆಶ್ರಯ ನೀಡುವುದರಿಂದ ಹಿಂದೆ ಸರಿಯಿರಿ. ದೇವನಾಣೆ, ನನಗೆ ನಿಮ್ಮ ಯಾವ ಅಗತ್ಯವೂ ಇಲ್ಲ. ದೈವಿಕ ಆಜ್ಞೆಗಳನ್ನು ತಲುಪಿಸುವುದರಿಂದ ನಾನು ಎಂದಿಗೂ ಹಿಂದೆ ಸರಿಯಲಾರೆ. ನನ್ನ ಒಡೆಯನ ಆಜ್ಞೆಗಳು ನನಗೆ ಜೀವಕ್ಕಿಂತಲೂ ಮಿಗಿಲಾಗಿವೆ. ದೇವನಾಣೆ, ನಾನು ಈ ಮಾರ್ಗದಲ್ಲಿ ಕೊಲ್ಲಲ್ಪಟ್ಟರೆ, ಪುನಃ ಪುನಃ ಜೀವಂತನಾಗಿ ಸದಾ ಇದೇ ಮಾರ್ಗದಲ್ಲಿ ಕೊಲ್ಲಲ್ಪಡಬೇಕೆಂದು ಬಯಸುತ್ತೇನೆ. ಇದು ಭಯಪಡುವ ಸ್ಥಾನವಲ್ಲ, ಬದಲಾಗಿ ಅವನ ಮಾರ್ಗದಲ್ಲಿ ಕಷ್ಟವನ್ನು ಅನುಭವಿಸುವುದರಲ್ಲಿ ನನಗೆ ಅಪಾರವಾದ ಆನಂದವಿದೆ.'

ಹಝ್ರತ್ ಪೈಗಂಬರ್(ಸ) ಈ ಮಾತುಗಳನ್ನು ಹೇಳುತ್ತಿದ್ದಾಗ ಅವರ ಮುಖದಲ್ಲಿ ಸತ್ಯತೆ ಮತ್ತು ಪ್ರಕಾಶದಿಂದ ಕೂಡಿದ ಭಾವಪರವಶತೆ ಎದ್ದು ಕಾಣುತ್ತಿತ್ತು. ಹಝ್ರತ್ ಪೈಗಂಬರ್(ಸ) ಈ ಮಾತುಗಳನ್ನು ಹೇಳಿ ಮುಗಿಸಿದಾಗ, ಸತ್ಯದ ಬೆಳಕನ್ನು ಕಂಡು ಅಬೂತಾಲಿಬ್‌ರ ಕಣ್ಣುಗಳಿಂದ ಅನಿಯಂತ್ರಿತವಾಗಿ ಕಣ್ಣೀರು ಬಂತು ಮತ್ತು ಅವರು ಹೀಗೆ ಹೇಳಿದರು: 'ನಿನ್ನ ಈ ಉನ್ನತ ಸ್ಥಿತಿಯ ಬಗ್ಗೆ ನನಗೆ ಅರಿವಿರಲಿಲ್ಲ. ನೀನು ಬೇರೆಯದೇ ಆದ ಬಣ್ಣದಲ್ಲಿ ಮತ್ತು ಬೇರೆಯದೇ ಆದ ಘನತೆಯಲ್ಲಿದ್ದೀಯೆ. ಹೋಗು, ನಿನ್ನ ಕೆಲಸದಲ್ಲಿ ನಿರತನಾಗು. ನಾನು ಬದುಕಿರುವ ವರೆಗೂ, ನನ್ನ ಶಕ್ತಿಯಿರುವ ವರೆಗೂ ನಿನಗೆ ಬೆಂಬಲ ನೀಡುತ್ತೇನೆ.'"
(ಇಝ್ಹಾಲ ಅವ್‌ಹಾಮ್, ಭಾಗ–1, ರೂಹಾನಿ ಖಝ್ಹಾಈನ್, ಸಂಪುಟ–3, ಪಉಟ–110–111)

ಅದೇ ರೀತಿ ತಾಯಿಫ್‌ನಿಂದ ಹಿಂದಿರುಗುವಾಗ ಹಝ್ರತ್ ಪೈಗಂಬರ್(ಸ)ರ ತವಕ್ಕುಲ್‌ನ ಮತ್ತೊಂದು ಘಟನೆಯಿದೆ. ನಬಿ(ಸ) ಒಂಟಿಯಾಗಿ ತಾಯಿಫ್‌ನ ನಾಯಕರಿಗೆ ತಬ್ಲೀಗ್ ಮಾಡಲು ಹೋಗಿದ್ದರು. ಅಲ್ಲಿಯ ಜನರು ತೀವ್ರ ದೌರ್ಜನ್ಯವೆಸಗಿದ ಕಾರಣ ನಬಿ(ಸ) ಮರಳಿ ಬಂದರು. ಮೇಲ್ನೋಟಕ್ಕೆ ಮಕ್ಕಾವನ್ನು ಪ್ರವೇಶಿಸಲು ಕೂಡ ಸಾಧ್ಯವಿರಲಿಲ್ಲ. ಜೊತೆಯಲ್ಲಿ ಒಬ್ಬ ಸೇವಕನಿದ್ದನು. 'ಈಗ ಏನಾಗುವುದೋ' ಎಂದು ಆ ಸೇವಕನು ಚಿಂತಿತನಾಗಿದ್ದನು. ಆದರೆ ನಬಿ(ಸ)ರಿಗೆ ತಮ್ಮ ಪ್ರಭುವಿನ ಮೇಲೆ ಸಂಪೂರ್ಣ ದೃಢವಿಶ್ವಾಸ ಮತ್ತು ಸಂಪೂರ್ಣ ಭರವಸೆ ಇತ್ತು. ಇದರ ಬಗ್ಗೆ ಪ್ರಸ್ತಾಪಿಸುತ್ತಾ ಅದೇ ಸೇವಕ ಹಝ್ರತ್ ಝ್ಯೈದ್ ಬಿನ್ ಹಾರಿಸಾ(ರ) ವಿವರಿಸುತ್ತಾರೆ: "ನಾನು ನಬಿ(ಸ)ರ ಸನ್ನಿಧಿಯಲ್ಲಿ ಹೀಗೆ ಕೇಳಿದೆ: 'ಯಾ ರಸೂಲಲ್ಲಾಹ್, ಈಗ ನೀವು ಮಕ್ಕಾವನ್ನು ಹೇಗೆ ಪ್ರವೇಶಿಸುತ್ತೀರಿ, ಅವರು ನಿಮ್ಮನ್ನು ಹೊರಹಾಕಿದ್ದಾರಲ್ಲವೇ?' ಆಗ

ರಸೂಲುಲ್ಲಾಹ್(ಸ) ಭವ್ಯವಾದ ಭರವಸೆಯೊಂದಿಗೆ ಹೀಗೆ ಉತ್ತರಿಸಿದರು: 'ಹೇ ರ್ಖುೃದ್, ಅಲ್ಲಾಹನು ಖಂಡಿತವಾಗಿಯೂ ಯಾವುದಾದರೂ ಮಾರ್ಗವನ್ನು ಮಾಡಿಕೊಳ್ಳುವನು ಎಂಬುದನ್ನು ನೀನು ನೋಡುವೆ. ಅಲ್ಲಾಹನು ತನ್ನ ಧರ್ಮದ ಬೆಂಬಲಿಗನಾಗಿದ್ದಾನೆ. ಅವನು ತನ್ನ ಪ್ರವಾದಿಯನ್ನು ವಿಜಯಶಾಲಿಯನ್ನಾಗಿಸಿಯೇ ತೀರುತ್ತಾನೆ.' ಅದರಂತೆ ನಬಿ(ಸ) ಖುರೈಶ್ ನಾಯಕರಿಗೆ ಸಂದೇಶ ಕಳುಹಿಸಿ, ತಮ್ಮನ್ನು ಆಶ್ರಯಕ್ಕೆ ತೆಗೆದುಕೊಂಡು ಮಕ್ಕಾದೊಳಗೆ ಪ್ರವೇಶಿಸಲು ವ್ಯವಸ್ಥೆ ಮಾಡಬೇಕೆಂದು ಕೇಳಿದರು. ಆದರೆ ಎಲ್ಲ ನಾಯಕರು ನಿರಾಕರಿಸಿದರು. ಕೊನೆಗೆ ಮುತ್'ಇಮ್ ಬಿನ್ ಅದೀ ಎಂಬ ಓರ್ವ ಸಭ್ಯ ನಾಯಕನು ನಬಿ(ಸ)ರನ್ನು ತನ್ನ ಆಶ್ರಯದಲ್ಲಿ ಮಕ್ಕಾಗೆ ಪ್ರವೇಶಿಸುವುದಾಗಿ ಘೋಷಿಸಿದನು."
(ಅತ್ತಬಖಾತುಲ್ ಕುಬ್ರ, ರ್ಖಿಕರ್ ಸಬಬ ರಸೂಲುಲ್ಲಾಹ್(ಸ) ಇಲತ್ತಾಯಿಫ್, ಸಂಪುಟ–1, ಪುಟ–165, ದಾರುಲ್ ಕುತುಬ್ ಇಲ್ಮಿಯಾ 1990) (ಸಬ್ಲುಲ್ ಹುದಾ, ಸಂಪುಟ–2, ಪುಟ–440, ದಾರುಲ್ ಕುತುಬ್ ಇಲ್ಮಿಯಾ)

ಹಝ್ರತ್ ಪೈಗಂಬರ್(ಸ)ರ ಹಿಜ್ರತ್ ಸಂದರ್ಭದಲ್ಲಿ ಅಲ್ಲಾಹನ ಮೇಲಿನ ಭರವಸೆಯ ಮಾದರಿಗಳು ಹೇಗಿದ್ದವು?

ಹಝ್ರತ್ ಪೈಗಂಬರ್(ಸ)ರಿಗೆ ವಲಸೆ ಮಾಡಲು ಅನುಮತಿ ಸಿಕ್ಕಾಗ, ನಬಿ(ಸ) ಹಝ್ರತ್ ಅಲಿ(ರ)ರಿಗೆ ತಮ್ಮ ಹಿಜ್ರತ್'ನ ಕಾರ್ಯಕ್ರಮದ ಬಗ್ಗೆ ತಿಳಿಸಿ, ಅವರ ಮೇಲೆ ಜೀವ ಮುಡಿಪಾಗಿಡುವಂತಹ ಒಂದು ಜವಾಬ್ದಾರಿಯನ್ನು ವಹಿಸಿದರು; ಅದೇನೆಂದರೆ, ಇಂದು ರಾತ್ರಿ ಅವರು ನಬಿ(ಸ)ರ ಹಾಸಿಗೆಯ ಮೇಲೆಯೇ ಹಸಿರು ಅಥವಾ ಒಂದು ವರದಿಯ ಪ್ರಕಾರ ಕೆಂಪು ಬಣ್ಣದ 'ಹಝ್ರಮಿ' ಚಾದರವನ್ನು ಹೊದ್ದುಕೊಂಡು ಮಲಗಬೇಕು. (ಯೆಮೆನ್'ನ ಚಾದರವಾಗಿದ್ದರಿಂದ ಅದಕ್ಕೆ ಹಝ್ರಮಿ ಎನ್ನಲಾಗುತ್ತಿತ್ತು). ತಾವೇ ಹೊದ್ದುಕೊಳ್ಳುತ್ತಿದ್ದ ಚಾದರವನ್ನು ನೀಡಿ, ತಮ್ಮ ಜೀವ ಮುಡಿಪಾಗಿಟ್ಟ ಈ ಸೇವಕನಿಗೆ ದೈವಿಕ ಬೆಂಬಲ ಮತ್ತು ಸಹಾಯದ ಭರವಸೆ ನೀಡುತ್ತಾ ನಬಿ(ಸ) ಹೀಗೆ ಹೇಳಿದರು: "ಯಾವ ಚಿಂತೆಯನ್ನೂ ಮಾಡಬೇಡ ಮತ್ತು ಬಹಳ ನೆಮ್ಮದಿಯಿಂದ ನನ್ನ ಹಾಸಿಗೆಯ ಮೇಲೆ ಮಲಗಿರು. ಶತ್ರುಗಳು ನಿನ್ನ ಒಂದು ಕೂದಲನ್ನು ಕೂಡ ಮುಟ್ಟಲು ಸಾಧ್ಯವಿಲ್ಲ." ಅಲ್ಲದೆ ಸತ್ಯಸಂಧ ಮತ್ತು ವಿಶ್ವಾಸಾರ್ಹ ರಸೂಲ್(ಸ) ಅವರಿಗೆ ಮಕ್ಕಾದ ಜನರು ಇಟ್ಟಿದ್ದ ಅಮಾನತುಗಳ (ಠೇವಣಿಗಳ) ಚಿಂತೆ ಮತ್ತು ಜವಾಬ್ದಾರಿಯು ಅರಿವಿತ್ತು, ಆದ್ದರಿಂದ 'ನೀವು ಜನರಿಗೆ ಅವರ ಅಮಾನತುಗಳನ್ನು ಹಿಂದಿರುಗಿಸಿ ನನ್ನ ಹಿಂದೆ ಬನ್ನಿ' ಎಂದು ಹಝ್ರತ್ ಅಲಿ(ರ)ಗೆ ಸೂಚಿಸಿದರು.

ತದನಂತರ ಹಝ್ರತ್ ಪೈಗಂಬರ್(ಸ) ತಮ್ಮ ಮನೆಯಿಂದ ಹೊರಗೆ ಬಂದರು. ಕಣ್ಣುಗಳಲ್ಲಿ ರಕ್ತ ತುಂಬಿಕೊಂಡಂತಿದ್ದ ಮಕ್ಕಾದ ಕಾಫಿರರ ಆಯ್ದ ವೀರರು ಕೈಯಲ್ಲಿ ಖಡ್ಗಗಳನ್ನು ಹಿಡಿದು ನಬಿ(ಸ)ರ ಮನೆಯ ಹೊರಗೆ ಸರ್ವಸನ್ನದ್ಧರಾಗಿ ಕಾವಲು ಕಾಯುತ್ತಿದ್ದರು. ರಾತ್ರಿ ಕತ್ತಲು ಕವಿದ ಮೇಲೆ ದಾಳಿ ಮಾಡಿ ಒಂದೇ ಏಟಿಗೆ ನಬಿ(ಸ)ರನ್ನು ಮುಗಿಸಿಬಿಡಲು (ನಊದುಬಿಲ್ಲಾಹ್) ಅವರು ಕಾದು ಕುಳಿತಿದ್ದರು. ಅವರ ನಾಯಕನಾಗಿದ್ದ ಅಬೂಜಹಲ್, ಬಹಳ ಅಹಂಕಾರ ಮತ್ತು ಅಣಕದಿಂದ ಹೀಗೆ ಹೇಳುತ್ತಿದ್ದನು: "ಮುಹಮ್ಮದ್(ಸ) ಹೇಳುತ್ತಾನೆ, ನೀವು ಅವನ ವಿಷಯದಲ್ಲಿ ಅವನನ್ನು ಅನುಸರಿಸಿದರೆ ನೀವು ಅರಬ್ ಮತ್ತು ಅರಬೇತರ ದೇಶಗಳ ರಾಜರಾಗುತ್ತೀರಿ, ನಂತರ ನೀವು ನಿಮ್ಮ ಸಾವಿನ ಬಳಿಕ ಎಬ್ಬಿಸಲ್ಪಡುವಿರಿ, ಆಗ ನಿಮಗಾಗಿ ಜೋರ್ಡಾನಿನ ತೋಟಗಳಂತಹ ತೋಟಗಳನ್ನು ನಿರ್ಮಿಸಲಾಗುವುದು ಮತ್ತು ಒಂದು ವೇಳೆ ನೀವು ಹಾಗೆ ಮಾಡದಿದ್ದರೆ ನಿಮ್ಮ ನಡುವೆ ಹತ್ಯಾಕಾಂಡ ನಡೆಯುವುದು."

ನಬಿ(ಸ) ಹೊರಬಂದು "ಹೌದು! ನಾನು ಹೀಗೆಯೇ ಹೇಳುತ್ತಿದ್ದೇನೆ" ಎಂದು ಹೇಳಿದರು. ಅನಂತರ ಸೂರಃ ಯಾಸೀನ್'ನ ಈ ವಚನಗಳನ್ನು ಪಠಿಸುತ್ತಾ ಹೊರಟರು:

"ಯಾಸೀನ್. ವಲ್ ಖುರ್'ಆನಿಲ್ ಹಕೀಮ್. ಇನ್ನಕ ಲಮಿನಲ್ ಮುರ್ಸಲೀನ್. ಅಲಾ ಸಿರಾತಿಮ್ ಮುಸ್ತಖೀಮ್. ತನ್ರ್ಖೀಲಲ್ ಅಝೀಝಿರ್ರಹೀಮ್. ಲಿತುಂಧಿರ ಕೌಮಮ್ ಮಾ ಉಂಧಿರ ಆಬಾಉಹುಮ್ ಫಹುಮ್ ಗಾಫಿಲೂನ್. ಲಖದ್ ಹಕ್ಕಲ್ ಕೌಲು ಅಲಾ ಅಕ್ಸರಿಹಿಮ್ ಫಹುಮ್ ಲಾ ಯುಅ್'ಮಿನೂನ್. ಇನ್ನಾ ಜಅಲ್ನಾ ಫೀ ಅಅ್'ನಾಖಿಹಿಮ್ ಅಗ್'ಲಾಲನ್ ಫಹಿಯ ಇಲಲ್ ಅದ್ಖಾನಿ ಫಹುಮ್ ಮುಖ್ಮಹೂನ್. ವಜಅಲ್ನಾ ಮಿಮ್ ಬೈನಿ ಐದೀಹಿಮ್ ಸದ್ದವ್ ವಮಿನ್ ಖಲ್ಫಿಹಿಮ್ ಸದ್ದನ್ ಫಅಗ್ಶೈನಾಹುಮ್ ಫಹುಮ್ ಲಾ ಯುಬ್ಸಿರೂನ್."

ಇದರ ಅರ್ಥ: "ಹೇ ನಾಯಕನೇ, ವಿವೇಕಪೂರ್ಣ ಖುರ್'ಆನಿನ ಆಣೆ! ಖಂಡಿತವಾಗಿಯೂ ನೀವು ಕಳುಹಿಸಲ್ಪಟ್ಟ ಪ್ರವಾದಿಗಳಲ್ಲೊಬ್ಬರಾಗಿದ್ದೀರಿ, ನೇರ ಮಾರ್ಗದಲ್ಲಿದ್ದೀರಿ. ಇದು ಸರ್ವಶಕ್ತನೂ ಪರಮ ದಯಾಳುವೂ ಆದ ದೇವನಿಂದ ಅವತೀರ್ಣಗೊಂಡಿದೆ. ಯಾವ ಜನಾಂಗದ ಪೂರ್ವಜರಿಗೆ ಎಚ್ಚರಿಕೆ ನೀಡಲಾಗಿರಲಿಲ್ಲವೋ ಮತ್ತು ಆ ಕಾರಣದಿಂದ ಅವರು ಅಜಾಗರೂಕರಾಗಿದ್ದಾರೋ ಅವರಿಗೆ ನೀವು ಎಚ್ಚರಿಸುವುದಕ್ಕಾಗಿ (ಇದನ್ನು ಇಳಿಸಲಾಗಿದೆ). ಅವರಲ್ಲಿ ಬಹುಪಾಲು ಜನರ ಮೇಲೆ ಶಿಕ್ಷೆಯ ಮಾತು ಸತ್ಯವಾಗಿದೆ, ಆದ್ದರಿಂದ ಅವರು ವಿಶ್ವಾಸವಿಡುವುದಿಲ್ಲ. ನಾವು ಅವರ ಕುತ್ತಿಗೆಗಳಿಗೆ ಕೊರಳುಪಟ್ಟಿಗಳನ್ನು ಹಾಕಿದ್ದೇವೆ, ಅವು ಗದ್ದದವರೆಗೂ ತಲುಪಿವೆ, ಹೀಗಾಗಿ ಅವರು ತಮ್ಮ ತಲೆಗಳನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡಿದ್ದಾರೆ. ನಾವು ಅವರ ಮುಂದೆಯೂ ಒಂದು ತಡೆಗೋಡೆಯನ್ನು ನಿರ್ಮಿಸಿದ್ದೇವೆ ಮತ್ತು ಅವರ ಹಿಂದೆಯೂ ಒಂದು ತಡೆಗೋಡೆಯನ್ನು ನಿರ್ಮಿಸಿದ್ದೇವೆ. ಆ ಮೂಲಕ ನಾವು ಅವರ ದೃಷ್ಟಿಯನ್ನು ಆವರಿಸಿದ್ದೇವೆ, ಹೀಗಾಗಿ ಅವರಿಗೆ ಏನೂ ಕಾಣಿಸುತ್ತಿಲ್ಲ."

ನಬಿ(ಸ) ಅವರ ತಲೆಗಳ ಮೇಲೆ ಧೂಳನ್ನು ಎರಚುತ್ತಾ, ಈ ವಚನಗಳನ್ನು ಪಠಿಸುತ್ತಾ ಅವರ ಎದುರಿನಿಂದಲೇ ಹೊರಟುಹೋದರು. ಆದರೆ ದೇವನ ಮಹಿಮೆಯೆಂದರೆ, ನಬಿ(ಸ) ಹೋಗುವುದು ಯಾರಿಗೂ ಕಾಣಿಸಲಿಲ್ಲ. ಬದಲಿಗೆ ಆ ಜನರು ಆಗಿಂದ್ದಾಗೆ ಒಳಗೆ ಇಣುಕುತ್ತಾ ಮುಹಮ್ಮದ್(ಸ) ತನ್ನ ಹಾಸಿಗೆಯ ಮೇಲೆಯೇ ಇದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಿದ್ದರು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ–342, ಬಾಬ್ ಹಿಜ್ರತುರ್ರಸೂಲುಲ್ಲಾಹ್(ಸ), ದಾರುಲ್ ಕುತುಬ್ ಇಲ್ಮಿಯ 2001, ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಅಹು, ಸಂಪುಟ–3, ಪುಟ–74, ಬಾಬ್ ಅಲ್'ಹಿಜ್ರ, ಮಕ್ತಬ ಮಿಸರ್, ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–1, ಪುಟ–176)

ಹಿಜ್ರತ್'ನ ಘಟನೆ ಮತ್ತು ನಬಿ(ಸ)ರ ತವಕ್ಕುಲ್ ಅನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಐತಿಹಾಸಿಕ ಆಧಾರಗಳೊಂದಿಗೆ ಹೀಗೆ ವಿವರಿಸುತ್ತಾರೆ:

"ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನ ಕಡೆಯಿಂದ ಹಿಜ್ರತ್ ಮಾಡಲು ಆದೇಶ ಬಂದಾಗ, ಅವರು ಹಝ್ರತ್ ಅಬೂಬಕರ್(ರ)ರನ್ನು ತಮ್ಮೊಂದಿಗೆ ಕರೆದುಕೊಂಡು ಸೌರ್ ಬೆಟ್ಟದತ್ತ ತೆರಳಿದರು. ಇದು ಮಕ್ಕಾದಿಂದ ಸುಮಾರು ಆರು–ಏಳು ಮೈಲು ದೂರದಲ್ಲಿದೆ. ಈ ಬೆಟ್ಟದ ತುದಿಯಲ್ಲಿರುವ ಒಂದು ಗುಹೆಯಲ್ಲಿ ಅವರು ಅಡಗಿಕೊಂಡರು. ಮುಂಜಾನೆ ಕಾಫಿರರು ನಬಿ(ಸ) ತಮ್ಮ ಮನೆಯಲ್ಲಿಲ್ಲ ಮತ್ತು ಎಲ್ಲ ಕಾವಲುಗಳ ನಡುವೆಯೂ ನಬಿ(ಸ) ಯಶಸ್ವಿಯಾಗಿ ತಪ್ಪಿಸಿಕೊಂಡಿದ್ದಾರೆ ಎಂದು ನೋಡಿದಾಗ, ತಕ್ಷಣವೇ ಅವರ ಹುಡುಕಾಟದಲ್ಲಿ ತೊಡಗಿದರು. ಹೆಜ್ಜೆಗುರುತುಗಳನ್ನು ಪತ್ತೆಹಚ್ಚುವುದರಲ್ಲಿ ಅಪಾರ ಪರಿಣತಿ ಹೊಂದಿದ್ದ ಮಕ್ಕಾದ ಅತ್ಯುತ್ತಮ ಶೋಧಕರನ್ನು ತಮ್ಮೊಂದಿಗೆ ಕರೆದೊಯ್ದರು. ಅವರು ಸೌರ್ ಬೆಟ್ಟದವರೆಗೆ ಬಂದು, 'ಮುಹಮ್ಮದ್(ಸ) ಇದ್ದರೆ ಇಲ್ಲೇ ಇರಬೇಕು, ಇದರ ಮುಂದೆ ಬೇರೆಲ್ಲಿಯೂ ಹೆಜ್ಜೆಗುರುತುಗಳಿಲ್ಲ' ಎಂದು ಹೇಳಿದರು. ಆ ಸಮಯದಲ್ಲಿ ಶತ್ರುವು ಗುಹೆಯ ತಲೆಯ ಮೇಲೆಯೇ ನಿಂತಿದ್ದ. ಗುಹೆಯ ಬಾಯಿ ಕಿರಿದಾಗಿರಲಿಲ್ಲ, ಅದು ವಿಶಾಲವಾದ ಬಾಯಿಯುಳ್ಳ ತೆರೆದ ಗುಹೆಯಾಗಿದ್ದು, ಒಳಗೆ ಇಣುಕಿ ಯಾರಾದರೂ ಇದ್ದಾರೆಯೇ ಎಂದು ಬಹಳ ಸುಲಭವಾಗಿ ನೋಡಬಹುದಿತ್ತು. ಆದರೆ ಇಂತಹ ಸ್ಥಿತಿಯಲ್ಲಿಯೂ ನಬಿ(ಸ)ರ ಮೇಲೆ ಯಾವುದೇ ಭಯ ಆವರಿಸುವುದಿಲ್ಲ. ಬದಲಿಗೆ, ಅವರ ಪವಿತ್ರ ಶಕ್ತಿಯ ಪ್ರಭಾವದಿಂದ ಹಝ್ರತ್ ಅಬೂಬಕರ್(ರ)ರ ಹೃದಯವೂ ಸ್ಥಿರವಾಗಿರುತ್ತದೆ. ಅವರು ಮೂಸಾ(ಅ)ರ ಸಂಗಾತಿಗಳಂತೆ 'ನಾವು ಸಿಕ್ಕಿಬಿದ್ದೆವು' ಎಂದು ಹೇಳುವುದಿಲ್ಲ. ಅವರು ಏನಾದರೂ ಹೇಳಿದ್ದರೆ ಅದು ಇಷ್ಟೇ: 'ಯಾ ರಸೂಲಲ್ಲಾಹ್, ಶತ್ರುವು ಎಷ್ಟು ಹತ್ತಿರ ಬಂದಿದ್ದಾನೆಂದರೆ, ಅವನು ಸ್ವಲ್ಪ ಕೆಳಗೆ ದೃಷ್ಟಿ ಹರಿಸಿದರೂ ನಮ್ಮನ್ನು ನೋಡಬಲ್ಲ.'

ಆದರೆ ರಸೂಲ್ ಕರೀಮ್(ಸ) ಹೇಳಿದರು: 'ಉಸ್ಕುತ್ ಯಾ ಅಬಾಬಕರ್, ಇಸ್ನಾನಿ ಅಲ್ಲಾಹು ಸಾಲಿಸುಹುಮಾ' (ಅಬೂಬಕರ್ ಮೌನವಾಗಿರಿ. ನಾವಿಲ್ಲಿ ಇಬ್ಬರಲ್ಲ, ನಮ್ಮೊಂದಿಗೆ ಮೂರನೆಯವನಾಗಿ ಅಲ್ಲಾಹನಿದ್ದಾನೆ). 'ಹಾಗಿದ್ದ ಮೇಲೆ ಅವರು ನಮ್ಮನ್ನು ಹೇಗೆ ನೋಡಬಲ್ಲರು?' ಅದರಂತೆಯೇ ಆಯಿತು. ಶತ್ರುವು ಗುಹೆಯ ಬಾಗಿಲಿಗೆ ತಲುಪಿದ್ದರೂ, ಮುಂದೆ ಬಂದು ಒಳಗೆ ಇಣುಕುವ ಸಾಮರ್ಥ್ಯ ಅವನಿಗಿರಲಿಲ್ಲ. ಅವರು ಅಲ್ಲಿಂದಲೇ 'ನಾಶ, ನಾಶ' ಎಂದು ಅರ್ಥಹೀನ ಮಾತುಗಳನ್ನಾಡುತ್ತಾ ಹಿಂದಿರುಗಿದರು. ಸಾರಾಂಶವೇನೆಂದರೆ, ಮೂಸಾ(ಅ)ರ ಸಂಗಾತಿಗಳು ಗಾಬರಿಗೊಂಡು 'ನಾವು ಸಿಕ್ಕಿಬಿದ್ದೆವು' ಎಂದು ಹೇಳಿ, ಮೂಸಾ(ಅ)ರನ್ನೂ ತಮ್ಮೊಂದಿಗೆ ಸೇರಿಸಿಕೊಂಡು ಎಲ್ಲರೂ ಫರೋಹನ ವಶಕ್ಕೆ ಸಿಲುಕಿದೆವು ಎಂದು ಭಾವಿಸಿದರು. ಆದರೆ ನಬಿ(ಸ)ರ ತವಕ್ಕುಲ್ ತಮ್ಮ ಸಂಗಾತಿಯ ಮೇಲೂ ಎಂತಹ ಪ್ರಭಾವ ಬೀರಿತೆಂದರೆ, ಅವರ ಬಾಯಿಯಿಂದಲೂ 'ನಾವು ಸಿಕ್ಕಿಬಿದ್ದೆವು' ಎಂಬ ಮಾತು ಬರಲಿಲ್ಲ. ಅವರು ಹೇಳಿದ್ದು, 'ಶತ್ರು ನಮ್ಮನ್ನು ನೋಡಬಲ್ಲ' ಎಂದು ಮಾತ್ರ. ಆದರೆ ನಬಿ(ಸ)

ಆ ಭ್ರಮೆ ಅಥವಾ ಆಲೋಚನೆಯನ್ನೂ ಸಹಿಸದೆ, 'ಹಾಗೆ ಯೋಚಿಸಬೇಡ, ನಾವಿಲ್ಲಿ ಇಬ್ಬರಲ್ಲ, ನಮ್ಮೊಂದಿಗೆ ಮತ್ತೊಂದು ಅಸ್ತಿತ್ವವಿದೆ, ಅದು ನಮ್ಮ ದೇವನು' ಎಂದು ಹೇಳಿದರು."(ತಫ್ಸೀರೆ ಕಬೀರ್, ಸಂಪುಟ–9, ಪುಟ–416–417, 2023)

ಹಿಜ್ರತ್‌ನ ಘಟನೆ ಮತ್ತು ನಬಿ(ಸ)ರ ತವಕ್ಕುಲ್ ಹಾಗೂ ಧೈರ್ಯವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ:

"ಹಝ್ರತ್ ಅಬೂಬಕರ್ ಸಿದ್ದೀಕ್(ರ)ರ ಸತ್ಯಸಂಧತೆ ಆ ಬೆಂಕಿಯ ಸಮಯದಲ್ಲಿ ಪ್ರಕಟವಾಯಿತು, ಯಾವಾಗ ಹಝ್ರತ್ ಪೈಗಂಬರ್(ಸ)ರನ್ನು ಸುತ್ತುವರಿಯಲಾಗಿತ್ತೋ. ಕೆಲವರು ಅವರನ್ನು ಗಡೀಪಾರು ಮಾಡುವ ಅಭಿಪ್ರಾಯ ಹೊಂದಿದ್ದರೂ, ಅಸಲು ಉದ್ದೇಶ ಕೊಲೆಯದ್ದೇ ಆಗಿತ್ತು. ಇಂತಹ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ) ತಮ್ಮ ಸತ್ಯತೆ ಮತ್ತು ನಿಷ್ಠೆಯ ಎಂತಹ ಮಾದರಿಯನ್ನು ತೋರಿಸಿದರೆಂದರೆ ಅದು ಅನಂತಕಾಲದ ವರೆಗೆ ಮಾದರಿಯಾಗಿ ಉಳಿಯುವುದು. ಈ ವಿಪತ್ತಿನ ಘಳಿಗೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಈ ಆಯ್ಕೆಯೇ ಹಝ್ರತ್ ಸಿದ್ದೀಕ್(ರ)ರ ಶ್ರೇಷ್ಠತೆ ಮತ್ತು ಅತ್ಯುನ್ನತ ನಿಷ್ಠೆಗೆ ಪ್ರಬಲ ಸಾಕ್ಷಿಯಾಗಿದೆ. (ಅವರು ಹಝ್ರತ್ ಅಬೂಬಕರ್ ಸಿದ್ದೀಕ್(ರ)ರ ಗುಣಲಕ್ಷಣಗಳನ್ನು ವಿವರಿಸುತ್ತಿದ್ದಾರೆ). ಈ ಆಯ್ಕೆಯ ಹಿಂದೆ ರಹಸ್ಯವೇನಿದೆ? ಆ ಸಮಯದಲ್ಲಿ ನಬಿ(ಸ)ರ ಬಳಿ ಎಪ್ಪತ್ತು–ಎಂಬತ್ತು ಸಹಾಬಾಗಳಿದ್ದರು, ಹಝ್ರತ್ ಅಲಿ(ರ) ಕೂಡ ಅಲ್ಲೇ ಇದ್ದರು. ಆದರೆ ಅವರು ಹಝ್ರತ್ ಅಬೂಬಕರ್(ರ)ರನ್ನು ಮಾತ್ರ ಆಯ್ಕೆ ಮಾಡಿದರು. ಇದರ ಹಿಂದಿರುವ ಗುಟ್ಟೇನು? ವಿಷಯವೇನೆಂದರೆ, ಪ್ರವಾದಿಯು ದೇವನ ದೃಷ್ಟಿಯಿಂದ ನೋಡುತ್ತಾನೆ. ಅವನ ವಿವೇಚನೆಯು ದೇವನಿಂದ ಬರುತ್ತದೆ. ಆದ್ದರಿಂದ ಅಲ್ಲಾಹನು ತನ್ನ ಕಶ್ಫ್ ಮತ್ತು ಇಲ್‌ಹಾಮ್ ಮೂಲಕ, ಈ ಕಾರ್ಯಕ್ಕೆ ಅತ್ಯಂತ ಯೋಗ್ಯ ಮತ್ತು ಸೂಕ್ತ ವ್ಯಕ್ತಿ ಹಝ್ರತ್ ಅಬೂಬಕರ್ ಸಿದ್ದೀಕ್ ಮಾತ್ರ ಎಂದು ತಿಳಿಸಿದ್ದನು. ಹಝ್ರತ್ ಅಬೂಬಕರ್(ರ) ಈ ಕಷ್ಟದ ಸಮಯದಲ್ಲಿ ನಬಿ(ಸ)ರ ಜೊತೆಯಾದರು. ಇದು ಅತ್ಯಂತ ಅಪಾಯಕಾರಿ ಪರೀಕ್ಷೆಯ ಸಮಯವಾಗಿತ್ತು.

ಹಝ್ರತ್ ಮಸೀಹ್ (ಯೇಸುಕ್ರಿಸ್ತರ) ಮೇಲೆ ಇಂತಹ ಸಮಯ ಬಂದಾಗ, ಅವರ ಶಿಷ್ಯರು ಅವರನ್ನು ಬಿಟ್ಟು ಓಡಿಹೋದರು ಮತ್ತು ಒಬ್ಬನು ಎದುರಲ್ಲೇ ಶಪಿಸಿದನು. ಆದರೆ ಸಹಾಬಾಗಳಲ್ಲಿ ಪ್ರತಿಯೊಬ್ಬರೂ ಪರಿಪೂರ್ಣ ನಿಷ್ಠೆಯ ಮಾದರಿಯನ್ನು ಪ್ರದರ್ಶಿಸಿದರು. ಸಾರಾಂಶದಲ್ಲಿ, ಅಬೂಬಕರ್ ಸಿದ್ದೀಕ್ ನಬಿ(ಸ)ರಿಗೆ ಸಂಪೂರ್ಣ ಬೆಂಬಲ ನೀಡಿದರು ಮತ್ತು ಸೌರ್ ಗುಹೆಗೆ ಹೋಗಿ ಅಡಗಿದರು. ದುಷ್ಟ ಕಾಫಿರರು ಕಿರುಕುಳ ನೀಡುವ ಸಂಚು ರೂಪಿಸಿ, ಹುಡುಕುತ್ತಾ ಆ ಗುಹೆಯವರೆಗೂ ತಲುಪಿದರು. ಹಝ್ರತ್ ಅಬೂಬಕರ್ ಸಿದ್ದೀಕ್(ರ) 'ಇವರು ತಲೆಯ ಮೇಲೆಯೇ ಬಂದು ನಿಂತಿದ್ದಾರೆ. ಯಾರಾದರೂ ಸ್ವಲ್ಪ ಕೆಳಗೆ ನೋಡಿದರೆ ನಮ್ಮನ್ನು ಕಂಡುಹಿಡಿಯುತ್ತಾರೆ ಮತ್ತು ನಾವು ಸಿಕ್ಕಿಬೀಳುತ್ತೇವೆ' ಎಂದು ವಿಜ್ಞಾಪಿಸಿದರು. ಆ ಸಮಯದಲ್ಲಿ ನಬಿ(ಸ) ಹೇಳಿದರು: **'ಲಾ ತಹ್‌ಝನ್ ಇನ್ನಲ್ಲಾಹ ಮಅನಾ'** (ದುಃಖಿಸಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ). ಈ ವಾಕ್ಯವನ್ನು ಗಮನಿಸಿ, ನಬಿ(ಸ) ಹಝ್ರತ್ ಅಬೂಬಕರ್ ಸಿದ್ದೀಕ್(ರ)ರನ್ನು ತಮ್ಮೊಂದಿಗೆ ಸೇರಿಸಿಕೊಂಡು, 'ಮಅನಾ' (ನಮ್ಮೊಂದಿಗೆ) ಅಂದರೆ ನಿನ್ನ ಮತ್ತು ನನ್ನೊಂದಿಗೆ ದೇವನಿದ್ದಾನೆ ಎಂದು ಹೇಳಿದರು. ಅಲ್ಲಾಹನು ತಕ್ಕಡಿಯ ಒಂದು ತಟ್ಟೆಯಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಮತ್ತು ಇನ್ನೊಂದು ತಟ್ಟೆಯಲ್ಲಿ ಹಝ್ರತ್ ಸಿದ್ದೀಕ್(ರ)ರನ್ನು ಇರಿಸಿದನು. ಆ ಸಮಯದಲ್ಲಿ ಇಬ್ಬರೂ ಪರೀಕ್ಷೆಯಲ್ಲಿದ್ದರು. ಏಕೆಂದರೆ ಇದು ಇಸ್ಲಾಮಿನ ಬುನಾದಿ ಬೀಳುವ ಅಥವಾ ಇಸ್ಲಾಂ ಅಂತ್ಯಗೊಳ್ಳುವ ನಿರ್ಣಾಯಕ ಘಟ್ಟವಾಗಿತ್ತು.

ಶತ್ರುಗಳು ಗುಹೆಯ ಬಳಿ ಇದ್ದರು ಮತ್ತು ವಿವಿಧ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಕೆಲವರು, 'ಈ ಗುಹೆಯನ್ನು ಶೋಧಿಸಿ, ಏಕೆಂದರೆ ಹೆಜ್ಜೆಗುರುತುಗಳು ಇಲ್ಲಿಗೆ ಬಂದು ಕೊನೆಗೊಂಡಿವೆ' ಎಂದರೆ, ಮತ್ತೆ ಕೆಲವರು, 'ಇಲ್ಲಿ ಮನುಷ್ಯರು ಹೇಗೆ ಹೋಗಿರಲು ಸಾಧ್ಯ? ಜೇಡರಹುಳು ಬಲೆ ಹೆಣೆದಿದೆ, ಪಾರಿವಾಳ ಮೊಟ್ಟೆಯಿಟ್ಟಿದೆ' ಎನ್ನುತ್ತಿದ್ದರು. ಈ ರೀತಿಯ ಮಾತುಗಳ ಸದ್ದು ಒಳಗೆ ಕೇಳಿಸುತ್ತಿತ್ತು ಮತ್ತು ನಬಿ(ಸ) ಬಹಳ ಸ್ಪಷ್ಟವಾಗಿ ಅವುಗಳನ್ನು ಆಲಿಸುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಶತ್ರುಗಳು ಅಂತ್ಯಗೊಳಿಸುವ ಉದ್ದೇಶದಿಂದ ಹುಚ್ಚರಂತೆ ಮುನ್ನುಗ್ಗಿ ಬಂದಿದ್ದರು. ಆದರೆ ನಬಿ(ಸ)ರ ಅಸಾಧಾರಣ ಶೌರ್ಯವನ್ನು ನೋಡಿರಿ! ಶತ್ರುಗಳು ಕಣ್ಮುಂದೆ ಇದ್ದರು ಮತ್ತು ನಬಿ(ಸ) ತಮ್ಮ ಸತ್ಯವಂತ ಒಡನಾಡಿಯಾದ ಸಿದ್ದೀಕ್(ರ)ರೊಡನೆ ಹೀಗೆ ಹೇಳುತ್ತಿದ್ದರು: 'ಲಾ ತಹ್‌ಝನ್ ಇನ್ನಲ್ಲಾಹ ಮಅನಾ'. ನಬಿ(ಸ) ಈ ಮಾತುಗಳನ್ನು ತನ್ನ ನಾಲಗೆಯಿಂದಲೇ ಹೇಳಿದ್ದರು ಎಂದು ಈ ವಾಕ್ಯದಿಂದ ಬಹಳ ಸ್ಪಷ್ಟವಾಗಿ ತಿಳಿದುಬರುತ್ತದೆ. ಏಕೆಂದರೆ ಹೀಗೆ ಹೇಳಲು ಧ್ವನಿಯ ಆವಶ್ಯಕತೆಯಿದೆ. ಕೇವಲ ಸನ್ನೆ ಮಾಡಿದರೆ ಸಾಲದು. ಹೊರಗೆ ಶತ್ರುಗಳು ಚರ್ಚಿಸುತ್ತಿದ್ದರು ಮತ್ತು ಒಳಗೆ ಗುಹೆಯಲ್ಲಿ ಮಾಲಿಕ ಮತ್ತು ಸೇವಕ ಇಬ್ಬರೂ ಮಾತುಕತೆಯಲ್ಲಿ ನಿರತರಾಗಿದ್ದರು. ಶತ್ರುಗಳು ಧ್ವನಿಯನ್ನು ಆಲಿಸಬಹುದು ಎಂಬ ವಿಷಯದ ಬಗ್ಗೆ ಯಾವುದೇ ಚಿಂತೆಯಿಲ್ಲ. ಇದು ಅಲ್ಲಾಹನ ಮೇಲಿನ ಸಂಪೂರ್ಣ ನಂಬಿಕೆ ಮತ್ತು ಅರಿವಿನ ಪುರಾವೆಯಾಗಿದೆ. ದೇವನ ವಾಗ್ದಾನಗಳ ಮೇಲೆ ಸಂಪೂರ್ಣ ಭರವಸೆ ಇತ್ತು." (ಮಲ್‌ಫೂಝ್‌ಾತ್, ಸಂಪುಟ–1, ಪುಟ–339–341, 2022)

ಈ ಹಿಜ್ರತ್‌ನ ಪ್ರಯಾಣದಲ್ಲಿ ನಬಿ(ಸ)ರ ತವಕ್ಕುಲ್ ಎದ್ದುಕಾಣುವಂತಹ ಇನ್ನಷ್ಟು ಘಟನೆಗಳಿವೆ, ಇನ್‌ಶಾ ಅಲ್ಲಾಹ್ ಅವುಗಳನ್ನು ಮುಂದೆ ವಿವರಿಸಲಾಗುವುದು.

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವಸಲ್ಲಿಮ್ ಇನ್ನಕ ಹಮೀದುಮ್ ಮಜೀದ್.

(ಪುಟ ಸಂಖ್ಯೆ 02ರ ಉಳಿದ ಭಾಗ)

ಫ್ರೆಂಚ್ ಡೆಸ್ಕ್ ವತಿಯಿಂದ "Lecture Lahore"ನ ಫ್ರೆಂಚ್ ಅನುವಾದ ಪ್ರಕಟಿಸಲಾಗಿದೆ.

ಟರ್ಕಿಶ್ ಭಾಷೆಯಲ್ಲಿಯೂ ಅನುವಾದದ ಕೆಲಸ ನಡೆಯುತ್ತಿದೆ.

ಸ್ಪಾನಿಷ್ ಡೆಸ್ಕ್ ಈ ವರ್ಷ 6 ಪುಸ್ತಕಗಳ ಅನುವಾದಗಳನ್ನು ಪೂರ್ಣಗೊಳಿಸಿದೆ.

ಚೀನೀ ಡೆಸ್ಕ್ ವತಿಯಿಂದ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಅವರು 1924ರಲ್ಲಿ ಧಾರ್ಮಿಕ ಸಮ್ಮೇಳನದಲ್ಲಿ ನೀಡಿದ ಉಪನ್ಯಾಸದ ಅನುವಾದ ಮಾಡಲಾಗಿದೆ.

ಲೀಫ್ಲೆಟ್‌ಗಳು ಮತ್ತು ಫ್ಲೈಯರ್‌ಗಳ ವಿತರಣೆ

ಈ ವರ್ಷ 120 ದೇಶಗಳಲ್ಲಿ ಒಟ್ಟು 78 ಲಕ್ಷ 66 ಸಾವಿರಕ್ಕೂ ಅಧಿಕ ಲೀಫ್ಲೆಟ್‌ಗಳನ್ನು ವಿತರಿಸಲಾಗಿದೆ. ಇವುಗಳ ಮೂಲಕ 3 ಕೋಟಿ 92 ಲಕ್ಷಕ್ಕೂ ಅಧಿಕ ಜನರಿಗೆ ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಸಂದೇಶ ತಲುಪಿಸಲಾಗಿದೆ.

ತಹ್ರೀಕೆ ವಕ್ಫ್–ಎ–ನೌನಲ್ಲಿ ಸೇರಿರುವ ಹುಡುಗರ ಸಂಖ್ಯೆ 50,981 ಮತ್ತು ಹುಡುಗಿಯರ ಸಂಖ್ಯೆ 36,686 ಆಗಿದೆ. ಈ ವರ್ಷ 74 ದೇಶಗಳ 3,116 ಪೋಷಕರು ತಮ್ಮ ಹುಟ್ಟಲಿರುವ ಮಕ್ಕಳನ್ನು ವಕ್ಫ್–ಎ–ನೌಗೆ ಅರ್ಪಿಸಿದ್ದಾರೆ.

ರಿವ್ಯೂ ಆಫ್ ರಿಲಿಜನ್ಸ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಪ್ರಾರಂಭಿಸಿದ "Review of Religions" ಪತ್ರಿಕೆಯು ಈಗ ತನ್ನ 124ನೇ ವರ್ಷಕ್ಕೆ ಪ್ರವೇಶಿಸಿದೆ. ಇದು ವಿವಿಧ ಮಾಧ್ಯಮಗಳ ಮೂಲಕ ಇಂಗ್ಲಿಷ್, ಜರ್ಮನ್, ಸ್ಪಾನಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ಕೋಟ್ಯಂತರ ಜನರಿಗೆ ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಸಂದೇಶವನ್ನು ತಲುಪಿಸುತ್ತಿದೆ. ಈ ವರ್ಷ ಇದರ ಡಿಜಿಟಲ್ ಆವೃತ್ತಿಯನ್ನೂ ಪ್ರಾರಂಭಿಸಲಾಗಿದೆ.

ಅಲ್–ಫಝಲ್ ಇಂಟರ್‌ನ್ಯಾಷನಲ್, ಅಲ್ಲಾಹನ ಅನುಗ್ರಹದಿಂದ ಅಲ್–ಫಝಲ್ ಇಂಟರ್‌ನ್ಯಾಷನಲ್ ಈಗ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಕಟವಾಗುತ್ತಿದೆ.

ಎಂ.ಟಿ.ಎ. ಇಂಟರ್‌ನ್ಯಾಷನಲ್‌ನಲ್ಲಿ 16 ವಿಭಾಗಗಳಿವೆ. ಒಟ್ಟು 568 ಕಾರ್ಯಕರ್ತರು ಹಗಲು–ರಾತ್ರಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ವರ್ಷ ಎಂ.ಟಿ.ಎ. ಆಫ್ರಿಕಾದ ಹತ್ತು ವರ್ಷಗಳು ಪೂರ್ಣಗೊಂಡಿವೆ. ಈ ಹತ್ತು ವರ್ಷಗಳಲ್ಲಿ 7,000ಕ್ಕೂ ಅಧಿಕ ಕಾರ್ಯಕ್ರಮಗಳನ್ನು ಸಿದ್ಧಪಡಿಸಲಾಗಿದ್ದು, ಅವುಗಳ ಮೂಲಕ ಸಾವಿರಾರು ಜನರು ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ಗೆ ಪ್ರವೇಶಿಸಿದ್ದಾರೆ.

ಆಫ್ರಿಕಾದಲ್ಲಿ ಜಮಾಅತ್‌ನ ಸ್ವಂತ ರೇಡಿಯೋ ಸ್ಟೇಷನ್‌ಗಳ ಸಂಖ್ಯೆ 26 ಆಗಿದೆ.

ವಾಯ್ಸ್ ಆಫ್ ಇಸ್ಲಾಮ್ ರೇಡಿಯೋ ಯು.ಕೆ.ಯ ವಾಯ್ಸ್ ಆಫ್ ಇಸ್ಲಾಮ್ ರೇಡಿಯೋ ಕೂಡ ಹತ್ತು ವರ್ಷಗಳನ್ನು ಪೂರ್ಣಗೊಳಿಸಿದೆ. ಪ್ರಸ್ತುತ ಈ ರೇಡಿಯೋದ ಪ್ರಸಾರವು ಬ್ರಿಟನ್‌ನ 13 ನಗರಗಳಲ್ಲಿ ನೇರವಾಗಿ ಪ್ರಸಾರವಾಗುತ್ತಿದೆ. ಇದರ ಆನ್‌ಲೈನ್ ಪ್ರಸಾರವನ್ನು ವಿಶ್ವದಾದ್ಯಂತ ಕೇಳಬಹುದು.

ಅಲ್–ಇಸ್ಲಾಮ್ ವೆಬ್‌ಸೈಟ್, ಅಲ್–ಇಸ್ಲಾಮ್ ವೆಬ್‌ಸೈಟ್‌ನಲ್ಲಿ ಹದೀಸ್ ಸರ್ಚ್ ಎಂಜಿನ್ ಮತ್ತು ಆಪ್ ಪ್ರಾರಂಭಿಸಲಾಗಿದೆ. ಖುರ್‌ಆನ್ ಸರ್ಚ್ ಎಂಜಿನ್‌ನಲ್ಲಿಯೂ ಸುಧಾರಣೆಗಳನ್ನು ಮಾಡಲಾಗಿದೆ.

ಅಲ್–ವಸಿಯ್ಯತ್ ಮತ್ತು Ten Conditions of Bai'at ನ ಆಪ್‌ಗಳನ್ನು ಕೂಡ ಸೇರಿಸಲಾಗಿದೆ. 36 ಹೊಸ ಇಂಗ್ಲಿಷ್ ಇ–ಪುಸ್ತಕಗಳ ಸೇರ್ಪಡೆಯೊಂದಿಗೆ ಒಟ್ಟು ಇ–ಪುಸ್ತಕಗಳ ಸಂಖ್ಯೆ 260ಕ್ಕೆ ತಲುಪಿದೆ. ಅಲ್–ಇಸ್ಲಾಮ್ ತಂಡವೂ ಬಹುತೇಕ ಸಂಪೂರ್ಣವಾಗಿ ಸ್ವಯಂಸೇವಕರನ್ನು ಒಳಗೊಂಡಿದ್ದು ಅತ್ಯುತ್ತಮ ಸೇವೆ ಸಲ್ಲಿಸುತ್ತಿದೆ.

ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಆಫ್ ಅಹ್ಮದೀಯ್ಯಾ ಆರ್ಕಿಟೆಕ್ಟ್ಸ್ ಅಂಡ್ ಎಂಜಿನಿಯರ್ಸ್ IAAAE ಈ ವರ್ಷ 65 ನೀರಿನ ಕೊಳವೆಗಳನ್ನು ಅಳವಡಿಸಿದ್ದು, ಇದರಿಂದ 2 ಲಕ್ಷ ಜನರು ಪ್ರಯೋಜನ ಪಡೆದಿದ್ದಾರೆ. ಅದೇ ರೀತಿ ಮಾದರಿ ಗ್ರಾಮಗಳನ್ನು ಸ್ಥಾಪಿಸಲಾಗಿದೆ ಮತ್ತು ಸೌರ ವಿದ್ಯುತ್ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ.

ಮಜ್ಲಿಸೆ ನುಸ್ರತ್ ಜಹಾನ್ ಅಡಿಯಲ್ಲಿ ಆಫ್ರಿಕಾದ 54 ದೇಶಗಳಲ್ಲಿ 41 ಕ್ಲಿನಿಕ್‌ಗಳು ಮತ್ತು ಆಸ್ಪತ್ರೆಗಳು ಸ್ಥಾಪಿತವಾಗಿವೆ. ಕಳೆದ ವರ್ಷ 5 ಲಕ್ಷಕ್ಕೂ ಅಧಿಕ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸುವ ಅವಕಾಶ ದೊರೆತಿದೆ. ಆಫ್ರಿಕಾದ 13 ದೇಶಗಳಲ್ಲಿ 620 ಪ್ರಾಥಮಿಕ ಮತ್ತು ಮಧ್ಯಮ ಶಾಲೆಗಳು ಹಾಗೂ 80 ಸೆಕೆಂಡರಿ ಶಾಲೆಗಳು ಶೈಕ್ಷಣಿಕ ಸೇವೆ ಸಲ್ಲಿಸುತ್ತಿವೆ.

ಹ್ಯೂಮ್ಯಾನಿಟಿ ಫಸ್ಟ್, ಹ್ಯೂಮ್ಯಾನಿಟಿ ಫಸ್ಟ್‌ಗೆ ಒಟ್ಟು 25 ಲಕ್ಷಕ್ಕೂ ಅಧಿಕ ಜನರಿಗೆ ಸೇವೆ ಸಲ್ಲಿಸುವ ಅವಕಾಶ ದೊರೆತಿದೆ.

ನವಬೈಅತ್‌ದಾರರೊಂದಿಗೆ ಸಂಪರ್ಕ, ವರ್ಷಪೂರ್ತಿ 95 ದೇಶಗಳಲ್ಲಿ ಒಟ್ಟು 54,485 ನವಬೈಅತ್‌ದಾರರೊಂದಿಗೆ ಸಂಪರ್ಕವನ್ನು ಪುನಃ ಸ್ಥಾಪಿಸಲಾಗಿದೆ.

ಹೊಸ ಬೈಅತ್‌ಗಳ ಸಂಖ್ಯೆ, ಈ ವರ್ಷ 2,67,596 ಹೊಸ ಬೈಅತ್‌ಗಳು ನಡೆದಿವೆ. ಅಲ್ಹಮ್ದುಲಿಲ್ಲಾಹ್, 132 ದೇಶಗಳಲ್ಲಿ ಸುಮಾರು 670ಕ್ಕೂ ಅಧಿಕ ಜನಾಂಗಗಳು ಅಹ್ಮದಿಯ್ಯತ್‌ಗೆ ಪ್ರವೇಶಿಸಿವೆ.

ಆಫ್ರಿಕಾದಲ್ಲಿ ಹೆಚ್ಚಿನ ಬೈಅತ್‌ಗಳು ನಡೆದ ದೇಶಗಳಲ್ಲಿ ನೈಜೀರಿಯಾ ಮೊದಲ ಸ್ಥಾನದಲ್ಲಿದೆ. ನಂತರ ಕಾಂಗೋ ಬ್ರಾಝಾವಿಲ್, ಗಿನಿ ಬಿಸ್ಸಾವು, ಕ್ಯಾಮರೂನ್, ಗಿನಿ ಕಾನಕ್ರಿ, ಲೈಬೀರಿಯಾ, ಕಾಂಗೋ ಕಿನ್ಶಾಸಾ, ಗ್ಯಾಂಬಿಯಾ, ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್, ಸೆನೆಗಲ್, ಸಿಯೆರಾ ಲಿಯೋನ್, ಟಾಂಜಾನಿಯಾ, ಐವರಿ ಕೋಸ್ಟ್, ನೈಜರ್, ಬೆನಿನ್, ಟೋಗೋ, ಕೀನ್ಯಾ, ಘಾನಾ, ಉಗಾಂಡಾ, ಮಲಾವಿ, ಮಾಲಿ, ಬುರ್ಕಿನಾ ಫಾಸೋ, ಮಡಗಾಸ್ಕರ್, ಚಾಡ್, ಜಾಂಬಿಯಾ, ರುವಾಂಡಾ, ಬುರುಂಡಿ, ಇಥಿಯೋಪಿಯಾ ಮತ್ತು ಸಾಂ ತೋಮೆ ಮುಂತಾದ ದೇಶಗಳು ಸೇರಿವೆ.

ಆಫ್ರಿಕಾದ ಇತರ ದೇಶಗಳಲ್ಲಿ ಸೋಮಾಲಿಯಾ, ಜಿಂಬಾಬ್ವೆ, ಮಯೊಟ್ಟೆ ದ್ವೀಪ, ಈಜಿಪ್ಟ್, ಎಸ್ವಾಟಿನಿ, ಲೆಸೊಥೊ, ಅಂಗೋಲಾ, ಕೇಪ್ ವರ್ಡೆ, ದಕ್ಷಿಣ ಆಫ್ರಿಕಾ, ನಮೀಬಿಯಾ ಮುಂತಾದವುಗಳೂ ಸೇರಿವೆ.

ಏಷ್ಯಾದಲ್ಲಿ ಇಂಡೋನೇಷ್ಯಾದಲ್ಲಿ ಅತಿ ಹೆಚ್ಚು ಬೈಅತ್‌ಗಳು ನಡೆದಿವೆ. ನಂತರ ಭಾರತ, ಬಾಂಗ್ಲಾದೇಶ ಮತ್ತು ಫಿಲಿಪೈನ್ಸ್ ಸ್ಥಾನದಲ್ಲಿವೆ. ಇದರ ಹೊರತಾಗಿ ಮಲೇಷ್ಯಾ, ಥಾಯ್ಲೆಂಡ್, ಕಝಾಕಿಸ್ತಾನ್, ಶ್ರೀಲಂಕಾ, ಕಾಂಬೋಡಿಯಾ, ಜಪಾನ್, ಸಿಂಗಾಪುರ ಮುಂತಾದ ದೇಶಗಳಲ್ಲಿಯೂ ಬೈಅತ್‌ಗಳು ನಡೆದಿವೆ.

ಯುರೋಪ್‌ನಲ್ಲಿ ಜರ್ಮನಿ ಮೊದಲ ಸ್ಥಾನದಲ್ಲಿದೆ. ನಂತರ ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಸ್ಪೇನ್, ನಾರ್ವೆ ಮತ್ತು ಸರ್ಬಿಯಾ ಇವೆ. ಇದರ ಹೊರತಾಗಿ ಸ್ವಿಟ್ಜರ್ಲ್ಯಾಂಡ್, ಅಲ್ಬೇನಿಯಾ, ಆಸ್ಟ್ರಿಯಾ, ಫಿನ್‌ಲ್ಯಾಂಡ್, ರಷ್ಯಾ, ಚೆಕ್ ರಿಪಬ್ಲಿಕ್ ಮತ್ತು ಮಾಲ್ಟಾ ಮುಂತಾದ ದೇಶಗಳಲ್ಲಿಯೂ ಕೆಲವು ಬೈಅತ್‌ಗಳು ನಡೆದಿವೆ.

ಅಮೆರಿಕನ್ ಬ್ಲಾಕ್‌ನಲ್ಲಿ ಕೆನಡಾದಲ್ಲಿ ಹೆಚ್ಚಿನ ಬೈಅತ್‌ಗಳು ನಡೆದಿವೆ. ನಂತರ ಅಮೆರಿಕಾ ಇದೆ. ಪರಾಗ್ವೆ, ಮೆಕ್ಸಿಕೊ, ಬೆಲೀಝ್, ಹೈಟಿ, ಗಯಾನಾ, ಪ್ಯೂರ್ಟೊ ರಿಕೊ, ಬ್ರೆಜಿಲ್, ಎಲ್ ಸಾಲ್ವಡಾರ್, ಸುರಿನಾಮ್, ಪನಾಮಾ, ಚಿಲಿ ಮತ್ತು ವೆನೆಜುವೆಲಾ ಮುಂತಾದ ದೇಶಗಳಲ್ಲಿಯೂ ಬೈಅತ್‌ಗಳು ನಡೆದಿವೆ.

ಆಸ್ಟ್ರೇಲಿಯಾ ಖಂಡದಲ್ಲಿ ಆಸ್ಟ್ರೇಲಿಯಾ ಮೊದಲ ಸ್ಥಾನದಲ್ಲಿದೆ. ನಂತರ ಫಿಜಿ, ನ್ಯೂಜಿಲೆಂಡ್ ಮತ್ತು ಸಾಲೊಮನ್ ದ್ವೀಪಗಳು ಇವೆ.

ಅರಬ್ ದೇಶಗಳಲ್ಲಿಯೂ ಬೈಅತ್‌ಗಳು ನಡೆದಿವೆ.

ಬೈಅತ್‌ಗಳ ಘಟನೆಗಳು

ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಅವರು ಹೇಳಿದರು: "ಬೈಅತ್‌ಗಳಿಗೆ ಸಂಬಂಧಿಸಿದಂತೆ ಕೆಲವು ಘಟನೆಗಳಿವೆ. ಈ ಘಟನೆಗಳು ಜನರಲ್ಲಿ ಹೆಚ್ಚಿನ ಆಸಕ್ತಿಯನ್ನು ಉಂಟುಮಾಡುತ್ತವೆ. ಆದ್ದರಿಂದ ಅವುಗಳಲ್ಲಿ ಕೆಲವು ಘಟನೆಗಳನ್ನು ನಾನು ವಿವರಿಸುತ್ತೇನೆ."

ರೇಡಿಯೋ ಮೂಲಕ ತಬ್ಲೀಗ್

ಲೈಬೀರಿಯಾದ ಅಮೀರ್ ಸಾಹಿಬರು ಬರೆಯುತ್ತಾರೆ: ಮೊಮೀಕಾದ ವೊಂಟ್ಸಿ ಪ್ರದೇಶದಲ್ಲಿ ಒಬ್ಬ ಮುಖ್ಯ ಇಮಾಮ್ ಜಮಾಅತ್‌ನ ವಿರುದ್ಧ ನಕಾರಾತ್ಮಕ ಅಭಿಪ್ರಾಯ ಹೊಂದಿದ್ದರು. ಅಹ್ಮದಿಗಳ ಕಲಿಮಾ ವಿಭಿನ್ನವಾಗಿದೆ ಮತ್ತು ಅವರು, ನೂಝುಬಿಲ್ಲಾಹ್, ರಸೂಲೆ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರ ಸುನ್ನತ್‌ಗೆ ಅನುಸಾರವಾಗಿ ನಡೆಯುವುದಿಲ್ಲ ಎಂದು ಅವರು ಭಾವಿಸುತ್ತಿದ್ದರು.

ಅವರ ಪ್ರದೇಶದಲ್ಲಿ ಈವರೆಗೆ ತಬ್ಲೀಗ್ ಮಾಡಲು ಸಾಧ್ಯವಾಗಿರಲಿಲ್ಲ. ಏಕೆಂದರೆ ಅವರು ಮಾತನ್ನು ಕೇಳಲು ಸಹ ಸಿದ್ಧರಾಗಿರಲಿಲ್ಲ. ಒಂದು ದಿನ ಆಕಸ್ಮಿಕವಾಗಿ ಆ ಇಮಾಮ್ ಸಾಹಿಬರಿಗೆ ರೇಡಿಯೋ ಕೇಳುತ್ತಿರುವಾಗ ಜಮಾಅತೆ ಅಹ್ಮದೀಯ್ಯಾದ ಕಾರ್ಯಕ್ರಮವನ್ನು ಕೇಳುವ ಅವಕಾಶ ದೊರೆಯಿತು. ಆ ಸಮಯದಲ್ಲಿ ಕುರ್‌ಆನ್ ಮತ್ತು ಹದೀಸ್‌ನ ಬೆಳಕಿನಲ್ಲಿ ಇಸ್ಲಾಮಿನ ಬೋಧನೆಗಳ ಸೌಂದರ್ಯವನ್ನು ಅತ್ಯಂತ ಸುಂದರವಾದ ಹಾಗೂ ತರ್ಕಬದ್ಧ ರೀತಿಯಲ್ಲಿ ವಿವರಿಸಲಾಗುತ್ತಿತ್ತು. ಸೀರತೆ ನಬವಿಯ್ಯ ಸಲ್ಲಲ್ಲಾಹು ಅಲೈಹಿ ವಸಲ್ಲಂ ಕುರಿತು ಚರ್ಚೆ ನಡೆಯುತ್ತಿತ್ತು. ಅವರಿಗೆ ಆ ಕಾರ್ಯಕ್ರಮ ಬಹಳ ಇಷ್ಟವಾಯಿತು. ಆದ್ದರಿಂದ ಅವರು ಜಮಾಅತ್‌ನ ಕಾರ್ಯಕ್ರಮಗಳನ್ನು ನಿಯಮಿತವಾಗಿ ಕೇಳಲು ಪ್ರಾರಂಭಿಸಿದರು. ಈ ಕಾರ್ಯಕ್ರಮಗಳು ಅವರ ಹೃದಯ ಮತ್ತು ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿದವು. ಅವರು ಸ್ವತಃ ನಮ್ಮ ಮುಬಲ್ಲಿಗರನ್ನು ತಮ್ಮ ಮಸೀದಿಯಲ್ಲಿ ಜುಮಾ ನಮಾಝ್‌ಗೆ ಬಂದು ಜನರಿಗೆ ಜಮಾಅತ್‌ನ ಅಖೀದಾಗಳ ಕುರಿತು ತಿಳಿಸಲು ಆಹ್ವಾನಿಸಿದರು. ಆದ್ದರಿಂದ ನಮ್ಮ ಮುಬಲ್ಲಿಗರು ತಮ್ಮ ತಬ್ಲೀಗೀ ತಂಡದೊಂದಿಗೆ ಅವರ ಗ್ರಾಮಕ್ಕೆ ತೆರಳಿ ಜುಮಾ ನಮಾಝ್ ನೆರವೇರಿಸಿದರು. ರಸೂಲೆ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರ ಭವಿಷ್ಯವಾಣಿಗಳಿಗೆ ಅನುಗುಣವಾಗಿ ಇಮಾಮ್ ಮಹ್ದಿ ಅಲೈಹಿಸ್ಸಲಾಮ್ ಅವರ ಆಗಮನ ಮತ್ತು ಇಸ್ಲಾಮಿನ ಪುನರುಜ್ಜೀವನದ ಕುರಿತು ತಿಳಿಸಿದರು. ನಂತರ ಆ ಇಮಾಮ್ ಸಾಹಿಬರು ಎದ್ದು ನಿಂತು ಜಮಾಅತ್‌ಗೆ ಸೇರಿಕೊಳ್ಳುವುದಾಗಿ ಘೋಷಿಸಿದರು. ಅವರು ತಮ್ಮ ಪ್ರದೇಶದ ಮುಖ್ಯ ಇಮಾಮರಾಗಿದ್ದ ಕಾರಣ, ಅವರ ಪ್ರಭಾವದಿಂದ ಇನ್ನೂ ಎರಡು ಗ್ರಾಮಗಳ ಜನರೂ ಅವರೊಂದಿಗೆ ಅಹ್ಮದಿಯ್ಯತ್‌ಗೆ ಪ್ರವೇಶಿಸಿದರು. ಹೀಗೆ ಒಂದೇ ದಿನದಲ್ಲಿ ಮೂರು ಗ್ರಾಮಗಳಲ್ಲಿ ಅಹ್ಮದಿಯ್ಯತ್‌ನ ಸಸಿ ನೆಡಲಾಯಿತು.

ಕನಸುಗಳ ಮೂಲಕ ಮಾರ್ಗದರ್ಶನ

ಚಾಡ್‌ನಲ್ಲಿ ನಮ್ಮ ಮುಅಲ್ಲಿಮ್ ಸಾಹಿಬರು ಹೇಳುತ್ತಾರೆ: ಅವರು ಬಹಳ ಕಾಲದಿಂದ ತಮ್ಮ ಸಹೋದರಿಗೆ ತಬ್ಲೀಗ್ ಮಾಡುತ್ತಿದ್ದರು. ಯಾವಾಗಲೂ ಜಮಾಅತ್‌ನ ಸಂದೇಶವನ್ನು ತಲುಪಿಸಿದಾಗ ಆಕೆ ಹೀಗೆ ಹೇಳುತ್ತಿದ್ದಳು: "ಅಲ್ಲಾಹನು ನನಗೆ ಸರಿಯಾದ ಮಾರ್ಗವನ್ನು ತೋರಿಸಲಿ" ಅಥವಾ "ಅಲ್ಲಾಹ್ ನಿಮಗೆಲ್ಲ ಮಾರ್ಗದರ್ಶನ ನೀಡಲಿ." ಆ ಮುಅಲ್ಲಿಮ್ ಸಾಹಿಬರ ಕುಟುಂಬದ ಬಹುತೇಕ ಜನರು ಜಮಾಅತ್‌ನ ವಿರೋಧಿಗಳಾಗಿದ್ದಾರೆ. ಆ ಮಹಿಳೆ ಹೇಳುತ್ತಾಳೆ: "ಕೆಲವು ದಿನಗಳ ಹಿಂದೆ ನಾನು ಹಗಲಿನ ಸಮಯದಲ್ಲಿ ಝಿಕ್ರ್-ಎ-ಇಲಾಹಿಯಲ್ಲಿ ನಿರತರಾಗಿದ್ದಾಗ, ನನಗೆ ಕಶ್ಫ್‌ನಲ್ಲಿ ಒಬ್ಬ ಹಿರಿಯ ವ್ಯಕ್ತಿ ಕಾಣಿಸಿಕೊಂಡರು ಮತ್ತು ಜೊತೆಗೆ 'ಅಲ್-ಇಮಾಮ್ ಹುಜ್ಜತು' ಎಂಬ ಧ್ವನಿ ಕೇಳಿಸಿತು. ನಾನು ನನ್ನ ಸಹೋದರನ ಮನೆಗೆ ಹೋದಾಗ ಅವನ ಮೊಬೈಲ್‌ನಲ್ಲಿ ಒಂದು ಚಿತ್ರವನ್ನು ನೋಡಿದೆ ಮತ್ತು 'ಇವರು ಯಾರು?' ಎಂದು ಕೇಳಿದೆ. ನನ್ನ ಸಹೋದರನು ಉತ್ತರಿಸಿದನು: 'ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್.' ನಾನು ನನ್ನ ಸಹೋದರನಿಗೆ ತಿಳಿಸಿದೆ: 'ಕೆಲವು ದಿನಗಳ ಹಿಂದೆ ನಾನು ಹಗಲಿನಲ್ಲಿ ಕಶ್ಫ್‌ನಲ್ಲಿ ಇವರನ್ನು ನೋಡಿದ್ದೆ ಮತ್ತು ಇದೇ ಧ್ವನಿಯನ್ನೂ ಕೇಳಿದ್ದೆ.' ಈಗ ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿದ್ದಾರೆ. ಆದ್ದರಿಂದ ನಾನು ಬೈಅತ್ ಮಾಡಿ ಜಮಾಅತ್‌ಗೆ ಸೇರಿಕೊಳ್ಳುತ್ತೇನೆ."

ಮಕ್ಕಳ ಮೂಲಕ ದೊರೆತ ಮಾರ್ಗದರ್ಶನ

ಉತ್ತರ ಕ್ಯಾಮರೂನ್‌ನ ಒಂದು ನಗರವಾದ ಮರುವಾ ಕುರಿತು ಸದರ್ ಸಾಹಿಬರು ಹೇಳುತ್ತಾರೆ: ಅಲ್ಲಿ ಮುಅಲ್ಲಿಮ್ ಅಬೂಬಕರ್ ಸಾಹಿಬರು ಮಕ್ಕಳಿಗೆ ಕುರ್‌ಆನ್ ಶರೀಫ್ ಮತ್ತು ದೀನೀ ಮಾಹಿತಿಯನ್ನು ಕಲಿಸುತ್ತಿದ್ದರು. ಖಲೀಫಾ ಅಹ್ಮದಿಯ್ಯತ್ ಅವರ ಹೆಸರುಗಳನ್ನೂ ಮಕ್ಕಳಿಗೆ ಕಂಠಪಾಠ ಮಾಡಿಸುತ್ತಿದ್ದರು. ಒಬ್ಬ ಅಹ್ಮದಿಯೇತರ ಮಗುವೂ ಈ ಹೆಸರುಗಳನ್ನು ಕಂಠಪಾಠ ಮಾಡಿಕೊಂಡಿತ್ತು. ಒಂದು ದಿನ ಆ ಮಗು ತನ್ನ ಮನೆಯಲ್ಲಿ ಜೋರಾಗಿ ಖಲೀಫಾ ಅಹ್ಮದಿಯ್ಯತ್ ಅವರ ಹೆಸರುಗಳನ್ನು ಪಠಿಸಲು ಪ್ರಾರಂಭಿಸಿತು. ಅದರ ತಂದೆ ಉಸ್ಮಾನ್ ಮುಹಮ್ಮದ್ ಸಾಹಿಬರು ತನ್ನ ಮಗುವಿನ ಬಾಯಿಂದ ನನ್ನ ಹೆಸರನ್ನು ಕೇಳಿದಾಗ ಆಶ್ಚರ್ಯಗೊಂಡು ಕೇಳಿದರು: "ನೀನು ಏನು ಓದುತ್ತಿದ್ದೀಯ?" ಮಗು ಹೇಳಿತು: "ನಮಗೆ ಮಸೀದಿಯಲ್ಲಿ ಈ ಹೆಸರುಗಳನ್ನು ಕಲಿಸಲಾಗಿದೆ." ಆ ಮಗುವಿನ ತಂದೆ ನಮ್ಮ ಸದರ್ ಸಾಹಿಬರ ಬಳಿಗೆ ಹೋಗಿ ಆ ಹೆಸರಿನ ಕುರಿತು ವಿಚಾರಿಸಿದರು. ಸದರ್ ಸಾಹಿಬರು ತಿಳಿಸಿದರು: "ಮುಅಲ್ಲಿಮ್ ಸಾಹಿಬರು ಮಕ್ಕಳಿಗೆ ದೀನೀ ಮಾಹಿತಿಯನ್ನು ಕಲಿಸುತ್ತಾರೆ. ನಾವು ಅಹ್ಮದಿಗಳು ಮತ್ತು ನಮ್ಮ ಪ್ರಸ್ತುತ ಇಮಾಮ್ ಮಿರ್ಜಾ ಮಸ್ರೂರ್ ಅಹ್ಮದ್ ಸಾಹಿಬರು." ಇದನ್ನು ಕೇಳಿ ಉಸ್ಮಾನ್ ಸಾಹಿಬರು ಹೇಳಿದರು: "ನನಗೆ ಕನಸಿನಲ್ಲಿ 'ಮಸ್ರೂರ್ ಅಹ್ಮದ್' ಎಂಬ ಹೆಸರು ಕೇಳಿಸಲ್ಪಟ್ಟಿತ್ತು. 'ಮಸ್ರೂರ್ ಅಹ್ಮದ್ ಅವರ ವಿಧೇಯರಾಗಿರಿ ಮತ್ತು ಅವರೊಂದಿಗೆ ಇರಿ' ಎಂಬ ಧ್ವನಿ ನನಗೆ ಕೇಳಿಸಿತು. ನಾನು ಬಹಳ ಆಶ್ಚರ್ಯಪಟ್ಟೆ. ಈ ವ್ಯಕ್ತಿ ಯಾರು ಎಂದು ನನಗೆ ತಿಳಿದಿರಲಿಲ್ಲ. ಇಂದು ನನ್ನ ಮಗುವಿನ ಬಾಯಿಂದ ಇದೇ ಹೆಸರು ಕೇಳಿದಾಗ ನಾನು ನಿಮ್ಮ ಬಳಿಗೆ ಬಂದಿದ್ದೇನೆ." ಇದಾದ ನಂತರ ಉಸ್ಮಾನ್ ಸಾಹಿಬರು ಮುಅಲ್ಲಿಮ್ ಅಬೂಬಕರ್ ಸಾಹಿಬರೊಂದಿಗೆ ಸಂಪರ್ಕದಲ್ಲಿದ್ದರು. ಪ್ರಶ್ನೋತ್ತರಗಳು ನಡೆದವು, ಜಮಾಅತ್‌ನ ಪುಸ್ತಕಗಳನ್ನೂ ಅಧ್ಯಯನ ಮಾಡಿದರು. ತೃಪ್ತರಾದ ನಂತರ ಅವರು ಬೈಅತ್ ಮಾಡಿಕೊಂಡರು.

ಅಹ್ಮದಿಗಳ ಉತ್ತಮ ಮಾದರಿಯಿಂದ ತಬ್ಲೀಗ್

ಮಯೊಟ್ಟೆ ದ್ವೀಪದ ಮುಬಲ್ಲಿಗರು ಬರೆಯುತ್ತಾರೆ: ಒಬ್ಬ ಮಹಿಳೆ ಬಹಳ ಕಾಲದಿಂದ ತಬ್ಲೀಗ್‌ನಲ್ಲಿದ್ದರು. ಆದರೆ ಅಹ್ಮದಿಯ್ಯತ್ ಸ್ವೀಕರಿಸುವ ವಿಷಯದಲ್ಲಿ ಹಿಂಜರಿಯುತ್ತಿದ್ದರು. ನಮ್ಮ ಸದಸ್ಯರು ತಾಳ್ಮೆ ಮತ್ತು ಇಖ್ಲಾಸ್‌ನೊಂದಿಗೆ ತಮ್ಮ ಪ್ರಯತ್ನಗಳನ್ನು ಮುಂದುವರಿಸುತ್ತಿದ್ದರು. ನಾವು ಅವರನ್ನು ನಮ್ಮ ಒಂದು ಇಜ್ತಿಮಾದಲ್ಲಿ ಭಾಗವಹಿಸಲು ಆಹ್ವಾನಿಸಿದೆವು. ಮೊದಲು ಅವರು ಆಹ್ವಾನವನ್ನು ಸ್ವೀಕರಿಸಲಿಲ್ಲ. ಆದರೆ ನಂತರ ಇಜ್ತಿಮಾದಲ್ಲಿ ಭಾಗವಹಿಸಿದರು. ಅಲ್ಲಿ ಕಂಡುಬಂದ ಸಹೋದರತ್ವದ ವಾತಾವರಣ, ಜಮಾಅತ್‌ನ ಪ್ರೀತಿಪೂರ್ವಕ ಆತ್ಮೀಯತೆ ಮತ್ತು ವಕ್ತಾರರ ಭಾಷಣಗಳಿಂದ ಅವರು ಬಹಳ ಪ್ರಭಾವಿತರಾದರು. ಮುಂದಿನ ದಿನವೇ ಅವರು ನಮ್ಮನ್ನು ಸಂಪರ್ಕಿಸಿ ಬೈಅತ್ ಮಾಡಿಕೊಂಡು ಇಸ್ಲಾಮ್ ಅಹ್ಮದಿಯ್ಯತ್‌ಗೆ ಸೇರಿಕೊಂಡರು.

ವಿರೋಧಿಗಳೇ ಅಹ್ಮದಿಯ್ಯತ್ ಸ್ವೀಕರಿಸಿದ ಘಟನೆ

ಕಾಂಗೋ ಕಿನ್ಶಾಸಾದಿಂದ ಲೋಕಲ್ ಮಿಷನರಿ ಸಾಹಿಬರು ಹೇಳುತ್ತಾರೆ: ಒಬ್ಬ ಸುನ್ನಿ ಇಮಾಮರು ಅವರಿಗೆ ದೂರವಾಣಿ ಮಾಡಿದರು. ಅವರು ಹೇಳಿದರು: "ರೇಡಿಯೋದಲ್ಲಿ ನಿಮ್ಮ ಮಸೀಹ್ ಅವರ ಆಗಮನದ ಕುರಿತು ನಡೆಯುತ್ತಿದ್ದ ಚರ್ಚೆಯನ್ನು ನಾನು ಕೇಳಿದೆ. ಅದರಲ್ಲಿ ನೀವು ಮಿರ್ಜಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಅವರನ್ನು ಈ ಕಾಲದ ಮಸೀಹ್ ಎಂದು ಪ್ರಸ್ತುತಪಡಿಸಿದ್ದೀರಿ. ಈ ವಿಷಯವು ನನ್ನ ಹೃದಯದಲ್ಲಿ ಅಶಾಂತಿಯನ್ನು ಉಂಟುಮಾಡಿದೆ. ನಾನು ಈಗ ಅನಾರೋಗ್ಯದಲ್ಲಿದ್ದೇನೆ. ನೀವು ನನ್ನ ಬಳಿಗೆ ಬನ್ನಿರಿ. ಸಂಶಯ ಮತ್ತು ಅನುಮಾನಗಳ ಸ್ಥಿತಿಯಲ್ಲಿಯೇ ನಾನು ಮರಣ ಹೊಂದಬಾರದು." ಲೋಕಲ್ ಮಿಷನರಿ ಸಾಹಿಬರು ಅವರ ಬಳಿಗೆ ಹೋದರು. ಮಾತುಕತೆ ನಡೆಯಿತು. ಅವರು ಜಮಾಅತ್‌ನ ಸಂದೇಶವನ್ನು ಸ್ವೀಕರಿಸಿದರು ಮತ್ತು ಹೇಳಿದರು: "ಇಂದಿನಿಂದ ನಾನು ಈ ಸಂದೇಶವನ್ನು ನನ್ನ ಅನುಯಾಯಿಗಳಲ್ಲಿಯೂ ಹರಡುತ್ತೇನೆ." ಇನ್ನೂ ಅವರು ಹೇಳಿದರು: "ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಅವರ ಕುರಿತು ಈ ಹಿಂದೆ ನಾನು ಮಾಡುತ್ತಿದ್ದ ವಿರೋಧಕ್ಕಾಗಿ ನಾನು ಅಲ್ಲಾಹ್ ತಆಲಾ ಅವರಲ್ಲಿ ಕ್ಷಮೆ ಕೇಳುತ್ತೇನೆ."

ಅಹ್ಮದಿಗಳ ಉತ್ತಮ ವರ್ತನೆ

ಜಿಂಬಾಬ್ವೆಯ ಸದರ್ ಜಮಾಅತ್ ಬರೆಯುತ್ತಾರೆ: ಇಲ್ಲಿ ಒಬ್ಬ ಸ್ನೇಹಿತರು ಬೈಅತ್ ಮಾಡಿಕೊಂಡರು. ಅಹ್ಮದಿಯ್ಯತ್ ಸ್ವೀಕರಿಸುವ ಮೊದಲು ಅವರು ಮಾದಕ ವಸ್ತುಗಳನ್ನು ಬಳಸುತ್ತಿದ್ದರು. ಈ ಪರಿಸ್ಥಿತಿಯಲ್ಲಿಯೂ, ಅವರು ಮಾದಕ ವಸ್ತುಗಳನ್ನು ಸೇವಿಸುತ್ತಿದ್ದರೂ, ನಮ್ಮ ಇಬ್ಬರು ಸದಸ್ಯರು ಅವರೊಂದಿಗೆ ಸಂಪರ್ಕದಲ್ಲಿದ್ದರು. ಅವರನ್ನು ಜಮಾಅತ್‌ನ ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಿದ್ದರು ಮತ್ತು ಕೆಲವೊಮ್ಮೆ ಜುಮಾ ನಮಾಝ್‌ಗೂ ಕರೆದುಕೊಂಡು ಬರುತ್ತಿದ್ದರು. ಬೈಅತ್ ಮಾಡಿದ ನಂತರ ಅವರು ಹೇಳಿದರು: "ನನ್ನನ್ನು ಅಹ್ಮದಿಯನ್ನಾಗಿ ಮಾಡಿದ ವಿಷಯವೆಂದರೆ ಅಹ್ಮದಿಗಳ ಉತ್ತಮ ವರ್ತನೆ."

ಜುಮಾ ನಮಾಝ್‌ನ ಅದಾಯಗಿ

ಸೆಂಟ್ರಲ್ ಆಫ್ರಿಕಾದ ಒಬ್ಬ ನವಬೈಅತ್‌ದಾರರು ಹೇಳುತ್ತಾರೆ: "ನಾನು ನನ್ನ ಸ್ನೇಹಿತನೊಂದಿಗೆ ಜುಮಾ ನಮಾಝ್ ಸಲ್ಲಿಸಲು ಹೋಗುತ್ತಿದ್ದೆ. ದಾರಿಯಲ್ಲಿ ಒಂದು ಮಸೀದಿಯ ಬಳಿಯಿಂದ ಹಾದುಹೋಗುವಾಗ ನಾನು ನನ್ನ ಸ್ನೇಹಿತನಿಗೆ ಹೇಳಿದೆ: 'ಇದೇ ಹತ್ತಿರದ ಮಸೀದಿ. ನಾವು ದಾರಿಯಲ್ಲೇ ಇಲ್ಲಿ ಜುಮಾ ನಮಾಝ್ ಸಲ್ಲಿಸೋಣ.' ನನ್ನ ಸ್ನೇಹಿತನು ಹೇಳಿದನು: 'ಇಲ್ಲ, ಇದು ಅಹ್ಮದಿಗಳ ಮಸೀದಿ. ಅವರ ಇಸ್ಲಾಮ್ ಬೇರೆ ಮತ್ತು ನಮ್ಮದು ಬೇರೆ.' ಆದರೆ ಅವನ ಮಾತು ನನ್ನ ಹೃದಯದಲ್ಲಿ ಪ್ರಶ್ನೆಯನ್ನು ಹುಟ್ಟಿಸಿತು ಮತ್ತು ಕುತೂಹಲ ಉಂಟಾಯಿತು: 'ವಿಭಿನ್ನ ಇಸ್ಲಾಮ್ ಹೇಗೆ ಸಾಧ್ಯ?' ಆದ್ದರಿಂದ ಮುಂದಿನ ಶುಕ್ರವಾರ ನಾನು ಅಹ್ಮದಿಗಳ ಮಸೀದಿಯಲ್ಲಿ ಜುಮಾ ನಮಾಝ್ ಸಲ್ಲಿಸುವ ನಿರ್ಧಾರ ಮಾಡಿದೆ. ನಾನು ಮಸೀದಿಗೆ ಪ್ರವೇಶಿಸಿದಾಗ ಏನು ನೋಡಿದೆನೆಂದರೆ ಅದೇ ಅಝಾನ್, ಅದೇ ನಮಾಝ್ ಮತ್ತು ಅದಕ್ಕಿಂತ ಹೆಚ್ಚಾಗಿ ಇಲ್ಲಿ ಖುತ್ಬಾವೂ ಬಹಳ ಸರಳವಾದ ರೀತಿಯಲ್ಲಿ ನಡೆಯುತ್ತಿತ್ತು. ಆದ್ದರಿಂದ ನಾನು ಬೈಅತ್ ಮಾಡಿಕೊಂಡು ಜಮಾಅತೆ ಅಹ್ಮದೀಯ್ಯಾಗೆ ಸೇರಿಕೊಂಡೆ. ಅಲ್ಲಾಹ್ ತಆಲಾ ಅವರ ಫಝ್ಲ್‌ನಿಂದ ಈಗ ನಾನು ಅತ್ಯಂತ ನಿಯಮಿತವಾಗಿ ನಮಾಝ್ ಸಲ್ಲಿಸುವವನಾಗಿದ್ದೇನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಉಲ್ಲೇಖ

ಕೊನೆಯಲ್ಲಿ ಹುಝೂರ್ ಅನ್ವರ್ ಅಯ್ಯದಲಾಹು ತಆಲಾ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಒಂದು ಉಲ್ಲೇಖವನ್ನು ಪಠಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಫರ್ಮಾಯಿಸುತ್ತಾರೆ: "ಹಿಂದಿರುಗಿ ಬನ್ನಿರಿ ಮತ್ತು ಈ ಕೋಪದಿಂದ ಭಯಪಡಿರಿ. ನಿಶ್ಚಯವಾಗಿಯೂ ತಿಳಿದುಕೊಳ್ಳಿರಿ: ನಿಮ್ಮ ಕುಯುಕ್ತಿ ಮತ್ತು ಫಸಾದಿ ಕೃತ್ಯಗಳ ಮೇಲೆ ನೀವು ಮುದ್ರೆ ಹಾಕಿಬಿಟ್ಟಿದ್ದೀರಿ.

ಅಲ್ಲಾಹ್ ನಿಮ್ಮೊಂದಿಗಿದ್ದಿದ್ದರೆ, ಇಷ್ಟೊಂದು ವಂಚನೆಗಳ ಅವಶ್ಯಕತೆ ನಿಮಗೆ ಇರಲಿಲ್ಲ. ನಿಮ್ಮಲ್ಲಿ ಕೇವಲ ಒಬ್ಬ ವ್ಯಕ್ತಿಯ ದುಆ ಕೂಡ ನನ್ನನ್ನು ನಾಶಪಡಿಸಲು ಸಾಕಾಗುತ್ತಿತ್ತು. ಆದರೆ ನಿಮ್ಮಲ್ಲಿ ಯಾರೊಬ್ಬರ ದುಆವೂ ಆಕಾಶಕ್ಕೆ ಏರಲಿಲ್ಲ. ಬದಲಾಗಿ ನಿಮ್ಮ ದುಆಗಳ ಪರಿಣಾಮವೆಂದರೆ ದಿನದಿಂದ ದಿನಕ್ಕೆ ನಿಮ್ಮ ಅಂತ್ಯವಾಗುತ್ತಾ ಹೋಗುತ್ತಿದೆ. ನೀವು ನೋಡುತ್ತಿಲ್ಲವೇ? ನೀವು ಕಡಿಮೆಯಾಗುತ್ತಾ ಹೋಗುತ್ತಿದ್ದೀರಿ ಮತ್ತು ನಾವು ಹೆಚ್ಚುತ್ತಾ ಹೋಗುತ್ತಿದ್ದೇವೆ. ನಿಮ್ಮ ಹೆಜ್ಜೆ ಸತ್ಯದ ಮೇಲೆ ಇಟ್ಟಿದ್ದರೆ, ಈ ಸ್ಪರ್ಧೆಯಲ್ಲಿ ನಿಮ್ಮ ಸಿಸ್ಥಿತಿ ಹೀಗಿರುತ್ತಿತ್ತೇ?"

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳುತ್ತಾರೆ: "ಓ ಅಜ್ಞಾನಿ ಜನರೇ! ಈ ಸಿಲ್ಸಿಲಾ ಆಕಾಶದಿಂದ ಸ್ಥಾಪಿತವಾಗಿದೆ. ನೀವು ಅಲ್ಲಾಹ್‌ನೊಂದಿಗೆ ಹೋರಾಡಬೇಡಿರಿ. ನೀವು ಇದನ್ನು ನಾಶಪಡಿಸಲು ಸಾಧ್ಯವಿಲ್ಲ. ಇದರ ಸದಾ ವಿಜಯವೇ ಆಗಿದೆ. ನಿಮ್ಮ ಆತ್ಮಗಳ ಮೇಲೆ ನೀವು ಅನ್ಯಾಯ ಮಾಡಬೇಡಿರಿ. ಅಲ್ಲಾಹ್ ನಿಮ್ಮ ಸುಧಾರಣೆಗಾಗಿ ಸ್ಥಾಪಿಸಿದ ಈ ಸಿಲ್ಸಿಲಾವನ್ನು ಅಲ್ಪಮೌಲ್ಯವೆಂದು ಪರಿಗಣಿಸಬೇಡಿರಿ. ನಿಶ್ಚಯವಾಗಿಯೂ ತಿಳಿದುಕೊಳ್ಳಿರಿ: ಇದು ಮನುಷ್ಯನ ಕಾರ್ಯವಾಗಿದ್ದರೆ ಮತ್ತು ಇದರೊಂದಿಗೆ ಯಾವುದೇ ಗುಪ್ತ ಹಸ್ತವಿರದಿದ್ದರೆ, ಈ ಸಿಲ್ಸಿಲಾ ಬಹಳ ಹಿಂದೆಯೇ ನಾಶವಾಗುತ್ತಿತ್ತು. ಮತ್ತು ಇಂತಹ ಸುಳ್ಳುಗಾರನು ಅಷ್ಟು ಶೀಘ್ರವಾಗಿ ನಾಶವಾಗುತ್ತಿದ್ದನು; ಇಂದು ಅವನ ಎಲುಬುಗಳೂ ಪ ಕನಿಷ್ಠ ಇಷ್ಟಾದರೂ ಯೋಚಿಸಿರಿ: ಬಹುಶಃ ತಪ್ಪು ನಡೆದಿರಬಹುದು ಮತ್ತುತ್ತೆಯಾಗುತ್ತಿರಲಿಲ್ಲ. ಆದ್ದರಿಂದ ನಿಮ್ಮ ವಿರೋಧದ ಕಾರ್ಯವನ್ನು ಪುನರ್ವಿಮರ್ಶಿಸಿರಿ. ಕನಿಷ್ಠ ಇಷ್ಟಾದರೂ ಯೋಚಿಸಿರಿ: ಬಹುಶಃ ತಪ್ಪು ನಡೆದಿರಬಹುದು ಮತ್ತು ಬಹುಶಃ ಈ ಹೋರಾಟವು ನಿಮ್ಮದೇ ಅಲ್ಲಾಹ್‌ನೊಂದಿಗೆ ಆಗಿರಬಹುದು."

ಹುಝೂರ್ ಅನ್ವರ್ ಅಯ್ಯದಲಾಹು ತಆಲಾ ಅವರು ಹೇಳಿದರು: "ಸರ್ವಶಕ್ತನಾದ ಅಲ್ಲಾಹನು, ಜಗತ್ತು ಮತ್ತು ವಿಶೇಷವಾಗಿ ಮುಸ್ಲಿಂ ಜಗತ್ತು ಈ ಸಂದೇಶವನ್ನು ಅರ್ಥಮಾಡಿಕೊಳ್ಳಲು ಸೌಭಾಗ್ಯ ನೀಡಲಿ ಮತ್ತು ಈ ಕಾಲದಲ್ಲಿ ಮುಸ್ಲಿಮರನ್ನು ಏಕತೆಯ ಸರಪಣಿಯಲ್ಲಿ ಪೋಣಿಸಲು, ರಸೂಲೆ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅವರ ನಿಜವಾದ ಗುಲಾಮಗಿರಿಗೆ ನಿರ್ವಹಿಸುವ ತ ತರಲು ಅಲ್ಲಾಹ್ ತಆಲಾ ಕಳುಹಿಸಿರುವ ಆ ಕೈಯ ಮೇಲೆ ಎಲ್ಲರೂ ಒಗ್ಗೂಡಲಿ. ಅಲ್ಲಾಹನು ನಮಗೂ ನಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವ ತೌಫೀಕ್ ನೀಡಲಿ."

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ಓದುಗರೇ! ದಯವಿಟ್ಟು ಗಮನಹರಿಸಿ
ಬದರ್ ವಾರಪತ್ರಿಕೆಯ ಸಹಾಯಕ್ಕಾಗಿ ಮನವಿ

ಬದರ್ ವಾರಪತ್ರಿಕೆಗೆ ಈ ವಿಶಿಷ್ಟ ಗೌರವ ಲಭಿಸಿದೆ: ಇದು ಯುಗದ ದೈವಿಕವಾಗಿ ನಿಯುಕ್ತರಾದವರು, ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರ ಸತ್ಯಸೇವಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಆಶ್ರಯ ಮತ್ತು ಪೋಷಣೆಯಲ್ಲಿ ಬೆಳೆದು ಬಂದ ಪತ್ರಿಕೆಯಾಗಿದೆ. ಆರಂಭದಿಂದ ಇಂದಿನವರೆಗೂ, ಮೊದಲು ನಬುವ್ವತ್ (ಪ್ರವಾದಿತ್ವದ) ಮತ್ತು ನಂತರ ಖಿಲಾಫತ್ ಅಲಾ ಮಿನ್‌ಹಾಜೆ ನಬುವ್ವತ್‌ನ (ಪ್ರವಾದಿತ್ವದ ಮಾರ್ಗದರ್ಶನದಂತೆ ನಡೆಯುವ ಖಲೀಫಾತ್‌ನ) ಪವಿತ್ರ ನೆರಳಿನಲ್ಲಿ ಈ ಪತ್ರಿಕೆಯು ತನ್ನ ಧಾರ್ಮಿಕ ಪ್ರಚಾರ ಮತ್ತು ನೈತಿಕ–ಆಧ್ಯಾತ್ಮಿಕ ತರಬೇತಿಯ ಕರ್ತವ್ಯಗಳನ್ನು ನಿರಂತರವಾಗಿ ನಿರ್ವಹಿಸುತ್ತಾ ಬಂದಿದೆ. ಈ ಪತ್ರಿಕೆಯ ಮೂಲಕ ಅನೇಕ ಸತ್ಯಾನ್ವೇಷಕ ಮತ್ತು ಸತ್ಕುಲದ ಆತ್ಮಗಳು ಅಹ್ಮದಿಯ್ಯತ್ ಅನ್ನು ಸ್ವೀಕರಿಸಿ ಅದರ ಅನುಯಾಯಿಗಳಾದವು. ಈ ಪತ್ರಿಕೆಯ ಮೂಲಕ ಅಹ್ಮದಿಯ್ಯತ್‌ನ ಖಲೀಫರ ಮಾರ್ಗದರ್ಶನಗಳು ಮತ್ತು ಉಪದೇಶಗಳ ಬೆಳಕಿನಲ್ಲಿ ಅಹ್ಮದಿ ಕುಟುಂಬಗಳ ಧಾರ್ಮಿಕ ಹಾಗೂ ನೈತಿಕ ತರಬೇತಿ ನಡೆಯುತ್ತಿದೆ. ಮುಂದೆಯೂ ಸಹ, ದೇವರ ಇಚ್ಛೆಯಿದ್ದರೆ, ಈ ಸೇವೆ ನಿರಂತರವಾಗಿ ಮುಂದುವರಿಯಲಿದೆ.

ಪತ್ರಿಕೆಯ ತಯಾರಿ, ಮುದ್ರಣ, ಪ್ರಕಟಣೆ, ಪ್ಯಾಕಿಂಗ್ ಮತ್ತು ಓದುಗರಿಗೆ ತಲುಪಿಸುವ ಕಾರ್ಯಗಳಲ್ಲಿ ಬಹಳಷ್ಟು ವೆಚ್ಚವಾಗುತ್ತದೆ. ಕೇವಲ ಸಾಮಾನ್ಯ ಚಂದಾದಾರಿಕೆ ಶುಲ್ಕದಿಂದ ಈ ಎಲ್ಲಾ ವೆಚ್ಚಗಳನ್ನು ಪೂರೈಸುವುದು ಸಾಧ್ಯವಿಲ್ಲ. ಆದ್ದರಿಂದ, ಈ ದೈವಿಕವಾಗಿ ನಿಯುಕ್ತರಾದವರ ಪತ್ರಿಕೆಯ ವೆಚ್ಚಗಳನ್ನು ಭರಿಸಲು ಸಹಾಯ ಮಾಡುವ ವಿಶೇಷ ಸಹಾಯಕರ ಅಗತ್ಯ ಅತ್ಯಂತ ತೀವ್ರವಾಗಿದೆ. ಈ ಪತ್ರಿಕೆಗೆ ಸಹಾಯ ಮಾಡುವವರನ್ನು ಪರಮಾತ್ಮನು ಎಂದಿಗೂ ನಿರಾಶೆಗೊಳಿಸುವುದಿಲ್ಲ. ಏಕೆಂದರೆ ಪರಮಾತ್ಮನ ವಾಗ್ದಾನವೇನೆಂದರೆ: **ಇನ್ನಿ ಮುಈನುನ್ ಮನ್ ಇರಾದ ಇಆನತುಕ**– "ನಿನಗೆ ಸಹಾಯ ಮಾಡುವವನಿಗೆ ನಾನು ಸಹಾಯ ಮಾಡುತ್ತೇನೆ." ಈ ಸಹಾಯಕರ ಎಲ್ಲಾ ವ್ಯವಹಾರಗಳ ರಕ್ಷಕನಾಗಿ ಪರಮಾತ್ಮನೇ ಸ್ವತಃ ಇರುವನು. ತನ್ನ ವಾಗ್ದಾನದಂತೆ, ಅವರ ವ್ಯಾಪಾರ, ಉದ್ಯೋಗ, ತೋಟ, ಬೆಳೆ ಮತ್ತು ಸಂಪತ್ತಿನಲ್ಲಿ ಅನೇಕ ಪಟ್ಟು ಹೆಚ್ಚಳ ಮತ್ತು ಸಮೃದ್ಧಿಯನ್ನು ಅನುಗ್ರಹಿಸುವನು, ಇನ್‌ಶಾಅಲ್ಲಾಹ್.

ಆದ್ದರಿಂದ, ಈ ಬರ್ಕತಪೂರ್ಣ ಸೇವೆಯಲ್ಲಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಹಕರಿಸಿ, ಈ ಪತ್ರಿಕೆಯ ಪ್ರಕಟಣೆ ಮತ್ತು ಪ್ರಸಾರವನ್ನು ಮುಂದುವರಿಸಲು ನೆರವಾಗುವಂತೆ ಎಲ್ಲಾ ಸಹೃದಯ ಓದುಗರಲ್ಲಿ ಹೃತ್ಪೂರ್ವಕ ಮನವಿ ಮಾಡಲಾಗಿದೆ.

ಯಾವುದೇ ರೀತಿಯ ಮಾಹಿತಿ ಅಥವಾ ಮಾರ್ಗದರ್ಶನಕ್ಕಾಗಿ ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರನ್ನು ಸಂಪರ್ಕಿಸಿರಿ.
ಸಂಪರ್ಕ ಸಂಖ್ಯೆ: 9815639670



ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

ಸುರಾಖ ಬೆನ್ನಟ್ಟುವಿಕೆ

ಮಕ್ಕದ ಜನರು ಹಝ್ರತ್ ಪೈಗಂಬರರನ್ನು(ಸ) ಕಂಡು ಹಿಡಿಯಲು ವಿಫಲರಾದಾಗ ಅವರು ಹೀಗೆ ಪ್ರಕಟಿಸಿದರು:

"ಯಾರು ಮುಹಮ್ಮದ್‌ನನ್ನು ಅಥವಾ ಅಬೂಬಕರ್‌ನನ್ನು ಜೀವಸಹಿತ ಅಥವಾ ಜೀವರಹಿತವಾಗಿ ನಮ್ಮ ವಶಕ್ಕೆ ತಂದೊಪ್ಪಿಸುವರೋ ಅವರಿಗೆ ಒಂದು ನೂರು ಹೆಣ್ಣು ಒಂಟೆಗಳನ್ನು ಬಹುಮಾನವಾಗಿ ಕೊಡುವೆವು."

ಈ ಪ್ರಕಟಣೆಯನ್ನು ಮಕ್ಕ ನಗರದ ಸುತ್ತು ಮುತ್ತಲಿನ ಗೋತ್ರವರ್ಗದವರಿಗೆ ಸಹ ತಲಪಿಸಲಾಗಿತ್ತು. ಈ ಪ್ರಕಟಣೆಯನ್ನು ಆಲಿಸಿದ ಸುರಾಖ ಬಿನ್ ಮಾಲಿಕ್ ಎಂಬ ಒಬ್ಬ ಗ್ರಾಮೀಣ ಪ್ರದೇಶದ ಮುಂದಾಳು ಬಹುಮಾನ ಗಳಿಸುವ ಆಶೆಯಿಂದ ಹಝ್ರತ್ ಪೈಗಂಬರರನ್ನು(ಸ) ಹುಡುಕಲು ತೊಡಗಿದನು. ಆತನು ಹುಡುಕುತ್ತಾ ಮದೀನಕ್ಕೆ ಹೋಗುವ ಮಾರ್ಗದಲ್ಲಿ ಮುಂದೆ ಸಾಗಿದಾಗ ಎರಡು ಒಂಟೆಗಳನ್ನೂ ಅವುಗಳ ಸವಾರರನ್ನೂ ಕಂಡು ಅದು ಪೈಗಂಬರ್ ಮತ್ತು ಸಹಚರರು ಆಗಿರಬಹುದೆಂದು ಮನವರಿಕೆ ಮಾಡಿ ತನ್ನ ಕುದುರೆಯನ್ನು ಆ ಒಂಟೆಗಳನ್ನು ತಲಪಲು ಓಡಿಸಿದಾಗ ಕುದುರೆ ಮಾರ್ಗದಲ್ಲಿ ಮುಗ್ಗರಿಸಿತು. ಸುರಾಖ ಕುದುರೆಯಿಂದ ಬಿದ್ದುಬಿಟ್ಟ. ಸುರಾಖ ಮುಸ್ಲಿಮ್ ಆದ ನಂತರ ಈ ಸಂಭವವನ್ನು ಹೀಗೆ ವಿವರಿಸಿದರು:

ನಾನು ಕುದುರೆಯಿಂದ ಬಿದ್ದಾಗ ಅರಬ್ ಸಂಪ್ರದಾಯದಂತೆ ನನ್ನ ಬಾಣಗಳ ಮೂಲಕ ಅದೃಷ್ಟ ಪರೀಕ್ಷೆ ನಡೆಸಿದೆನು. ನನ್ನ ಅದೃಷ್ಟವು ಕೆಟ್ಟದಾಗಿದೆ ಎಂದು ಆಗ ನನಗೆ ತಿಳಿಯಿತು. ಆದರೆ ಬಹುಮಾನದ ಆಸೆಯಿಂದ ಪುನಃ ಕುದುರೆಯನ್ನೇರಿ ಅದನ್ನು ಮುಂದಕ್ಕೆ ಓಡಿಸಿದೆನು. ಹಝ್ರತ್ ಪೈಗಂಬರ್(ಸ) ಒಂಟೆಯ ಮೇಲೆ ಬಹಳ ಗಂಭೀರವಾಗಿ ಕುಳಿತು ಪ್ರಯಾಣಿಸುತ್ತಾ ಇದ್ದರು. ಅವರು ಹಿಂದಿರುಗಿ ನನ್ನನ್ನು ನೋಡಲಿಲ್ಲ. ಆದರೆ ಹಝ್ರತ್ ಅಬೂಬಕರ್(ರ) (ಹಝ್ರತ್ ಪೈಗಂಬರರಿಗೆ(ಸ) ಏನಾದರೂ ಆಪತ್ತು ಉಂಟಾಗುವುದೋ ಎಂಬ ಭಯದಿಂದ) ನನ್ನ ಕಡೆಗೆ ಮುಖ ತಿರುಗಿಸಿ ಪದೇ ಪದೇ ನೋಡುತ್ತಿದ್ದರು. ನಾನು ಎರಡನೇ ಸಲ ಅವರ ಸಮೀಪಕ್ಕೆ ತಲಪಿದಾಗ ನನ್ನ ಕುದುರೆ ಪುನಃ ಮುಗ್ಗರಿಸಿತು. ನಾನು ಕುದುರೆಯಿಂದ ಬಿದ್ದು ಬಿಟ್ಟೆನು.

ಆಗ ನಾನು ಪುನಃ ಬಾಣಗಳಿಂದ ಅದೃಷ್ಟ ಪರೀಕ್ಷೆ ನಡೆಸಿದೆನು. ನನ್ನ ಅದೃಷ್ಟ ಕೆಟ್ಟದಾಗಿದೆ ಎಂದು ನನಗೆ ತಿಳಿಯಿತು. ನನ್ನ ಕುದುರೆಯ ಕಾಲುಗಳು ಮರಳಿನಲ್ಲಿ ಎಷ್ಟು ಹೂತು ಹೋಗಿತ್ತೆಂದರೆ ಅವುಗಳನ್ನು ಹೊರಕ್ಕೆಳೆಯಲು ಕಷ್ಟವಾಗಿತ್ತು. ಆಗ, ಈ ಜನರು ಅಲ್ಲಾಹನ ಸಂರಕ್ಷಣೆಯಲ್ಲಿ ಇದ್ದಾರೆ ಎಂದು ನನಗೆ ತಿಳಿಯಿತು. ನಾನು ಅವರನ್ನು ಕರೆದು, "ನಿಲ್ಲಿರಿ. ನನ್ನ ಮಾತನ್ನು ಆಲಿಸಿರಿ" ಎಂದು ಹೇಳಿದೆ. ಅವರು ನನ್ನ ಸಮೀಪದಲ್ಲಿದ್ದಾಗ ನಾನು ಹೇಳಿದೆ: "ನಾನು ಇಂತಹ ಉದ್ದೇಶದಿಂದ ಬಂದಿದ್ದೆನು. ಆದರೆ ಈಗ ನಾನು ನನ್ನ ಉದ್ದೇಶವನ್ನು ಬದಲಾಯಿಸಿರುವೆನು. ನಾನು ಮರಳಿ ಹೋಗುತ್ತಿದ್ದೇನೆ. ಏಕೆಂದರೆ ಅಲ್ಲಾಹನು ನಿಮ್ಮ ಜೊತೆಗಿದ್ದಾನೆ ಎಂದು ನನಗೆ ದೃಢವಾಗಿ ತಿಳಿಯಿತು."

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: "ಒಳ್ಳೆಯದು. ಮರಳಿ ಹೋಗು. ಆದರೆ ನಮ್ಮ ಬಗ್ಗೆ ಯಾರಿಗೂ ಸಮಾಚಾರ ನೀಡಬೇಡ."

ಆಗ ನನಗೆ ಒಂದು ಯೋಚನೆ ಹೀಗೆ ಹೊಳೆಯಿತು: ಈ ವ್ಯಕ್ತಿ ಸತ್ಯವಂತನೆಂದು ನನಗೆ ಭಾಸವಾಗುತ್ತಿದೆ. ಆದುದರಿಂದ ಈ ವ್ಯಕ್ತಿ ನಿಶ್ಚಯವಾಗಿಯೂ ಒಂದು ದಿನ ಜಯಶಾಲಿಯಾಗುವರು.

ಹೀಗೆ ಯೋಚಿಸಿದ ಕೂಡಲೇ ನಾನು ಹೇಳಿದೆ: "ನೀವು ಜಯಗಳಿಸಿದರೆ ನನಗೆ ಅಭಯ ಪ್ರದಾನಮಾಡುವುದಾಗಿ ಒಪ್ಪಿಗೆ ಪತ್ರ ಬರೆದು ಕೊಡಿರಿ."

ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರ ಸೇವಕನಾದ ಆಮಿರ್ ಬಿನ್ ಫಹೀರ್ ಮೂಲಕ ನನಗೆ ಅಭಯ ಪ್ರದಾನ ಮಾಡುವ ಪತ್ರ ಬರೆಯಿಸಿ ಕೊಟ್ಟರು.[28] ನಾನು ಅಲ್ಲಿಂದ ಹಿಂದಿರುಗಲು ಸನ್ನದ್ಧನಾದಾಗ ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ಮುಂದಿನ ಸ್ಥಿತಿಯ ಬಗ್ಗೆ ಅದೃಶ್ಯ ಜ್ಞಾನ ನೀಡಿದನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಸುರಾಖ, ನಿನ್ನ ಕೈಗಳು ಕಿಸ್ರಾದ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?"

ನಾನು ಗಾಬರಿಗೊಂಡು ಕೇಳಿದೆನು: "ನೀವು ಉದ್ದೇಶಿಸಿದುದು ಕಿಸ್ರಾ ಬಿನ್ ಹುರ್‌ಮಿಝ್ ಎಂಬ ಇರಾನಿನ ಚಕ್ರವರ್ತಿಯನ್ನೋ?" ಆಗ ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು.[29]

ಹಝ್ರತ್ ಪೈಗಂಬರ್(ಸ) ನುಡಿದ ಈ ಭವಿಷ್ಯ ವಾಣಿ 16–17 ವರ್ಷಗಳು ದಾಟಿಹೋದ ನಂತರ ಅಕ್ಷರಶಃ ಈಡೇರಿತು. ಸುರಾಖ ಮುಸ್ಲಿಮ್ ಆಗಿ ಮದೀನಕ್ಕೆ ಬಂದಿದ್ದರು. ಹಝ್ರತ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಹಝ್ರತ್ ಅಬೂಬಕರ್(ರ) ಖಲೀಫರಾದರು. ಅವರು ನಿಧನ ಹೊಂದಿದಾಗ ಹಝ್ರತ್ ಉಮರ್(ರ) ಖಲೀಫರಾದರು. ಇಸ್ಲಾಮಿನ ಅಭಿವೃದ್ಧಿ ಹೊಂದುತ್ತಿರುವ ವೈಭವವನ್ನು ನೋಡಿ ಇರಾನಿಯರು ಮುಸ್ಲಿಮರ ಮೇಲೆ ಆಕ್ರಮಣ ಮಾಡಲು ಪ್ರಾರಂಭಿಸಿದರು.

ಅವರು ಇಸ್ಲಾಮನ್ನು ಧ್ವಂಸಗೊಳಿಸಲು ಶಕ್ತರಾಗಲಿಲ್ಲ. ಅವರು ಇಸ್ಲಾಮನ್ನು ವಿರೋಧಿಸಿದುದರಿಂದ ತಾವೇ ಧ್ವಂಸಗೊಳಿಸಲ್ಪಟ್ಟರು. ಕಿಸ್ರಾ ರಾಜನ ರಾಜಧಾನಿ ಮುಸ್ಲಿಮರ ಕುದುರೆಗಳ ಗೊರಸುಗಳಿಂದ ತುಳಿಯಲ್ಪಟ್ಟಿತು. ಇರಾನಿನ ಖಜಾನೆಗಳು ಮುಸ್ಲಿಮರ ಸ್ವಾಧೀನಕ್ಕೆ ಬಂದುವು. ಮುಸ್ಲಿಮರ ಸೈನ್ಯದ ಅಧೀನಕ್ಕೆ ಬಂದ ಇರಾನ್ ಸರಕಾರದ ಸಂಪತ್ತಿನಲ್ಲಿ ಕಿಸ್ರಾ ರಾಜನು ಸಿಂಹಾಸನಾರೂಢನಾಗುವಾಗ ಇರಾನ್ ಸಂಪ್ರದಾಯದಂತೆ ಧರಿಸುತ್ತಿದ್ದ ಬಂಗಾರದ ಕಂಕಣಗಳು ಸಹ ಇದ್ದುವು.

ಹಝ್ರತ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋಗುತ್ತಿದ್ದಾಗ ನಡೆದ ಸಂಭವವನ್ನು ಸುರಾಖ ಮುಸ್ಲಿಮ್ ಆದ ನಂತರ ಬಹಳ ಅಭಿಮಾನದಿಂದ ವಿವರಿಸುತ್ತಾ ಇದ್ದರು. ಹಝ್ರತ್ ಪೈಗಂಬರ್(ಸ) ಸುರಾಖರಿಗೆ, "ಸುರಾಖ, ನಿನ್ನ ಕೈಗಳು ಇರಾನಿನ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?" ಎಂದು ಹೇಳಿದ್ದ ಮಾತು ಮುಸ್ಲಿಮರಿಗೆ ತಿಳಿದಿತ್ತು.

ಹಝ್ರತ್ ಉಮರ್‌ರ(ರ) ಮುಂದೆ ಯುದ್ಧದಲ್ಲಿ ಗಳಿಸಿದ ಇರಾನಿನ ಸಂಪತ್ತನ್ನು ತಂದಿರಿಸಿದಾಗ ಅದರಲ್ಲಿ ಕಿಸ್ರಾ ಚಕ್ರವರ್ತಿಯ ಬಂಗಾರದ ಕಂಕಣಗಳು ಸಹ ಇದ್ದುವು. ಆಗ ಹಿಂದಿನ ಕಾಲದ ಎಲ್ಲಾ ಸಂಭವಗಳು ಅವರ ಕಣ್ಣುಗಳ ಮುಂದೆ ಹಾದು ಹೋದುವು. ಹಝ್ರತ್ ಪೈಗಂಬರ್(ಸ) ಶಕ್ತಿಸಾಮರ್ಥ್ಯಗಳು ತೀರಾ ಇಲ್ಲದೆ ಇದ್ದಾಗ ಸ್ವದೇಶವನ್ನು ಬಿಟ್ಟು ಮದೀನಕ್ಕೆ ಹೊರಡಬೇಕಾಯಿತು. ಅವರನ್ನು ಜೀವಂತವಾಗಿ ಅಥವಾ ಮೃತರಾಗಿರುವ ಸ್ಥಿತಿಯಲ್ಲಿ ಹಿಡಿಗೂಡಿ ಮಕ್ಕದ ಜನರಿಗೊಪ್ಪಿಸಿದರೆ ಸಿಗಬಹುದಾದ ನೂರು ಒಂಟೆಗಳ ಬಹುಮಾನದ ಆಸೆಯಿಂದ ಸುರಾಖ ಮತ್ತು ಇತರರು ಕುದುರೆಗಳನ್ನೇರಿಕೊಂಡು ಹಝ್ರತ್ ಪೈಗಂಬರ್‌ರನ್ನು(ಸ) ಬೆನ್ನಟ್ಟಿದ್ದರು. ಅಂತಹ ದುರ್ದೆಸೆಯಲ್ಲಿರುವಾಗ ಹಝ್ರತ್ ಪೈಗಂಬರ್(ಸ) "ಸುರಾಖ, ನಿನ್ನ ಕೈಗಳು ಇರಾನಿನ ಚಕ್ರವರ್ತಿಯ ಕಂಕಣಗಳನ್ನು ಧರಿಸಿರುವಾಗ ನಿನ್ನ ಸ್ಥಿತಿ ಹೇಗಾಗುವುದು?" ಎಂದು ಹೇಳಿದ್ದರು. ಅದೆಂತಹ ಮಹತ್ತಾದ ಭವಿಷ್ಯವಾಣಿ ಆಗಿತ್ತು! ಎಂತಹ ಪರಿಶುದ್ಧ ಅಗೋಚರ ವಾರ್ತೆ? ಹಝ್ರತ್ ಉಮರ್(ರ) ಕಿಸ್ರಾ ಚಕ್ರವರ್ತಿಯ ಕಂಕಣಗಳನ್ನು ನೋಡಿದಾಗ ಅಲ್ಲಾಹನ ಶಕ್ತಿ ಸಾಮರ್ಥ್ಯಗಳು ಅವರ ಕಣ್ಣ ಮುಂದೆ ಸ್ಪಷ್ಟವಾದುವು. ಅವರು, ಸುರಾಖರನ್ನು ಕರೆಯಲು ಹೇಳಿದರು. ಸುರಾಖರನ್ನು ಕರೆಯಿಸಲಾಯಿತು. ಸುರಾಖ ಬಂದಾಗ ಹಝ್ರತ್ ಉಮರ್(ರ), "ಕಿಸ್ರಾನ ಕಂಕಣಗಳನ್ನು ನಿಮ್ಮ ಕೈಗಳಲ್ಲಿ ಧರಿಸಿರಿ" ಎಂದು ಆಜ್ಞಾಪಿಸಿದರು. ಆಗ ಸುರಾಖ ಹೇಳಿದರು: "ಓ ಖಲೀಫರೇ, ಬಂಗಾರ ಧರಿಸುವುದು ಮುಸ್ಲಿಮ್ ಪುರುಷರಿಗೆ ನಿಷಿದ್ಧವಾಗಿದೆ." ಹಝ್ರತ್ ಉಮರ್ ಹೇಳಿದರು: "ನೀವು ಹೇಳಿದುದು ಸರಿ. ಆದರೆ ಇಂತಹ ಸಂದರ್ಭಗಳಲ್ಲಿ ಅದು ನಿಷಿದ್ಧವಲ್ಲ. ನೀವು ಕೈಯಲ್ಲಿ ಕಿಸ್ರಾ ಚಕ್ರವರ್ತಿಯ ಬಂಗಾರದ ಕಂಕಣ ಧರಿಸಿದುದನ್ನು ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ತೋರಿಸಿದ್ದನು. ನೀವು ಈ ಕಂಕಣಗಳನ್ನು ಧರಿಸಬೇಕು. ಹಾಗೆ ಮಾಡದಿದ್ದರೆ ನಾನು ನಿಮಗೆ ಶಿಕ್ಷೆ ನೀಡುವೆನು."

ಸುರಾಖ ಆಕ್ಷೇಪಿಸಿದುದು ಧಾರ್ಮಿಕ ನಿಯಮಗಳಿಗೆ ಅನುಸಾರವಾಗಿತ್ತು. ಆದರೆ ಅವರು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಯು ಈಡೇರುವುದನ್ನು ನೋಡುವ ಆಶೆಯನ್ನು ಸಹ ಹೊಂದಿದ್ದರು. ಸುರಾಖ ಆ ಕಂಕಣಗಳನ್ನು ತಮ್ಮ ಕೈಗಳಲ್ಲಿ ಧರಿಸಿದರು. ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿ ಈಡೇರಿದುದನ್ನು ಮುಸ್ಲಿಮರು ಕಣ್ಣಾರೆ ಕಂಡರು.

(ಮುಂದುವರಿಯುವುದು)

ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ

"ತನ್ನಿಗಾಗಿ ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡುವವರೆಗೆ ಯಾರೂ ಪೂರ್ಣ ವಿಶ್ವಾಸಿಯಾಗುವುದಿಲ್ಲ"
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
M.B. Nasir Ahmed Saheb & Family, Bengaluru, Karnataka

"ಸೌಮ್ಯತೆ ಯಾವ ವಿಷಯದಲ್ಲಿದ್ದರೂ ಅದನ್ನು ಸುಂದರಗೊಳಿಸುತ್ತದೆ."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
Late S.R Abdur Rauf Saheb & Family, Shimoga, Karnataka

ಹಝ್ರತ್ ಮಸೀಹ್ ಮೌಊದ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(51) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ನನ್ನೊಂದಿಗೆ ಹಝ್ರತ್ ವಾಲಿದಾ ಸಾಹಿಬಾ ಅವರು ಹೇಳಿದ್ದು: "ನಿಮ್ಮ ಅಜ್ಜಿ ಹೋಶಿಯಾರ್‌ಪುರ ಜಿಲ್ಲೆಯ ಐಮಾ ಗ್ರಾಮದ ನಿವಾಸಿಯಾಗಿದ್ದರು." ಹಝ್ರತ್ ಸಾಹಿಬ್ ಅವರು ಹೇಳುತ್ತಿದ್ದರು: "ನಾವು ಬಾಲ್ಯದಲ್ಲಿ ನಮ್ಮ ತಾಯಿಯೊಂದಿಗೆ ಅನೇಕ ಬಾರಿ ಐಮಾಗೆ ಹೋಗಿದ್ದೇವೆ." ವಾಲಿದಾ ಸಾಹಿಬಾ ಅವರು ಹೇಳಿದರು: "ಅಲ್ಲಿ ಹಝ್ರತ್ ಸಾಹಿಬ್ ಅವರು ಬಾಲ್ಯದಲ್ಲಿ ಗುಬ್ಬಚ್ಚಿಗಳನ್ನು ಹಿಡಿಯುತ್ತಿದ್ದರು. ಚಾಕು ಸಿಗದಿದ್ದಾಗ ಅವುಗಳನ್ನು ಸರಕಂಡೆಯ ತುಂಡಿನಿಂದ ಝಬಹ್ ಮಾಡುತ್ತಿದ್ದರು." ವಾಲಿದಾ ಸಾಹಿಬಾ ಅವರು ಹೇಳಿದರು: "ಒಮ್ಮೆ ಐಮಾದಿಂದ ಕೆಲವು ವೃದ್ಧೆಯರು ಬಂದರು. ಅವರು ಮಾತನಾಡುತ್ತಾ, 'ಸಿಂಧಿ ನಮ್ಮ ಗ್ರಾಮದಲ್ಲಿ ಗುಬ್ಬಚ್ಚಿಗಳನ್ನು ಹಿಡಿಯುತ್ತಿದ್ದನು' ಎಂದು ಹೇಳಿದರು. 'ಸಿಂಧಿ' ಎಂದರೆ ಯಾರನ್ನು ಉದ್ದೇಶಿಸಿದ್ದಾರೆಂಬುದು ನನಗೆ ಅರ್ಥವಾಗಲಿಲ್ಲ. ಕೊನೆಗೆ ಅವರು ಹಝ್ರತ್ ಸಾಹಿಬ್ ಅವರನ್ನು ಉದ್ದೇಶಿಸಿದ್ದಾರೆ ಎಂಬುದು ತಿಳಿಯಿತು. ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: "ಯಾವುದಾದರೂ ಮನ್ನತ್ (ನೇರ್ಪ) ಮಾಡುವ ಸಂದರ್ಭದಲ್ಲಿ, ವಿಶೇಷವಾಗಿ ಕೆಲವು ಮಹಿಳೆಯರು, ತಮ್ಮ ಮಗುವಿಗೆ 'ಸಿಂಧಿ' ಎಂಬ ಸ್ಥಳೀಯ ಹೆಸರನ್ನು ಇಡುವುದು ಒಂದು ಪದ್ಧತಿಯಾಗಿತ್ತು. ಇದೇ ಕಾರಣದಿಂದ ನಿಮ್ಮ ತಾಯಿ ಮತ್ತು ಇತರ ಕೆಲವು ಮಹಿಳೆಯರು ಬಾಲ್ಯದಲ್ಲಿ ಕೆಲವೊಮ್ಮೆ ನಿಮ್ಮನ್ನೂ ಈ ಹೆಸರಿನಿಂದ ಕರೆಯುತ್ತಿದ್ದರು." ನಾನು ಹೇಳುವುದೇನೆಂದರೆ: 'ಸಿಂಧಿ' ಎಂಬ ಪದವು ಬಹುಶಃ 'ದಸವಂಧಿ' ಅಥವಾ 'ದಸಬಂಧಿ' ಎಂಬ ಪದದಿಂದ ರೂಪಾಂತರಗೊಂಡಿರಬಹುದು. ಮನ್ನತ್‌ನ ಪರಿಣಾಮವಾಗಿ ಹತ್ತು ಬಾರಿ ಯಾವುದಾದರೂ ವಸ್ತುವನ್ನು ಮಗುವಿಗೆ ಕಟ್ಟುವ ಸಂದರ್ಭದಲ್ಲಿ ಅಂತಹ ಮಗುವನ್ನು ಈ ಹೆಸರಿನಿಂದ ಕರೆಯಲಾಗುತ್ತಿತ್ತು. ಕೆಲವೊಮ್ಮೆ ಯಾವುದೇ ಮನ್ನತ್ ಇರುವುದಿಲ್ಲ; ಬದಲಾಗಿ ಮಹಿಳೆಯರು ಪ್ರೀತಿಯಿಂದ ತಮ್ಮ ಮಗುವಿನ ಮೇಲೆ ಈ ವಿಧಿಯನ್ನು ನೆರವೇರಿಸಿ, ನಂತರ ಅದನ್ನು 'ಸಿಂಧಿ' ಎಂದು ಕರೆಯಲು ಪ್ರಾರಂಭಿಸುತ್ತಿದ್ದರು.

ಈ ವರದಿಯಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಬಾಲ್ಯದಲ್ಲಿ ಕೆಲವೊಮ್ಮೆ ಬೇಟೆಯಾಡಿದ ಗುಬ್ಬಚ್ಚಿಯನ್ನು ಸರಕಂಡೆಯಿಂದ ಝಬಹ್ ಮಾಡುತ್ತಿದ್ದರು ಎಂಬ ಉಲ್ಲೇಖ ಬರುತ್ತದೆ. ಇದರ ಕುರಿತು ಗಮನಿಸಬೇಕಾದ ಸಂಗತಿಯೆಂದರೆ ಇಲ್ಲಿ 'ಸರಕಂಡೆ' ಎಂದರೆ ಸಂಪೂರ್ಣ ಉದ್ದವಾದ ಸರಕಂಡೆಯ ಕಡ್ಡಿಯಲ್ಲ; ಅದರ ಕತ್ತರಿಸಿದ ಒಂದು ತುಂಡು ಎಂದರ್ಥ. ಕೆಲವೊಮ್ಮೆ ಆ ತುಂಡು ಎಷ್ಟು ಹರಿತವಾಗಿರುತ್ತದೆಯೆಂದರೆ ಸಾಮಾನ್ಯ ಚಾಕುವಿನ ಹರಿತವೂ ಅದಕ್ಕೆ ಸರಿಸಾಟಿಯಾಗುವುದಿಲ್ಲ. ಸ್ವತಃ ನಾನು ಲೇಖಕನಿಗೆ ಬಾಲ್ಯದಲ್ಲಿ ಹಲವಾರು ಬಾರಿ ಸರಕಂಡೆಯಿಂದ ತನ್ನ ಕೈಗಳಿಗೆ ಗಾಯ ಮಾಡಿಕೊಂಡ ಅನುಭವವಾಗಿದೆ. ಅಲ್ಲದೆ ಗುಬ್ಬಚ್ಚಿಯಂತಹ ಪ್ರಾಣಿಯ ಚರ್ಮವು ಅಷ್ಟೊಂದು ಮೃದುವಾಗಿರುತ್ತದೆ; ಸ್ವಲ್ಪವೇ ಒತ್ತಿದರೂ ಅದು ಕತ್ತರಿಸಿಬಿಡುತ್ತದೆ.

ಈ ವರದಿಯಲ್ಲಿ ಗಮನಿಸಬೇಕಾದ ಎರಡನೆಯ ವಿಷಯವು 'ಸಿಂಧಿ' ಎಂಬ ಪದಕ್ಕೆ ಸಂಬಂಧಿಸಿದೆ. ಅಂದರೆ ಈ ಪದದ ಅರ್ಥವೇನು? ಮತ್ತು ಹಝ್ರತ್ ವಾಲಿದಾ ಸಾಹಿಬಾ ಅವರ ಮುಂದೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರಿಗೆ ಸಂಬಂಧಿಸಿ ಈ ಪದವನ್ನು ಬಳಸಿದ ಆ ಮಹಿಳೆಯರು ಯಾರು?

ವರದಿಯು ಹೇಳಿದ ಆ ಮಹಿಳೆಯರ ಕುರಿತು ನಾನು ಹಝ್ರತ್ ವಾಲಿದಾ ಸಾಹಿಬಾ ಅವರಿಂದ ವಿಚಾರಿಸಿದೆ. ಅವರು ಹೇಳಿದರು: "ಅವರು ಯಾರೆಂಬುದು ನನಗೆ ತಿಳಿದಿಲ್ಲ. ಅವರು ಹೊರಗಿನಿಂದ ಖಾದಿಯಾನ್‌ಗೆ ಬಂದಿದ್ದರು ಮತ್ತು ತಾವು ಹೋಶಿಯಾರ್‌ಪುರ ಜಿಲ್ಲೆಯ ಐಮಾದಿಂದ ಬಂದಿರುವುದಾಗಿ ಹೇಳುತ್ತಿದ್ದರು ಎಂಬಷ್ಟು ಮಾತ್ರ ನನಗೆ ತಿಳಿದಿದೆ. ಇದರ ಹೊರತಾಗಿ ಅವರ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ."

'ಸಿಂಧಿ' ಎಂಬ ಪದದ ಕುರಿತು ನಾನು ಹೇಳುವುದೇನೆಂದರೆ, ನಾನು ಈ ಪದದ ಕುರಿತು ಮತ್ತಷ್ಟು ಸಂಶೋಧನೆ ಮಾಡಿದ್ದೇನೆ. ಈ ಪದವು ಹಿಂದೀ ಮೂಲದ್ದಾಗಿದ್ದು, ಇದರ ಅರ್ಥ ಸೂಕ್ತ ಸಮಯ, ಸಂಧಿ ಅಥವಾ ಜೋಡಣೆ ಎಂಬುದಾಗಿದೆ.

ಆದ್ದರಿಂದ ಈ ವರದಿ ಸರಿಯಾಗಿದ್ದರೆ, ಬಾಲ್ಯದಲ್ಲಿಯೇ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಕುರಿತು ಕೆಲವೊಮ್ಮೆ ಈ ಪದವನ್ನು ಬಳಸಲಾಗುತ್ತಿದ್ದುದು ಅಲ್ಲಾಹನ ಕಡೆಯಿಂದ ಒಂದು ಇಶಾರಹ್ (ಸೂಚನೆ) ಆಗಿದ್ದಂತೆ ತೋರುತ್ತದೆ. ಅಂದರೆ ಇವರೇ ಸರಿಯಾದ ಸಮಯದಲ್ಲಿ ಬರುವ ವ್ಯಕ್ತಿ; ಅಥವಾ ಅಲ್ಲಾಹನ ಕಡೆಯಿಂದ ಸಂಧಿ ಮತ್ತು ಶಾಂತಿಯ ಸಂದೇಶವನ್ನು ತಂದುಕೊಡುವ ವ್ಯಕ್ತಿ. (ಯದಊಲ್ ಹರ್ಬ್ ಎಂಬ ಹದೀಸ್ ಅನ್ನು ನೋಡಿರಿ.) ಅಥವಾ ಇವರೇ ಜನರನ್ನು ಅಲ್ಲಾಹನೊಂದಿಗೆ ಜೋಡಿಸುವ ವ್ಯಕ್ತಿಯಾಗಿರುವರು. ಅಥವಾ ಇವರೇ ತಮ್ಮ ಜನನದಲ್ಲಿಯೇ ಜೋಡಿಯಾಗಿ, ಅಂದರೆ ಅವಳಿ ಮಕ್ಕಳಲ್ಲಿ ಒಬ್ಬರಾಗಿ ಜನಿಸುವರು. (ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಕುರಿತು ಅವರು ಜೋಡಿಯಾಗಿ ಜನಿಸುವರೆಂಬ ಭವಿಷ್ಯವಾಣಿಯೂ ಇತ್ತು.) ಆದ್ದರಿಂದ ಈ ವರದಿ ಸರಿಯಾಗಿದ್ದರೆ, ಅದು ಆ ಇಶಾರಾತ್‌ಗಳ ಉದ್ದೇಶದಿಂದಲೇ ಇದೆ ಎಂದು ನಾನು ಭಾವಿಸುತ್ತೇನೆ. ವಲ್ಲಾಹು ಅಅ್‌ಲಮ್.

ಇನ್ನು ಯಾವುದಾದರೂ ವಿರೋಧಿಯು ಹಾಸ್ಯವಾಗಿ, ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಹೆಸರೇ 'ಸಿಂಧಿ' ಆಗಿತ್ತು ಎಂಬಂತೆ ಹೇಳುವುದಾದರೆ, ಅದರ ಮೂಲಭೂತ ಉತ್ತರವೆಂದರೆ: ಯಾವುದಾದರೂ ಹೆಸರಿನಲ್ಲಿ ಧರ್ಮವಿರುದ್ಧ ಅಥವಾ ನೈತಿಕತೆಯ ವಿರುದ್ಧವಾದ ಅಂಶವಿಲ್ಲದಿದ್ದರೆ, ಯಾವುದೇ ಗೌರವಾನ್ವಿತ ವ್ಯಕ್ತಿಗೆ ಅದರ ಮೇಲೆ ಆಕ್ಷೇಪಿಸಲು ಸಾಧ್ಯವಿಲ್ಲ. ಹಿಂದಿನ ಅಂಬಿಯಾಗಳ ಹೆಸರುಗಳೂ ಅಂತಿಮವಾಗಿ ಯಾವುದಾದರೂ ಭಾಷೆಯ ಪದಗಳೇ ಆಗಿವೆ. ಕನಿಷ್ಠ ಕೆಲವು ಹೆಸರುಗಳ ಅರ್ಥವೇನು ಎಂಬುದನ್ನು ನಮಗೆ ತಿಳಿದಿಲ್ಲ.

ಆದ್ದರಿಂದ ಒಂದು ವೇಳೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರಿಗೆ ಹಿಂದೀ ಮೂಲದ ಯಾವುದಾದರೂ ಹೆಸರು ದೊರೆತಿದ್ದರೂ, ಅದರಲ್ಲಿ ತೊಂದರೆ ಏನು? ಆದರೆ ವಾಸ್ತವವೆಂದರೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಹೆಸರು 'ಸಿಂಧಿ' ಆಗಿತ್ತು ಎಂಬುದು ಸಂಪೂರ್ಣವಾಗಿ ಆಧಾರರಹಿತ ಮತ್ತು ಸರ್ವಥಾ ಸುಳ್ಳು ಆರೋಪವಾಗಿದೆ.

ಯಾವುದೇ ವಿರೋಧಿ ಅಥವಾ ಮುಆನಿದ್ (ವಿರೋಧಿ)ನ ಬಳಿ ಇದಕ್ಕೆ ಯಾವುದೇ ಸಾಕ್ಷ್ಯವಿದ್ದರೆ, ಅವನು ಧೈರ್ಯದಿಂದ ಮುಂದೆ ಬಂದು ಅದನ್ನು ಮಂಡಿಸಲಿ; ಇಲ್ಲವಾದರೆ ಸುಳ್ಳು ಆರೋಪ ಮಾಡುವವರಿಗಾಗಿ ಶಾಪದ ರೂಪದಲ್ಲಿ ನಿಗದಿಪಡಿಸಿರುವ ಅಲ್ಲಾಹನ ಎಚ್ಚರಿಕೆಗೆ ಹೆದರಲಿ.

ವಾಸ್ತವವಾಗಿ, ಇಡೀ ಜಗತ್ತಿಗೆ ತಿಳಿದಿರುವ ಸಂಗತಿಯೆಂದರೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಹೆಸರು ಮಿರ್ಝಾ ಗುಲಾಮ್ ಅಹ್ಮದ್ ಆಗಿತ್ತು. 1. ಇದೇ ಹೆಸರನ್ನು ಅವರ ತಂದೆ–ತಾಯಿಗಳು ಇಟ್ಟಿದ್ದರು. 2. ಅವರ ತಂದೆಯವರು ಯಾವಾಗಲೂ ಇದೇ ಹೆಸರಿನಿಂದ ಅವರನ್ನು ಕರೆಯುತ್ತಿದ್ದರು. 3. ಎಲ್ಲಾ ಸ್ನೇಹಿತರೂ ಮತ್ತು ವಿರೋಧಿಗಳೂ ಇದೇ ಹೆಸರಿನಿಂದ ಅವರನ್ನು ಸ್ಮರಿಸುತ್ತಿದ್ದರು. 4. 1864ರಿಂದ 1868ರವರೆಗೆ ಸಿಯಾಲ್ಕೋಟ್‌ನಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಉದ್ಯೋಗಕ್ಕೆ ಸಂಬಂಧಿಸಿದ ಕೆಲವು ಸರ್ಕಾರಿ ದಾಖಲೆಗಳನ್ನು ನಾನು ನೋಡಿದ್ದೇನೆ. ಅವುಗಳಲ್ಲಿ ಸಹ ಇದೇ ಹೆಸರು ದಾಖಲಾಗಿತ್ತು. 5. ಇದೇ ಹೆಸರಿನ ಆಧಾರದ ಮೇಲೆ ಅವರ ತಾತನವರು ತಾವು ಸ್ಥಾಪಿಸಿದ ಒಂದು ಗ್ರಾಮದ ಹೆಸರನ್ನು ಅಹ್ಮದಾಬಾದ್ ಎಂದು ಇಟ್ಟಿದ್ದರು. 6. ಅವರ ತಾತನವರ 1876ರಲ್ಲಿ, ಅಂದರೆ ಹಝ್ರತ್ ಸಾಹಿಬ್ ಅವರ ಮಸೀಹತ್ವದ ದಾವಾಗೆ ಹದಿನಾಲ್ಕು ವರ್ಷಗಳ ಮೊದಲು, ನಿಧನವಾದ ನಂತರ, ಕಂದಾಯ ದಾಖಲೆಗಳಲ್ಲಿ ನಮ್ಮ ತಾಯಾ (ದೊಡ್ಡಪ್ಪ) ಮತ್ತು ಹಝ್ರತ್ ಸಾಹಿಬ್ ಅವರ ಹೆಸರಿಗೆ ಆಸ್ತಿಯ ವರ್ಗಾವಣೆ ದಾಖಲಾದಾಗಲೂ ಗುಲಾಮ್ ಅಹ್ಮದ್ ಎಂಬ ಹೆಸರೇ ದಾಖಲಾಗಿತ್ತು. 7. ಸರ್ಕಾರ ಪ್ರಕಟಿಸಿದ ಪಂಜಾಬ್ ಚೀಫ್ಸ್ ಎಂಬ ಪುಸ್ತಕದಲ್ಲಿಯೂ ಇದೇ ಹೆಸರು ಬರೆಯಲ್ಪಟ್ಟಿತ್ತು. 8. ಇತರ ಎಲ್ಲಾ ಸರ್ಕಾರಿ ದಾಖಲೆಗಳು ಮತ್ತು ದಸ್ತಾವೇಜುಗಳಲ್ಲಿಯೂ ಇದೇ ಹೆಸರು ದಾಖಲಾಗುತ್ತಿತ್ತು. 9. ಇತರ ಬಂಧುಗಳು ಮತ್ತು ಸಂಬಂಧಿಕರ ಹೆಸರುಗಳನ್ನೂ ಪರಿಗಣಿಸಿದಾಗ ಇದೇ ಹೆಸರನ್ನು ಸಮರ್ಥಿಸುವ ಸಾಕ್ಷ್ಯ ದೊರೆಯುತ್ತದೆ. 10. ಸ್ವತಃ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ತಮ್ಮ ಪತ್ರಗಳು, ಬರಹಗಳು ಮತ್ತು ಗ್ರಂಥಗಳಲ್ಲಿ ಯಾವಾಗಲೂ ಇದೇ ಹೆಸರನ್ನು ಬಳಸುತ್ತಿದ್ದರು. 11. ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ವಿರುದ್ಧ ಇಂಗ್ಲಿಷ್ ನ್ಯಾಯಾಲಯಗಳಲ್ಲಿ ನಡೆದ ಎಲ್ಲಾ ಮೊಕದ್ದಮೆಗಳಲ್ಲಿ ಅಧಿಕಾರಿಗಳು ಮತ್ತು ವಿರೋಧಿಗಳು ಇಬ್ಬರೂ ಇದೇ ಹೆಸರನ್ನು ಬಳಸುತ್ತಿದ್ದರು. 12. ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ದಾವಾಗೆ ಮೊದಲು, ಅವ್ವಲುಲ್ ಮುಕಫ್ಫಿರೀನ್ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಅವರು ಬರಾಹೀನ್–ಎ–ಅಹ್ಮದಿಯ್ಯಾ ಕುರಿತು ವಿಮರ್ಶೆ ಬರೆದಾಗಲೂ ಅದರಲ್ಲಿ ಇದೇ ಹೆಸರನ್ನು ಬರೆದಿದ್ದರು. 13. ಅಶದ್ದುಲ್ ಮುಆನಿದೀನ್ (ಕಠುವಿರೋಧಿ) ಮೌಲವಿ ಸನಾಉಲ್ಲಾಹ್ ಅಮೃತಸರೀ** ಅವರು ತಮ್ಮ ಎಲ್ಲಾ ವಿರೋಧಾತ್ಮಕ ಬರಹಗಳಲ್ಲಿ ಯಾವಾಗಲೂ ಇದೇ ಹೆಸರನ್ನು ಬಳಸಿದ್ದರು. 14. ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ವಫಾತ್ ಸಂದರ್ಭದಲ್ಲಿ ಅವರ ಕುರಿತು ಟಿಪ್ಪಣಿಗಳನ್ನು ಪ್ರಕಟಿಸಿದ ಅನೇಕ ಹಿಂದೂ, ಸಿಖ್, ಕ್ರೈಸ್ತ ಮತ್ತು ಮುಸ್ಲಿಂ ಪತ್ರಿಕೆಗಳೂ ಇದೇ ಹೆಸರಿನಿಂದ ಅವರನ್ನು ಉಲ್ಲೇಖಿಸಿದ್ದವು. ಈ ಮಹತ್ತರ ಸಾಕ್ಷ್ಯಗಳೆಲ್ಲವೂ ಇದ್ದರೂ, ಯಾವುದಾದರೂ ಮುಆನಿದ್‌ನ ಅಭಿಪ್ರಾಯದಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಹೆಸರು ಗುಲಾಮ್ ಅಹ್ಮದ್ ಆಗಿರದೆ 'ಸಿಂಧಿ' ಅಥವಾ ಬೇರೆ ಯಾವುದೋ ಆಗಿದ್ದರೆ, ನಮ್ಮ ಬಳಿ ಹೇಳುವುದಕ್ಕೆ ಇದಕ್ಕಿಂತ ಬೇರೆ ಯಾವುದೇ ಪರಿಹಾರವಿಲ್ಲ: **ಲಅನತುಲ್ಲಾಹಿ ಅಲಲ್‌ಕಾಝಿಬೀನ್**– ಅಂದರೆ: "ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪವಿರಲಿ." ಈ ವಿಷಯದೊಂದಿಗೆ ಸಂಬಂಧಿಸಿದಂತೆ ವರದಿ ಸಂಖ್ಯೆ 25, 44, 98, 129, 134, 412 ಮತ್ತು 438** ಗಳನ್ನೂ ಗಮನಿಸಬಹುದು. ಅವು ಈ ಚರ್ಚೆಯ ಕುರಿತು ಮತ್ತಿರ್ಜಾ ಸಾಹಿಬ್ ಅವರ ಬಳಿಗೆ ಆಗಾಗ್ಗೆ ಹೋಗುತ್ತಿದ್ದೆ. ಒಮ್ಮೆ ದೊಡ್ಡ ಮಿರ್ಜಾ ಸಾಹಿಬ್ ಅವರು ನನಗೆ, 'ಹೋಗಿ ಗುಲಾಮ್ ಅಹ್ಮದ್ ಅವರನ್ನು ಕರೆದುಕೊಂಡು ಬಾ. ಜಿಲ್ಲೆಗೆ ಒಬ್ಬ ಇಂಗ್ಲಿಷ್ ಅಧಿಕಾರಿಯೊಬ್ಬರು ಬಂದಿದ್ದಾರೆ. ಅವರ ಇಚ್ಛೆಯಿದ್ದರೆ ನಿನ್ನನ್ನು ಯಾವುದಾದರೂ ಉತ್ತಮ ಹುದ್ದೆಯಲ್ಲಿ ಉದ್ಯೋಗಕ್ಕೆ ಸೇರಿಸಿಕೊಡಬಹುದು' ಎಂದು ಕಡೆ ಪುಸ್ತಕಗಳ ರಾಶಿಯನ್ನು ಹಾಕಿಕೊಂಡು ಅದರ ಮಧ್ಯದಲ್ಲಿ ಕುಳಿತು ಏನೋ ಅಧ್ಯಯನ ಮಾಡುತ್ತಿರುವುದನ್ನು ನೋಡಿದೆ. ನಾನು ದೊಡ್ಡ ಮಿರ್ಜಾ ಸಾಹಿಬ್ ಅವರ ಸಂದೇಶವನ್ನು ತಿಳಿಸಿದೆ. ಮಿರ್ಜಾ ಸಾಹಿಬ್ ಬಂದು ಉತ್ತರಿಸಿದರುಷ್ಟು ಬೆಳಕು ಚೆಲ್ಲುತ್ತವೆ.

(ಮುಂದುವರಿಯುವುದು)

ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ

Love for All, Hatred for None

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 05 November 2026, Issue No. 45

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/-) (WEIGHT: 20-50, grms / issue)

ಸೈಯಿದುನಾ ಹರ್ಝ್.ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

* ಬೋಸ್ನಿಯಾದ ಇತಿಹಾಸ ಪ್ರಾಧ್ಯಾಪಕ ಹ್ಯಾರಿಸ್ ಹುಸಿಚ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು, "ಜಲ್ಸಾಗೆ ಬರುವ ಮೊದಲು, ಅಲ್ಲಿ ಸಾವಿರಾರು ಜನರು ಇರುತ್ತಾರೆ ಮತ್ತು ಗೌರವಾನ್ವಿತ ಖಲೀಫರು ನಮ್ಮನ್ನು ಉದ್ದೇಶಿಸಿ ಮಾತನಾಡುತ್ತಾರೆ ಎಂದು ನನಗೆ ತಿಳಿದಿತ್ತು. ನಾನು ಸ್ವಲ್ಪ ಹೆದರುತ್ತಿದ್ದೆ ಮತ್ತು ಕೆಲವು ಅನುಮಾನಗಳನ್ನು ಹೊಂದಿದ್ದೆ, ನನಗೆ ಎಲ್ಲದರ ಬಗ್ಗೆಯೂ ಸಂದೇಹವಿತ್ತು. ಅಹ್ಮದಿಗಳ ಬಗ್ಗೆ, ಇಷ್ಟು ದೊಡ್ಡ ಸಭೆ ಮತ್ತು ಅವರ ಧಾರ್ಮಿಕ ಆಚರಣೆಗಳ ಬಗ್ಗೆ ನನಗೆ ಹೆಚ್ಚು ತಿಳಿದಿಲ್ಲದ ಕಾರಣ, ನನಗೆ ಮೂಲಭೂತ ವಿಷಯಗಳ ಬಗ್ಗೆ ಗೊಂದಲವಿತ್ತು. ಅಂತಹ ಒಳ್ಳೆಯ ಜನರೊಂದಿಗೆ ಸಮಯ ಕಳೆಯಲು ನನಗೆ ಮೊದಲು ಅವಕಾಶ ಸಿಕ್ಕಿರಲಿಲ್ಲ. ಸಭೆಯಲ್ಲಿ ಎಲ್ಲವನ್ನೂ ಯೋಜಿಸಲಾಗಿತ್ತು ಮತ್ತು ಎಲ್ಲರೂ ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ಈ ಭವ್ಯ ಕಾರ್ಯಕ್ರಮವು ಉತ್ತಮವಾಗಿ ಸಂಘಟಿತ ಮತ್ತು ಸುಂದರವಾಗಿ ಆಯೋಜಿಸಲಾಗಿತ್ತು. ಖಲೀಫರ ಮೊದಲ ಭಾಷಣದ ನಂತರ, ನನ್ನ ಮನಸ್ಸು ಸ್ಪಷ್ಟವಾಗಿತ್ತು. ನಾನು ಜನರನ್ನು ಅನುಸರಿಸುತ್ತಿದ್ದೆ, ಅವರು ಹೇಗೆ ಮಾತನಾಡುತ್ತಿದ್ದರು ಮತ್ತು ಏನು ಹೇಳಿದರು, ಅವರ ಪರಸ್ಪರ ಸಂಬಂಧ ಹೇಗಿತ್ತು, ಇದನ್ನೆಲ್ಲಾ ಕೇಳುತ್ತಿದ್ದೆ ಮತ್ತು ನೋಡುತ್ತಿದ್ದೆ. ನನ್ನ ಮುಸ್ಲಿಂ ಸಹೋದರರಲ್ಲಿ ನಾನು ಸುರಕ್ಷಿತವಾಗಿದ್ದೆ, ಯಾರೂ ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡಲಿಲ್ಲ, ಅಥವಾ ಅವರು ನನ್ನನ್ನು ಅಸೂಯೆ ಅಥವಾ ದೂರವಾಗಿಸುವ ಕಣ್ಣುಗಳಿಂದ ನೋಡಲಿಲ್ಲ, ನಾನು ಏನನ್ನಾದರೂ ನೋಡಿದೆ ಅಥವಾ ಟೀಕಿಸಿದೆ ಎಂದು ನನಗೆ ಭಾಸವಾಯಿತು.

ಈ ಎಲ್ಲಾ ವಿಷಯಗಳ ನಡುವೆ, ನನ್ನ ಜೀವನದಲ್ಲಿ ನಾನು ಎಂದಿಗೂ ಅನುಭವಿಸದ ಅಸೂಯೆಪಡುವ ಮತ್ತು ವಿಶಿಷ್ಟವಾದದ್ದು ಖಲೀಫಾರೊಂದಿಗೆ ಭೇಟಿ ಮತ್ತು ಅವರ ನಿಕಟ ಸಂಭಾಷಣೆ. ನನ್ನ ಬೆನ್ನಿನಿಂದ ಹೊರೆಯನ್ನು ತೆಗೆದುಹಾಕಿದಂತೆ ನನಗೆ ನಿರಾಳವಾಯಿತು, ನಾನು ಚಿಂತಿತನಾಗಿದ್ದೆ ಆದರೆ ಈಗ ನಾನು ಚಿಂತೆಗಳಿಂದ ಮುಕ್ತನಾಗಿದ್ದೇನೆ. ನಾನು ತೃಪ್ತಿಯಿಂದ ಹಿಂತಿರುಗುತ್ತಿದ್ದೇನೆ. ನಿಸ್ಸಂದೇಹವಾಗಿ, ನಾನು ಭೇಟಿಯಾದ ಜ್ಞಾನದಿಂದ ಸಮೃದ್ಧವಾಗಿರುವ ಹೊಸ ಮತ್ತು ಒಳ್ಳೆಯ ಜನರಿದ್ದಾರೆ.

* ಬೋಸ್ನಿಯಾದ ಮಹಿಳಾ ಅತಿಥಿ ಎಮಿನಾ ಮುಯನೋವಿಚ್ ಹೇಳುತ್ತಾರೆ: ಸ್ವಯಂಸೇವಕರ ಸಂಘಟನೆ ತುಂಬಾ ಚೆನ್ನಾಗಿತ್ತು. ಮಹಿಳಾ ವಿಭಾಗದಲ್ಲಿ ಅನುವಾದದ ಸಮಸ್ಯೆಯಿಂದಾಗಿ, ಮಹಿಳಾ ವಿಭಾಗದಲ್ಲಿ ಅನುವಾದವಿಲ್ಲದ ಕಾರಣ ನಾವು ಕೆಲವು ಕಾರ್ಯಕ್ರಮಗಳನ್ನು ಕೇಳಲು ಸಾಧ್ಯವಾಗಲಿಲ್ಲ. ನಮ್ಮ ಮಹಿಳಾ ಗುಂಪಿನ ನಾಯಕಿ ನನಗೆ ಹುಝೂರ್ ಅನ್ವರ್(ಅತಬಿಅ) ಅವರ ಭಾಷಣವನ್ನು ಅನುವಾದಿಸಿದರು. ಕಾರ್ಯಕ್ರಮವು ಯಾವಾಗಲೂ ಪವಿತ್ರ ಖುರ್‌ಆನ್‌ನ ಪಠಣ ಮತ್ತು ಅದರ ಅನುವಾದದೊಂದಿಗೆ ಪ್ರಾರಂಭವಾಗುವುದು ನನಗೆ ತುಂಬಾ ಇಷ್ಟವಾಯಿತು.

ಮುಸ್ಲಿಮರು ತಮ್ಮನ್ನು ತಾವು ಸಾಧ್ಯವಾದಷ್ಟು ಶಿಕ್ಷಣ ಮಾಡಿಕೊಳ್ಳಬೇಕು ಮತ್ತು ಅವರ ಜ್ಞಾನವನ್ನು ಆಚರಣೆಗೆ ತರಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಸಲಹೆ ನೀಡಿದರು ಏಕೆಂದರೆ ಇದು ಉಮ್ಮಾದ ಪ್ರಸ್ತುತ ಸ್ಥಿತಿಯನ್ನು ಬದಲಾಯಿಸುವ ಏಕೈಕ ಮಾರ್ಗವಾಗಿದೆ.

ಮರುದಿನ, ಅನುವಾದದಲ್ಲಿ ಮತ್ತೊಂದು ಸಮಸ್ಯೆ ಎದುರಾದಾಗ, ಮಹಿಳೆಯರು ಅನುವಾದವನ್ನು ಕೇಳಲು ಪುರುಷರ ವಿಭಾಗಕ್ಕೆ ಹೋದರು. ಆ ಸಮಯದಲ್ಲಿ, ಶನಿವಾರ, ಹುಝೂರ್ ಅನ್ವರ್(ಅತಬಿಅ) ಅವರು ಮಹಿಳಾ ವಿಭಾಗದಲ್ಲಿದ್ದರು ಮತ್ತು ಮಹಿಳೆಯರು ಈ ಕಾರ್ಯಕ್ಕೆ ತಮ್ಮ ಸಿದ್ಧತೆಯನ್ನು ವ್ಯಕ್ತಪಡಿಸಿದರು. ಅವರ ಸಂಘಟಿತ ನಡವಳಿಕೆ, ಪ್ರಾಮಾಣಿಕತೆಯಿಂದಾಗಿ ಇದನ್ನು ಹೃದಯದಿಂದ ಅನುಭವಿಸಬಹುದಿತ್ತು. ಹುಝೂರ್ ಅನ್ವರ್(ಅತಬಿಅ) ಅವರ ಭಾಷಣವು ಮಹಿಳೆಯರಿಗೆ ತುಂಬಾ ಉಪಯುಕ್ತವಾಗಿತ್ತು. ಪವಿತ್ರ ಪ್ರವಾದಿ ಮುಹಮ್ಮದ್(ಸ) ರವರ ಕಾಲದಲ್ಲಿ ವಾಸಿಸುತ್ತಿದ್ದ ಮಹಿಳೆಯರ ಜೀವನದಿಂದ ಅನೇಕ ಉದಾಹರಣೆಗಳನ್ನು ಅವರು ಉಲ್ಲೇಖಿಸಿದರು.

ಭಾನುವಾರದ ಕಾರ್ಯಕ್ರಮದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಮೂಲಭೂತ ಇಸ್ಲಾಮಿಕ್ ತತ್ವಗಳ ಬಗ್ಗೆ, ಇತರರ ಹಕ್ಕುಗಳನ್ನು ರಕ್ಷಿಸುವ ಬಗ್ಗೆ, ನಾವು ಮಾಡುವ ಎಲ್ಲದರಲ್ಲೂ ನಾವು ಅತ್ಯುತ್ತಮರಾಗಿರಬೇಕು, ಏಕೆಂದರೆ ನಾವು ನಮ್ಮ ಕೈಲಾದಷ್ಟು ಮಾಡಿ ನ್ಯಾಯವನ್ನು ಮಾಡಿದಾಗ ಮಾತ್ರ ನಾವು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಮತ್ತು ಸಮಾಜದಲ್ಲಿ ಶಾಂತಿ ಸ್ಥಾಪನೆಯಾಗುತ್ತದೆ.

ಹುಝೂರ್ ಅನ್ವರ್(ಅತಬಿಅ) ಅವರ ಎಲ್ಲಾ ಮಾತುಗಳು ಪ್ರತಿಯೊಬ್ಬ ಮುಸ್ಲಿಮರಿಗೂ ದಾರಿದೀಪವಾಗಿದೆ. ಈಗ, ದೇವರ ಸಹಾಯದಿಂದ, ನಾವು ಬೋಸ್ನಿಯಾಗೆ ಹಿಂತಿರುಗುತ್ತೇವೆ, ದೇವರು ನಮಗೆ ಸರಿಯಾದ ಮಾರ್ಗವನ್ನು ತೋರಿಸಲಿ ಎಂಬ ಪ್ರಾರ್ಥನೆಯೊಂದಿಗೆ ಹೊಸ ಮತ್ತು ವಿಭಿನ್ನ ಅನುಭವಗಳಿಂದ ಸಮೃದ್ಧರಾಗಿದ್ದೇವೆ.

* ಬೋಸ್ನಿಯಾದ ಅಹ್ಮದಿ ಸ್ನೇಹಿತ ಸಲೇಮ್ ಅಲಿಚ್ ಹೇಳುತ್ತಾರೆ: ಆರೋಗ್ಯ ಕಳಪೆಯಾಗಿದ್ದರೂ ಇಷ್ಟು ದೀರ್ಘ ಪ್ರಯಾಣವನ್ನು ಪ್ರಾರಂಭಿಸಲು ಏಕೈಕ ಕಾರಣವೆಂದರೆ ಖಲೀಫಾ ಅವರನ್ನು ಭೇಟಿಯಾಗುವ ಬಯಕೆ ಮತ್ತು ಈ ಸ್ವೀಕಾರಾರ್ಹ ಸಮಯದಲ್ಲಿ, ದೇವರ ಸಮ್ಮುಖದಲ್ಲಿ ಸ್ವೀಕಾರಾರ್ಹ ಪ್ರಾರ್ಥನೆಗಳ ಆಶೀರ್ವಾದವನ್ನು ಪಡೆಯಲು ಅವರ ಹೆಜ್ಜೆಗುರುತುಗಳಲ್ಲಿ ಪ್ರಾರ್ಥನೆ ಸಲ್ಲಿಸುವ ಹಂಬಲ ಮತ್ತು ಆಕರ್ಷಣೆ. ಈ ಪ್ರಯಾಣದ ಮೊದಲು, ಉರಿಯೂತದಿಂದಾಗಿ ನನ್ನ ಪಾದಗಳಲ್ಲಿ ತೀವ್ರವಾದ ನೋವು ಇತ್ತು ಮತ್ತು ಅದು ಹೋಗುತ್ತಿರಲಿಲ್ಲ, ಆದರೆ ನಾನು ಈ ಪ್ರಯಾಣವನ್ನು ಪ್ರಾರಂಭಿಸಿದಾಗಿನಿಂದ, ನನ್ನ ಪಾದಗಳಲ್ಲಿ ಯಾವುದೇ ನೋವು ಇರಲಿಲ್ಲ ಎಂದು ತೋರುತ್ತದೆ ಎಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ.

(ಮುಂದುವರಿಯುವುದು)

(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)

ಪ್ರತಿಯೊಬ್ಬರೂ, ಅವರು ಚಿಕ್ಕವರಾಗಿರಲಿ ಅಥವಾ ದೊಡ್ಡವರಾಗಿರಲಿ, ತಮ್ಮ ಮಕ್ಕಳ ಸತ್ಚಾರಿತ್ರ್ಯ ಮತ್ತು ಸತ್ಕಾರ್ಯಗಳ ತರಬೇತಿಯಲ್ಲಿ ತೊಡಗಿಕೊಂಡು, ತಮ್ಮ ಮಕ್ಕಳನ್ನು ತಮಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇಸ್ಲಾಮ್‌ಗೆ ಸಮರ್ಪಿತರನ್ನಾಗಿ ಮಾಡಲು ಪ್ರಯತ್ನಿಸಿದರೆ, ಮುಸ್ಲಿಮರಲ್ಲಿ ಎಂದಿಗೂ ಅವನತಿ ಉಂಟಾಗುವುದಿಲ್ಲ. ರಾಷ್ಟ್ರೀಯ ಅಧಃಪತನಕ್ಕೆ ಪ್ರಮುಖ ಕಾರಣವೇನೆಂದರೆ, ಮಕ್ಕಳ ತರಬೇತಿಯ ಕಡೆಗೆ ಗಮನ ನೀಡಲಾಗುವುದಿಲ್ಲ. ಇದರ ಪರಿಣಾಮವಾಗಿ ಕೇವಲ ಜನಸಂಖ್ಯೆಯ ಹೆಚ್ಚಳವು ಯಾವುದೇ ಪ್ರಯೋಜನವಿಲ್ಲದೆ ಉಳಿಯುತ್ತದೆ ಮತ್ತು ಒಂದು ಜನಾಂಗದ ಪ್ರಭಾವ ಹಾಗೂ ಗೌರವ ಸಂಪೂರ್ಣವಾಗಿ ನಶಿಸಿಹೋಗುತ್ತದೆ. ಆದ್ದರಿಂದ ನಾವು ಗಮನ ಹರಿಸಬೇಕಾದ ನಿಜವಾದ ವಿಷಯವೆಂದರೆ, ನಮ್ಮ ಮುಂದಿನ ತಲೆಮಾರುಗಳು ಸತ್ಕಾರ್ಯ ಮತ್ತು ತಕ್ವಾದ ಕ್ಷೇತ್ರದಲ್ಲಿ ನಮಗಿಂತಲೂ ವೇಗವಾಗಿ ಮುನ್ನಡೆಯುವಂತಾಗಬೇಕು. ಏಕೆಂದರೆ ಇದೇ ಆ ಗುಣವಾಗಿದೆ, ಅದರ ಕುರಿತು ಹರ್ಝ್.ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಹೆಮ್ಮೆಪಡಬಹುದು. ಕೇವಲ ಸಂಖ್ಯೆಯ ಹೆಚ್ಚಳವು ಯಾರನ್ನಾದರೂ ತೃಪ್ತಿಪಡಿಸಲು ಸಾಕಾಗುವಂತಹ ವಿಷಯವಲ್ಲ."

(ತಫ್ಸೀರ್ ಕಬೀರ್, ಸಂಪುಟ 14, ಪುಟ 205–206)

----------****----------

ಸೂಚನೆ:: ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

MUSLIM TELEVISION AHMADIYYA INTERNATIONAL
www.mta.tv

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

NATIONAL TOLL FREE : 1800–103–2131

ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.